ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ-೧೧ ಸಂಚಿಕೆ-೧೩ ಮಾರ್ಚ್ ೨೬, ೧೯೮೯ ರೂ. ೧-೦೦



ಪ್ರಜಾಪ್ರಭುತ್ವದ ಗೆಲುವು

ಠಕ್ಕರ್ ಆಯೋಗದ ವರದಿ ಪ್ರಕಟಣೆಗೆ ಮಣಿದ ರಾಜೀವ್‌ಗಾಂಧಿ

ಪ್ರಜಾಪ್ರಭುತ್ವಕ್ಕು ಸರ್ವಾಧಿಕಾರಿ ಶಕ್ತಿಗಳಿಗೂ ನಮ್ಮ ದೇಶದಲ್ಲಿ ನಿರಂತರ ಸಮರ ನಡೆದಿದೆ. ಇತ್ತೀಚೆಗೆ, ಈ ಸಮರ ಬಿರುಸಾಗುತ್ತಿದೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನೆಲ್ಲಾ ಗಾಳಿಗೆ ತೂರುವ, ಏಕಪಕ್ಷ ಸರ್ವಾಧಿಕಾರ ಸ್ಥಾಪನೆಗೆ ನಡೆದ ಪ ಯತ್ನವೊಂದು ಕಡೆ. ದಶಕ ದಶಕಗಳ ಹೋರಾಟ ಹಾಗೂ ಜನ ಸಮುದಾಯದ ತ್ಯಾಗ ಬಲಿದಾನಗಳಿಗೆ ದಕ್ಕಿದ ಪ ಜಾ ಪ ಭುತ್ವದ ಹಕ್ಕುಗಳನ್ನು ಸೀಮಿತಗೊಳಿಸಲು, ನಾಶ ಮಾಡಲು ಬಿಡೆವು: ಪ ಜಾ ಪ ಭುತ್ವೀಯ ಹಕ್ಕುಗಳನ್ನು ಸೀಮಿತಗೊಳಿಸುವುದಿರಲಿ, ವಿಸ್ತರಿಸುವುದು ಎಲ್ಲಾ ಜನಸಮುದಾಯಕ್ಕೆ ವಿಸ್ತರಿಸುವುದು ನಮ್ಮ ಗುರಿ ಎನ್ನುವ ಪ ಜಾಸತ್ತಾತ್ಮಕ ಶಕ್ತಿಗಳೊಂದು ಕಡೆ. ದಿನ ದಿನವೂ ನಡೆದಿರುವ ಈ ಹೋರಾಟದಲ್ಲಿ ಠಕ್ಕರ್ ಆಯೋಗದ ವರದಿಯ ಪ ಸಂಗವೊಂದು ಇತ್ತೀಚಿನ ಘಟನೆ. ಇಂದಿರಾಗಾಂಧಿಯವರ ಧಾರುಣ ಕೊಲೆಯ ಹಿನ್ನೆಲೆಯನ್ನು ತನಿಖೆ ಮಾಡಲು ನೇಮಿಸಿದ ಆಯೋಗದ ವರದಿ ಸಂವಿಧಾನದತ್ತವಾದ ಅನೇಕ ಹಕ್ಕುಗಳಿಗೆ ಸವಾಲಾಗಿ ಪರಿಣಮಿಸಿದ್ದು ಕಾಡುತ್ತಿರುವ ಅಪಾಯಕ್ಕೊಂದು ಜ್ವಲಂತ ಉದಾಹರಣೆ.

ಈ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಮೇಲೆ ಅದರೊಳಗೆ ಅಡಕವಾಗಿರುವ ಸಂಗತಿಗಳ ಮಾಹಿತಿಗಳ ಸ್ವಾಮ್ಯ ಯಾರದು? ದೇಶದ ರಕ್ಷಣೆಯ ಎಲ್ಲ ವ್ಯೂಹಗಳನ್ನು ಭೇದಿಸಿ ದೇಶದ ಎಲ್ಲ ತೀರ್ಮಾನಗಳ ಕೇಂದ್ರವಾದ ಪ್ರಧಾನ ಮಂತ್ರಿಯ ಕಛೇರಿಯನ್ನು ವ್ಯಾಪಿಸಿದ ಹಾಗೂ ಪ್ರಧಾನಮಂತ್ರಿಯನ್ನೇ 'ಕೊಲೆಗೆಯ್ದ ಈ ಕೃತ್ಯದಲ್ಲಿ ಪಾಲುಗೊಂಡವರು ಯಾರು? ಇದರ ಬೆನ್ನ ಹಿಂದಿರುವವರು ಯಾರು? ದೇಶದ ಸಂರಕ್ಷಣಾ ವ್ಯೂಹಗಳು ವಿಫಲವಾದದ್ದೇಕೆ? ದೇಶದ ರಕ್ಷಣೆಯ ಈ ಪ್ರಮುಖ ಪ್ರಶ್ನೆಗಳಿಗೆ ದೇಶದ ಜನತೆಗೆ ಉತ್ತರ ಕೊಡುವ ಜವಾಬ್ದಾರಿ ಯಾರದು?

ಈ ಪ್ರಸಂಗಕ್ಕೆ ಸಂಬಂಧಪಟ್ಟ ಮಾಹಿತಿ ಅದು ಎಷ್ಟೇ ಇರಲಿ ಯಾವ ರೀತಿಯದ್ದೇ ಇರಲಿ-ಯಾರಿಗೆಲ್ಲಾ ಸಿಗಬೇಕು? ಎನ್ನುವ ಪ್ರಜಾಪ್ರಭುತ್ವದ ಮೂಲ ಪ್ರಶ್ನೆಗಳು ಇದರಲ್ಲಡಗಿದೆ.

ಠಕ್ಕರ್ ಆಯೋಗ ಅಥವಾ ಯಾವುದೇ ಸಂಗ್ರಹಿಸಿದ ಮಾಹಿತಿ ಹಾಗೂ ತೀರ್ಮಾನಗಳನ್ನು ವರದಿ ಸಲ್ಲಿಸಿದ ಕೂಡಲೇ ರಾಷ್ಟ್ರದ ಕಾರ್ಯಾಂಗವಾದ ಮಂತ್ರಿ ಮಂಡಲಕ್ಕೆ ಹಾಗೂ ಕಾರ್ಯಾಂಗ, ಸಂಸತ್ತು, ನ್ಯಾಯಾಂಗ ಇವುಗಳೆಲ್ಲದರ ಪ್ರಮುಖನಾದ ರಾಷ್ಟ್ರಪತಿಗೆ ವರದಿಯಾಗಬೇಕು ಮತ್ತು ಅವರ ಮುಂದಕ್ಕೆ ಬರಬೇಕು. ನಂತರ ದೇಶದ ಎಲ್ಲ ಹಾಗುಹೋಗುಗಳಿಗೆ ಜವಾಬ್ದಾರಿಯಾದ ಸಂಸತ್ತಿನ ಮುಂದೆ ಮಂಡಿಸಲ್ಪಡಬೇಕು ಹಾಗೂ ನ್ಯಾಯಾಂಗಕ್ಕೆ ಅವಶ್ಯವಿರುವ ಎಲ್ಲ ಸಂದರ್ಭಗಳಲ್ಲೂ ಲಭ್ಯವಿರಬೇಕು. ಇದು ಪ್ರಜೆಗಳ ಪ್ರಭುತ್ವ ಕಾರ್ಯ ನಿರ್ವಹಿಸುವ ರೀತಿ.

ಆದರೆ ಠಕ್ಕರ್ ಆಯೋಗದ ವಿಷಯದಲ್ಲಿ ನಡೆದದ್ದೇನು? ಪ್ರಪ್ರಥಮ

▶ ಪುಟ 8

ಸಿ.ಪಿ.ಐ.(ಎಂ) ಬಿಟ್ಟು ಉಳಿದ ವಿರೋಧ ಪಕ್ಷಗಳು ಖಲಿಸ್ತಾನವನ್ನು ಬೆಂಬಲಿಸುತ್ತಿವೆ ಎಂದು ಸಂಸತ್ತಿನಲ್ಲಿ ಹೇಳಿದ ಮೂರು ದಿನಗಳ ನಂತರ ಪ್ರಧಾನ ಮಂತ್ರಿಗಳು ಪಂಜಾಬ್‌ಗೆ ಸಂಬಂಧಪಟ್ಟಂತೆ "ಪ್ಯಾಕೇಜ್" ಪರಿಹಾರ ಘೋಷಿಸಿದರು. ಇದರ ಅರ್ಥವೇನು ಎಂದು ತಿಳಿಯುವುದು ಕಷ್ಟ. ಇದು ಪಂಜಾಬಿನಲ್ಲಿ ಶಾಂತಿ ನೆಲೆಸುವಂತೆ ಮಾಡಲಿಕ್ಕಾಗಿ ಎನ್ನುವುದಾದರೆ ಇದರಿಂದ ಪೂರ್ತಿಯಾಗಿ ಉದ್ದೇಶ ಈಡೇರುವುದಿಲ್ಲ ಎಂದೇ ಹೇಳಬೇಕಾಗುತ್ತದೆ.

ಎಂದು ಪ್ರಧಾನಮಂತ್ರಿಗಳು ಹೇಳಿಕೊಂಡಿರುವುದನ್ನು ಮಾತ್ರ ಒಪ್ಪಲು ಸಾಧ್ಯವಿಲ್ಲ.

ಹಲವು ಭಯೋತ್ಪಾದಕರುಗಳನ್ನು ಹಿಡಿಯಲಾಗಿದೆ, ಹಲವರು ಕೊಲ್ಲಲ್ಪಟ್ಟಿದ್ದಾರೆ ಎಂಬುದು ನಿಜ. ಆದರೆ ಅವರಿಗೆ ಮಾರ್ಗದರ್ಶನ ನೀಡುವ ಕೇಂದ್ರ ಹಾಗೇ ಇದೆ. ಹೊಸಬರನ್ನು ಸೇರಿಸಿಕೊಳ್ಳುವ ಪಾಕಿಸ್ತಾನದಿಂದ ಶಸ್ತ್ರ ಪೂರೈಕೆಯ ಕೆಲಸವೂ ಮುಂದುವರೆದಿದೆ. ಮಾಸ್ಟರ್ ತಾರಾಸಿಂಗ್ ಮಗಳ ಭಯಾನಕ ಕೊಲೆ, ಸಿ.ಪಿ.ಐ.(ಎಂ), ಸಿ.ಪಿ.ಐ. ಕಾರ್ಯಕರ್ತರ ಮೇಲೆ ಸತತ ಹಲ್ಲೆಗಳು ಇದಕ್ಕೆ ಸಾಕ್ಷಿ.

ಹೇಳಿಕೆ, ಪ್ಯಾಕೇಜ್‌ಗಳಿಂದಷ್ಟೇ ಪಂಜಾಬ್ ಸಮಸ್ಯೆ ಪರಿಹಾರ ಕಾಣದು

ಜೋಧಪುರ ಬಂಧಿಗಳ ಬಿಡುಗಡೆ, ಪಂಜಾಬಿನೊಳಗೆ ವಿದೇಶೀಯರ ಪ್ರವೇಶಕ್ಕೆ ಇದ್ದ ಮಿತಿಗಳ ರದ್ಧತಿ, ಗಲಭೆ ಪೀಡಿತ ಪ್ರದೇಶ ಕಾನೂನು, ವಿಶೇಷ ಸಶಸ್ತ್ರ ಸೇನಾ ಕಾನೂನುಗಳನ್ನು ಮೂರು ಜಿಲ್ಲೆಗಳಿಗಷ್ಟೇ ಸೀಮಿತಗೊಳಿಸಿದ್ದು ಮತ್ತು ರಾಷ್ಟ್ರೀಯ ಭದ್ರತಾ ಶಾಸನದ ತಿದ್ದುಪಡಿಯನ್ನು ವಾಪಸು ಪಡೆದದ್ದು ಇವು ಕೆಲವು ಅನಗತ್ಯ ಕಿರಿಕಿರಿಯುಂಟು ಮಾಡುತ್ತಿದ್ದ ಸಂಗತಿಗಳನ್ನು ಪ್ರಧಾನ ಮಂತ್ರಿಗಳ ಈ ಘೋಷಣೆ ಸರಿಪಡಿಸಿದೆ ಎಂಬುದೇನೋ ಸರಿ. ವಿರೋಧ ಪಕ್ಷಗಳು ಮೂರು ವರ್ಷಗಳಿಂದ ಇದನ್ನು ಒತ್ತಾಯಿಸುತ್ತಾ ಬಂದಿದೆಯೆಂಬುದನ್ನು ಗಮನಿಸಬೇಕು. ಜೋಧಪುರ ಬಂಧಿಗಳ ಪ್ರಶ್ನೆಯನ್ನು ಚೌಕಾಸಿಯ ಒಂದು ದಾಳವಾಗಿ ಸರ್ಕಾರ ಬಳಸುವುದಕ್ಕಾಗಿ ಇದುವರೆಗೂ ಮುಂದೂಡಿತು. ವಿದೇಶಿಯರ ಪ್ರವೇಶದ ಮೇಲಿನ ಮಿತಿ ಭಯೋತ್ಪಾದಕರ ಚಟುವಟಿಕೆಗಳನ್ನೇನೂ ಮಿತಿಗೊಳಿಸಿರಲಿಲ್ಲ. ಬದಲಿಗೆ ನಾಲ್ಕು ಲಕ್ಷಕ್ಕೂ ಹೆಚ್ಚು ವಿದೇಶಗಳಲ್ಲಿರುವ ಪಂಜಾಬೀ ಕುಟುಂಬಗಳ ಸದಸ್ಯರಿಗೆ ತೊಂದರೆಯುಂಟು ಮಾಡುತ್ತಿತ್ತಷ್ಟೆ. ಇನ್ನೂ ಕೆಲವು ಕಿರಿಕಿರಿಗಳನ್ನು ನಿವಾರಿಸುವುದಾಗಿ ಪ್ರಧಾನಿಗಳು ಹೇಳಿದ್ದಾರೆ. ಇವನ್ನು ಎಲ್ಲರೂ ಸ್ವಾಗತಿಸಿದ್ದಾರೆ.

ಆದರೆ ತೀವ್ರಗಾಮಿಗಳ ರಾಜಕೀಯ ಕೊಂಡಿಗಳು ಮುರಿದಿವೆ, ಭಯೋತ್ಪಾದಕರೀಗ ರಾಜಕೀಯ ಶಕ್ತಿಯಾಗಿ ಉಳಿದಿಲ್ಲ, ಭಯೋತ್ಪಾದಕರು ಮತ್ತು ಪ್ರತ್ಯೇಕವಾದಿಗಳನ್ನು ಜನರಿಂದ ದೂರ ಸರಿಸಲಾಗಿದೆ

ಪ್ರಧಾನ ಮಂತ್ರಿಗಳು ಪಂಜಾಬಿನಲ್ಲಿ ಮುಗ್ಧಜನಗಳ ಕೊಲೆ ನಡೆಯದ ದಿನವೇ ಇಲ್ಲ ಎಂಬುದನ್ನು ಗಮನಿಸಿದಂತೆ ಕಾಣುವುದಿಲ್ಲ.

ಸನ್ನಿವೇಶದ ಇನ್ನೊಂದು ಗಂಭೀರ ಅಂಶವೆಂದರೆ ಪೊಲೀಸರು ಪಟ್ಟಭದ್ರ ಹಿತಾಸಕ್ತಿ ಬೆಳೆಸಿಕೊಂಡು ಜನರಿಂದ ಬಲಾತ್ಕಾರದಿಂದ ಹಣ ಸಂಗ್ರಹ, ಮಹಿಳೆಯರ ಮೇಲೆ ಕೈ ಮಾಡುವುದು ಮುಂತಾದ ಕೃತ್ಯಗಳ ಮೂಲಕ ಸಾಮಾನ್ಯ ಪರಿಸ್ಥಿತಿ ನೆಲೆಗೊಳ್ಳುವಲ್ಲಿ ಅಡ್ಡಿಯಾಗುತ್ತಿದ್ದಾರೆ. "ಬ್ಲಾಕ್ ಥಂಡರ್" ಕಾರ್ಯಾಚರಣೆಯ ನಂತರ ತೀವ್ರಗಾಮಿಗಳನ್ನು ಜನರಿಂದ ದೂರ ತಳ್ಳುವುದು ಸಾಧ್ಯವಾಗಿತ್ತು. ಆದರೆ ಸರ್ಕಾರ ಈ ಸನ್ನಿವೇಶ ಬಳಸಿಕೊಳ್ಳುವ ಬದಲು ಮೊದಲಿನಂತೆ ಆಡಳಿತ ಕ್ರಮಗಳನ್ನೇ ಅವಲಂಬಿಸಿತು. ತೀವ್ರಗಾಮಿಗಳನ್ನು ಅವಲಂಬಿಸಿದ್ದ ಸಮಾಜಘಾತುಕ ಶಕ್ತಿಗಳ ಕಿರುಕುಳಗಳಿಂದಾಗಿ ಜನ ಸಾಮಾನ್ಯರಲ್ಲಿ ತೀವ್ರಗಾಮಿಗಳ ಬಗ್ಗೆ ದ್ವೇಷ ಬೆಳೆಯುವಂತಾಯಿತು. ಆದರೆ ಇತ್ತ ಆಡಳಿತದ ವರ್ತನೆಗಳು, ಜನತೆಯ ಪ್ರಾಮಾಣಿಕ ಬೇಡಿಕೆಗಳನ್ನು ಈಡೇರಿಸಲು ಕೇಂದ್ರ ಸರ್ಕಾರದ ನಕಾರ ಕೇಂದ್ರ ಸರ್ಕಾರದ ಬಗ್ಗೆಯೂ ಜನರಲ್ಲಿ ಅಷ್ಟೇ ದ್ವೇಷ ಬೆಳೆಸಿದೆ.

ಈ ವಾಸ್ತವತೆಯನ್ನು ಪ್ರಧಾನಮಂತ್ರಿ ಅರಿತಂತಿಲ್ಲ. ಬದಲಿಗೆ ರಾಜ್ಯದಲ್ಲಿ ತನಗೆ ಭಾರೀ ಸ್ಪಂದನ ದೊರೆತಿದೆ ಎನ್ನುತ್ತಾ ತನ್ನ ಸಭೆಗಳಲ್ಲಿ ಭಾಗವಹಿಸುವ ಜನರ ಸಂಖ್ಯೆಯನ್ನು ಉದಾಹರಿಸಿದ್ದಾರೆ. ಅವರನ್ನು

▶ ಪುಟ 8

ಪ್ರತಿಭಟಿಸಲೂ ಸ್ವಾತಂತ್ರ್ಯವಿಲ್ಲವೆ?

ಬೆಲೆಯೇರಿಕೆ ಪ್ರತಿಭಟಿಸಲೆತ್ನಿಸಿದ ಸಿ.ಐ.ಟಿ.ಯು. ಕಾರ್ಯಕರ್ತರ ಬಂಧನ

ರಾಜೀವ್‌ಗಾಂಧಿ ಸರ್ಕಾರದ ಬೆಲೆ ಏರಿಕೆ ನೀತಿಯನ್ನು ಪ್ರತಿಭಟಿಸಿ ಮಾರ್ಚ್ 21ರಂದು ರಾಜ್ಯದಾದ್ಯಂತ ಬೆಲೆಯೇರಿಕೆ ವಿರೋಧಿ ದಿನಾಚರಣೆಗೆ ಹುಬ್ಬಳ್ಳಿಯಲ್ಲಿ ಜರುಗಿದ ಸಿ.ಐ.ಟಿ.ಯು. 5 ನೇ ರಾಜ್ಯ ಸಮ್ಮೇಳನವು ಕರೆ ನೀಡಿತ್ತು. ಇದರ ಪ್ರಕಾರ ಅಂದು ಸಂಜೆ ಬೆಂಗಳೂರಿನಲ್ಲಿ ಚಿಕ್ಕಲಾಲ್ ಬಾಗ್‌ನಿಂದ ರಾಜಭವನಕ್ಕೆ ಮೆರವಣಿಗೆಯೊಂದನ್ನು ಏರ್ಪಡಿಸಲಾಗಿತ್ತು. ಆದರೆ ಮೆರವಣಿಗೆ ಹೊರಡುವ ಪ್ರಾರಂಭದಲ್ಲೇ ಪೊಲೀಸರು ಎಲ್ಲಾ ಕಾರ್ಯಕರ್ತರನ್ನು ಆಶ್ಚರ್ಯಕರ ರೀತಿಯಲ್ಲಿ ಬಂಧಿಸಿದರು. ವಿಧಾನಸಭಾ ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ವಿಧಾನ ಸೌಧದ ಸುತ್ತ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ವಿಧಿಸಲಾಗಿತ್ತು. ಸಾಮಾನ್ಯವಾಗಿ ವಿಧಾನಸೌಧವನ್ನು ಸಮೀಪಿಸಿದಾಗ ಕೆ.ಆರ್.ವೃತ್ತ ಅಥವಾ ಬಸವೇಶ್ವರ ವೃತ್ತದ ಬಳಿ ತಡೆದು ಬಂಧಿಸಲಾಗುತ್ತಿತ್ತು. ಕೆಲವೊಮ್ಮೆ ಕಬ್ಬನ್ ಪಾರ್ಕ್‌ನೊಳಗೆ ಸಹ ಪ್ರವೇಶಿಸಲು ಅವಕಾಶ ನೀಡಲಾಗುತ್ತಿತ್ತು. ಈ ಬಾರಿ ಪೊಲೀಸರ ದಿಢೀರ್ ಕಾರ್ಯಾಚರಣೆ ಅನಿರೀಕ್ಷಿತವಾಗಿತ್ತು.

ರಾಜ್ಯ ಜನತಾದಳ ಸರ್ಕಾರವು ಸಹ ಶಾಂತಿಯುತ ಪ್ರತಿಭಟನೆಗೆ ಅಡಚಣೆಯನ್ನುಂಟುಮಾಡುವ ರೀತಿಯಲ್ಲಿ ವರ್ತಿಸುತ್ತಿರುವುದು ಕಳವಳಕಾರಿಯಾಗಿದೆ. ಇದರಿಂದಾಗಿ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕುಗೊಳಿಸಿದಂತಾಗುತ್ತದೆ. ಈಗಾಗಲೇ ಕಾರ್ಮಿಕರ ಹೋರಾಟಗಳಲ್ಲಿ ಪೊಲೀಸರ ಅನಗತ್ಯ ಹಸ್ತಕ್ಷೇಪ ಹೆಚ್ಚುತ್ತಿರುವುದು ಹಾಗೂ ಕಾರ್ಮಿಕರಿಗೆ ಪ್ರತಿಕೂಲವಾದ ಕಾರ್ಮಿಕ ನೀತಿಯನ್ನು ಅನುಸರಿಸುತ್ತಿರುವುದು ಕಂಡು ಬಂದಿದೆ. ಆದ್ದರಿಂದ ಜನತಾದಳ ಸರ್ಕಾರವು ತನ್ನ ಪೊಲೀಸ್ ಮತ್ತು ಕಾರ್ಮಿಕ ನೀತಿಯ ಬಗ್ಗೆ ಗಂಭೀರವಾಗಿ ಪುನರ್‌ವಿಮರ್ಶಿಸಿ ಸರಿಪಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ.

ಮಾರ್ಚ್ 21ರಂದು ಸುಮಾರು 300ಕ್ಕೂ ಹೆಚ್ಚು ಸಿ.ಐ.ಟಿ.ಯು. ಕಾರ್ಯಕರ್ತರು ಬೆಂಗಳೂರಿನಲ್ಲಿ ಬಂಧಿಸಲ್ಪಟ್ಟು ನಂತರ ಬಿಡುಗಡೆ ಮಾಡಲಾಗಿದೆ. ಸಿ.ಐ.ಟಿ.ಯು. ರಾಜ್ಯ ಸಮಿತಿ ಅಧ್ಯಕ್ಷರಾದ ಕಾ॥ ಎಸ್.ಸೂರ್ಯನಾರಾಯಣರಾವ್, ಜಿಲ್ಲಾ ಪದಾಧಿಕಾರಿಗಳಾದ ಕಾ॥ ಆರ್. ಶ್ರೀನಿವಾಸ್, ಕಾ॥ ಕೆ.ವಿ.ಶ್ರೀನಿವಾಸ್, ಕಾ॥ ಜಾನ್‌ವಿನ್ಸೆಂಟ್ ಮತ್ತಿತರ ನಾಯಕರು ಬಂಧನಕ್ಕೊಳಗಾಗಿದ್ದರು. ಪೊಲೀಸ್ ಠಾಣೆಗಳಲ್ಲಿಯೇ ಸಭೆಗಳನ್ನು ನಡೆಸಿ ಕೇಂದ್ರ ಸರ್ಕಾರದ ಕೊರತೆ ಮುಂಗಡಪತ್ರ, ರೈಲ್ವೆ ಸಾಗಾಣಿಕೆ, ವೆಚ್ಚದ ಏರಿಕೆ ಹಾಗೂ ಪಡಿತರ ಸಾಮಗ್ರಿಗಳ ಬೆಲೆಗಳ ಏರಿಕೆಯನ್ನು ಖಂಡಿಸಲಾಯಿತು. ರಾಜ್ಯಕ್ಕೆ ಅಗತ್ಯ ಪ್ರಮಾಣದಲ್ಲಿ ಆಹಾರಧಾನ್ಯ ಸರಬರಾಜು ಮಾಡುವಂತೆ ಸಹ ಒತ್ತಾಯಿಸಲಾಯಿತು. ಕೃಷಕ ಬೆಲೆ ಸೂಚ್ಯಂಕದ ಮೂಲ ವರ್ಷವನ್ನು 1960ರಿಂದ 1982ಕ್ಕೆ ವರ್ಗಾಯಿಸುವುದನ್ನು ಟೀಕಿಸಲಾಯಿತು. ರಾಜ್ಯದ ಜನತಾದಳವು ಸರ್ಕಾರವು ಇತ್ತೀಚೆಗೆ ಹಾಲಿನ ದರ ಏರಿಸಿರುವುದನ್ನು ಸಹ ಖಂಡಿಸಿ ಕೇಂದ್ರದ ಮಲತಾಯಿ ಧೋರಣೆಯ ವಿರುದ್ಧ ಹೋರಾಡಲು ಕರ್ನಾಟಕದ ಜನತೆಯನ್ನು ಒಟ್ಟುಗೂಡಿಸಿ ನೆರೆಸಬೇಕೆಂದು ಕರೆ ನೀಡಲಾಯಿತು. ರಾಜ್ಯಪಾಲರಿಗೆ ಮನವಿಯೊಂದನ್ನು ಸಹ ಸಲ್ಲಿಸಲಾಗಿದೆ.

ಆರ್ಥಿಕ ಸಮೀಕ್ಷೆಯ ಕಸರತ್ತು

ನಮ್ಮ ಆರ್ಥಿಕ ವ್ಯವಸ್ಥೆ ಬಹಳ 'ಚುರುಕಾಗಿ' ಮುನ್ನಡೆಯುತ್ತಿದೆ ಎಂದಿದೆ ಭಾರತ ಸರ್ಕಾರದ ವಾರ್ಷಿಕ ಆರ್ಥಿಕ ಸರ್ವೇಕ್ಷಣೆ. ಜನ ಸಾಮಾನ್ಯರಿಗೆ ಏನನ್ನೂ ನೀಡದ, ವಿದೇಶೀ ಸಾಲದ ಬಲೆಯತ್ತ ಶರವೇಗದಲ್ಲಿ ಧಾವಿಸಿರುವ ನಮ್ಮ ಆರ್ಥಿಕ 'ಚುರುಕಾಗಿದೆ' ಎಂದರೇನು? ಇದು ಕಳೆದ ನಾಲ್ಕು ದಶಕಗಳಲ್ಲಿ ನಮ್ಮನ್ನಾಳುವವರು ಹಿಡಿದಿರುವ ದಾರಿಗೆ ಅಡಗಿಕೊಂಡಿರುವ ತೀವ್ರ ಬಿಕ್ಕಟ್ಟನ್ನು ಮರೆಮಾಚಲು ವರ್ಣನೆಯಷ್ಟೆ.

ಈ ದೇಶದ ಜನಸಾಮಾನ್ಯರು ಈಗ ತಮ್ಮ ಅನುಭವದಿಂದಲೇ ತಿಳಿದಿರುವಂತೆ ಪ್ರತಿವರ್ಷ ಫೆಬ್ರವರಿ ಕೊನೆಯಲ್ಲಿ ಒಂದು ಬಿಕ್ಕಟ್ಟಮಯ ಹೊರೆಗಳನ್ನು ಜನಸಾಮಾನ್ಯರ ಮೇಲೆ ಮುಂದಿನ ಒಂದು ವರ್ಷದಲ್ಲಿ ಹೇಗೆ ವರ್ಗಾಯಿಸುವುದೆಂಬ ಕಸರತ್ತು ನಡೆಯುತ್ತದೆ. ಇದನ್ನು ನಮ್ಮ ಆಳರಸರು ಬಜೆಟ್ ಅನ್ನುತ್ತಾರೆ. ಇದಕ್ಕೆ ಮೊದಲು ದೇಶದ ಪರಿಸ್ಥಿತಿ ಬಿಂಬಿಸುತ್ತದೆನ್ನುವ 'ಆರ್ಥಿಕ ಸರ್ವೇಕ್ಷಣೆ'ಯನ್ನು ಜನರ ಮುಂದಿಡಲಾಗುತ್ತದೆ. ಇದರ ಉದ್ದೇಶ ದೇಶದ ಪರಿಸ್ಥಿತಿಯ ವಸ್ತುನಿಷ್ಠ ವಿಶ್ಲೇಷಣೆಯಂತೂ ಅಲ್ಲವೇ ಅಲ್ಲ. ಸರ್ಕಾರ ಅನುಸರಿಸಿಕೊಂಡು ಬಂದ ದಾರಿ ಎಷ್ಟೊಂದು ಸರಿ ಎಂದು ಸಮರ್ಥಿಸಿಕೊಳ್ಳುವುದೇ ಇದರ ಮುಖ್ಯ ಉದ್ದೇಶ.

ಈ ಬಾರಿಯ ಆರ್ಥಿಕ ಸರ್ವೇಕ್ಷಣೆಯೂ ಸಹಜವಾಗಿಯೇ ಇದಕ್ಕಿಂತ ಭಿನ್ನವಾಗಿಲ್ಲ. ನಮ್ಮ ಆರ್ಥಿಕದಲ್ಲಿ ಮುಖ್ಯವಾಗಿ ಎರಡು ಮೂಲಭೂತ ಶಕ್ತಿಗಳಿವೆಯೆಂಬುದು ಕಂಡು ಬಂದಿದೆಯೆನ್ನುತ್ತದೆ ಈ ಸರ್ವೇಕ್ಷಣೆ.-1) ಬರವಿದ್ದಾಗ್ಯೂ ಕೃಷಿ ಉತ್ಪಾದನೆ ಕೇವಲ 2%ದಷ್ಟು ಇಳಿಯಿತು. ಕೈಗಾರಿಕಾ ಉತ್ಪಾದನೆಯ ದರಕ್ಕೆ ಏನೂ ತೊಂದರೆಯಾಗಿಲ್ಲ. ಅದು 7.5 %ವಿದೆ. 2) ಈ ವರ್ಷ ಉತ್ತಮ ಮಳೆಯ ಲಕ್ಷಣಗಳಿರುವುದರಿಂದ ವೃದ್ಧಿ ದರದಲ್ಲಿ ಏಳನೇ ಯೋಜನೆಯ ಗುರಿಗಳನ್ನು ಮುಟ್ಟಬಹುದು ಮಾತ್ರವಲ್ಲ, ಮೀರಿಸಲೂ ಸಾಧ್ಯ! ಸರ್ವೇಕ್ಷಣೆ ಹೇಳುವ ಇನ್ನೊಂದು ಹೆಗ್ಗಳಿಕೆಯೆಂದರೆ ಇವೆಲ್ಲಾ ಹಣದುಬ್ಬರವಿಲ್ಲದೇನೇ ಸಾಧ್ಯವಾಯಿತು!

ಕಾರ್ಮಿಕರನ್ನು, ರೈತರನ್ನು, ಕೃಷಿ ಕೂಲಿಕಾರರನ್ನು ಸುಲಿದು ಗುತ್ತೇದಾರಿಗಳ, ಭೂಮಾಲಕರ ಲಾಭ ಹೆಚ್ಚಿಸುವ ಒಂದು ಕಾರ್ಯವ್ಯೂಹವನ್ನು ಸಮರ್ಥಿಸಿಕೊಳ್ಳಲು ಅನುಕೂಲವಾದ ವೇಷ ತೋರಿಸಿ ಅಂಕಿ-ಸಂಖ್ಯೆಗಳನ್ನು ಜನರ ಮುಂದಿಡುವುದು ನಮ್ಮ ಆಳುವ ವರ್ಗಗಳ ಪ್ರತಿನಿಧಿಗಳು ಹಿಡಿಯಲೇಬೇಕಾಗಿ ಬಂದ ದಾರಿ. ಬಿಕ್ಕಟ್ಟು ಹೆಚ್ಚದಂತೆಲ್ಲಾ ಇದು ಹೆಚ್ಚೆಚ್ಚು ಅನಿವಾರ್ಯ. ಆದರೆ ಈ ಮೋಸದ ಅಂಕಿ-ಅಂಶಗಳ ಮರೆಯಲ್ಲೂ ಸತ್ಯಾಂಶಗಳು ಇಣಿಕು ಹಾಕುತ್ತವೆ.

ಈ ಬಾರಿಯ ಸರ್ವೇಕ್ಷಣೆಯಲ್ಲಿ ಈ ರೀತಿ ಕಂಡು ಬರುವ ಮುಖ್ಯ ಅಂಶಗಳೆಂದರೆ ರಾಷ್ಟ್ರೀಯ ಆದಾಯದ ಬೆಳವಣಿಗೆ ಕೇವಲ ಕೆಲವೇ ವಲಯಗಳಿಗೆ ಸೀಮಿತವಾಗಿರುವುದು, ಸರ್ಕಾರದ ಆಯವ್ಯಯದಲ್ಲಿ ಹೆಚ್ಚುತ್ತಿರುವ ಖೋತಾ ಮತ್ತು ನಾಗಾಲೋಟ ಓಡುತ್ತಿರುವ ವಿದೇಶೀ ಸಾಲದ ಹೊರೆ.

ನಮ್ಮ ಆರ್ಥಿಕ ವ್ಯವಸ್ಥೆ ಬರವಿದ್ದಾಗ್ಯೂ ವೃದ್ಧಿ ಹೊಂದಿದೆಯೆನ್ನುವ ಸರ್ವೇಕ್ಷಣೆ ಈ ವೃದ್ಧಿ ದರಕ್ಕೆ ಮುಖ್ಯ ಕಾರಣ ಕೈಗಾರಿಕಾ ಬೆಳವಣಿಗೆಯಲ್ಲ, ಮುಖ್ಯವಾಗಿ ಸಾರ್ವಜನಿಕ ಆಡಳಿತ ಮತ್ತು ರಕ್ಷಣಾ ವಲಯಗಳ ಪಾಲಿನಲ್ಲಾಗಿರುವ ಹೆಚ್ಚಳ ಎಂಬುದನ್ನು ಹೇಳುವುದಿಲ್ಲ. ಕೈಗಾರಿಕೆಗಳಲ್ಲಿ ಕೂಡಾ ಕಂಪ್ಯೂಟರ್ ಮುಂತಾದ ಕೆಲವೇ ಸೀಮಿತ ಹೊಸ ವಲಯಗಳಷ್ಟೇ ವೃದ್ಧಿ ಕಂಡು ಬಂದಿದೆ. ವಾಸ್ತವವಾಗಿ ಇಂತಹ ವೃದ್ಧಿಗೆ ಸರ್ಕಾರವೇ ನೆರವು ನೀಡಿರುವುದು. ಇದರ ಪರಿಣಾಮವಾಗಿಯೇ ಆಯವ್ಯಯದ ಖೋತಾ ವಿಪರೀತವಾಗಿ ಏರಿರುವುದು. ಕಳೆದ ಐದು ವರ್ಷಗಳಲ್ಲಿ ಖೋತಾ ಮೂರೂವರೆ ಪಟ್ಟು ಏರಿದೆ. ಇಂತಹ ಸನ್ನಿವೇಶದಲ್ಲಿ ವಿಪರೀತ ಬೆಲೆಯೇರಿಕೆ ಕಂಡು ಬಂದಿಲ್ಲ ಎಂಬ ಸರ್ಕಾರದ ಹೆಗ್ಗಳಿಕೆಗೆನೂ ಅವಕಾಶವಿಲ್ಲ. ಏಕೆಂದರೆ ಕೆಲವು ಪರಿಣಿತರ ಪ್ರಕಾರ ವಿದೇಶೀ ವ್ಯಾಪಾರದಲ್ಲಿ ಖೋತಾ ಹೆಚ್ಚಿಸಿ ಬೆಲೆ ಏರಿಕೆ ವಿಪರೀತವಾಗದಂತೆ ನೋಡಿಕೊಳ್ಳಲಾಗಿದೆ. ಮುಖ ಮುಚ್ಚಿದರೆ ಕಾಣುತ್ತದೆ. ಕಾಲು ಮುಚ್ಚಿದರೆ ಮುಖ ಬಯಲಾಗುತ್ತದೆ! ಏಳನೇ ಯೋಜನೆ ನಿಗದಿಗೊಳಿಸಿದ ವ್ಯಾಪಾರ ಸಮತೋಲನ ಖೋತಾ 7000 ಕೋಟಿ ರೂ. ಇದೇ ಬಹಳ ಹೆಚ್ಚು. ಯೋಜನೆಯ ಮೊದಲ ಮೂರು ವರ್ಷಗಳ ಸರಾಸರಿ ವ್ಯಾಪಾರ ಖೋತಾ ಇದನ್ನೂ ಮೀರಿದೆ. ಉಳಿದ ಎಂಟು ವರ್ಷಗಳಲ್ಲಿ 10 ಸಾವಿರ ರೂ.ಗಳನ್ನು ಮೀರುವ ಭಯವಿದೆ. 1987-88ರ ಅಂತ್ಯದಲ್ಲಿ ದೇಶದ ಮೇಲಿನ ಒಟ್ಟು ವಿದೇಶೀ ಸಾಲ ಬಾಕಿ 5 2.3 ಶತಕೋಟಿ ಡಾಲರುಗಳು (ಸುಮಾರು 790 ಶತ ಕೋಟಿ ರೂ.ಗಳು) ಕಳೆದ 5 ವರ್ಷಗಳಲ್ಲಿ ಸಾಲದ ಮೊರೆ ಮೂರನೇ ಎರಡರಷ್ಟು ಹೆಚ್ಚಿದೆಯೆಂದು ಅಂದಾಜು ಮಾಡಲಾಗಿದೆ.

ಆರ್ಥಿಕ ಸರ್ವೇಕ್ಷಣೆ ಇವನ್ನೆಲ್ಲಾ ಒಪ್ಪಿಕೊಳ್ಳುತ್ತದೆ. ಇವು 'ಸಮಸ್ಯೆಯ ವಲಯಗಳು' ಎಂದು ಹೆಸರಿಸುತ್ತದೆ. ಆದರೆ ಇದಕ್ಕೆ ಬರವೇ ಮೂಲ ಕಾರಣ ಎಂದು ಹೇಳಿ ತಿಪ್ಪೆ ಸಾರಿಸಲು ಅದು ಪ್ರಯತ್ನಿಸುತ್ತದೆ. ಬರಪರಿಹಾರ ಕೆಲಸಗಳಿಗೆ, ಬಡವರು ಕೊಳ್ಳುವ ಸಾಮರ್ಥ್ಯ ಹೆಚ್ಚಿಸಲು "ಆಹಾರ"ದ ಮೇಲೆ ಹೆಚ್ಚಿನ ಖರ್ಚು ಹಾಗೂ ಆಮದಿನಿಂದಾಗಿ ಈ ಸಮಸ್ಯೆ ತಲೆದೋರಿತಷ್ಟೆ ಎಂದಿದೆ ಈ ಸರ್ವೇಕ್ಷಣೆ.

ಆದರೆ 1986-87 ಹಾಗೂ 1987-88ರ (ಬರದ ವರ್ಷ)ದಲ್ಲಿ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮೀಸಲಿಟ್ಟ ಹಣದ ಮೊತ್ತ ನೋಡಿದರೆ ಇದೊಂದು ಪೊಳ್ಳುವಾದ ಎಂದು ಸ್ಪಷ್ಟವಾಗುತ್ತದೆ. 2667.7 ಕೋಟಿ ರೂ.ಗಳಿಂದ ಬರದ ವರ್ಷದಲ್ಲಿ ಅದು 2886.8 ಕೋಟಿ ರೂ.ಗಳಿಗೆ ಹೆಚ್ಚಿತು. ಈ ಅಲ್ಪ ಹೆಚ್ಚಳಕ್ಕೆ ಒಟ್ಟು ಯೋಜನಾ ಮೊತ್ತವೇ ಸುಮಾರು 45 00 ರೂ. ಹೆಚ್ಚಾಗಿರುವುದೇ ಕಾರಣ ಹೊರತು ಬೇರೇನೂ ಇಲ್ಲ.

ಸರ್ಕಾರ ಎದುರಿಸುತ್ತಿರುವ ಸಂಪನ್ಮೂಲ ಕೊರತೆ ಮತ್ತು ಅದರಿಂದಾಗಿ ಸಾಲ-ಇದಕ್ಕೆ ಕಾರಣವಾದ ಒಂದು ಮುಖ್ಯ ಅಂಶವೆಂದರೆ ನೇರ ತೆರಿಗೆ ವಿಧಿಸುವಲ್ಲಿ ಸರ್ಕಾರದ ಹಿಂಜರಿತ. ನೇರ ತೆರಿಗೆಯೆಂದರೆ ಶ್ರೀಮಂತ ವಿಭಾಗಗಳಿಂದ ವಸೂಲಿ ಮಾಡುವ ತೆರಿಗೆ. ಪರೋಕ್ಷ ತೆರಿಗೆಯೆಂದರೆ ಸರಕುಗಳ ಮೇಲೆ ತೆರಿಗೆ. ಪರೋಕ್ಷವಾಗಿ ಸಮಾಜದ ಬಡ ವಿಭಾಗಗಳ ಮೇಲೇನೇ ಹೆಚ್ಚು ಹೊರೆ ಹಾಕಿಸುವ ವಿಧಾನ. 195 0ರ ದಶಕದಲ್ಲಿ ಒಟ್ಟು ತೆರಿಗೆಗಳಲ್ಲಿ ಇಂತಹ ಪರೋಕ್ಷ ತೆರಿಗೆಗಳು 5 9%ದಷ್ಟಿದ್ದರೆ 1970ರ ದಶಕದಲ್ಲಿ ಇದು 79%ಕ್ಕೇರಿತು. ಪ್ರಸ್ತುತ ದಶಕದಲ್ಲಿ ಅದು 84%ಕ್ಕೇರಿತು.

ಪ್ರಸ್ತುತ ದಶಕದಲ್ಲಿ ಅದು 84%ಕ್ಕೇರಿತು.

ಸಾರ್ವಜನಿಕ ವಲಯದಿಂದ ಕಂದಾಯವೂ ಇಳಿಮುಖವಾಗುತ್ತಿದೆ. ಇದಕ್ಕೆ ಕಾರಣ ಸಾರ್ವಜನಿಕ ವಲಯದ ಉದ್ದಿಮೆಗಳ ಅದಕ್ಷತೆಯಲ್ಲ. ಅದಕ್ಕಿಂತ ಬಹಳ ಹೆಚ್ಚಾಗಿ ಸರ್ಕಾರ ಅನುಸರಿಸುವ ಬೆಲೆ ನೀತಿ. ಖಾಸಗೀ ವಲಯಕ್ಕೆ ಪ್ರಮುಖ ಕಚ್ಚಾ ಸಾಮಗ್ರಿಗಳನ್ನು ಕಡಿಮೆ ಬೆಲೆಯಲ್ಲಿ ಒದಗಿಸುವುದಕ್ಕಾಗಿ ಅನುಸರಿಸುವ ಬೆಲೆ ನೀತಿ. ಆದ್ದರಿಂದಾಗಿ ಸರ್ಕಾರದ ಆದಾಯಕ್ಕೆ ಸಾರ್ವಜನಿಕ ವಲಯದ ಕೊಡುಗೆ 7%ವನ್ನು ಎಂದೂ ಮೀರಲಿಲ್ಲ.

ಹೀಗೆ ಒಂದೆಡೆ ಗುತ್ತೇದಾರಿಗಳ, ಭೂಮಾಲಕರ ಲಾಭ ಕಾಪಾಡುವ ನೀತಿಯಿಂದಾಗಿ ಹೆಚ್ಚಿನ ಸಂಪನ್ಮೂಲ, ಆದಾಯ ಸಂಗ್ರಹಿಸುವಲ್ಲಿ ಸರ್ಕಾರದ ವಿಫಲತೆ, ಇನ್ನೊಂದೆಡೆ ಇದೇ ಗುತ್ತೇದಾರಿಗಳಿಗೆ, ಖಾಸಗೀ ವಲಯದ ಸರಕುಗಳಿಗೆ ಬೇಡಿಕೆಗೆ ಪ್ರೋತ್ಸಾಹ ನೀಡಲು, ಈ ಮೂಲಕ ಉತ್ಪಾದನಾ ಹೆಚ್ಚಳದ ದರ ಹೆಚ್ಚಿಸಲು ನೆರವು ಧನ, ರಿಯಾಯ್ತಿ ಇತ್ಯಾದಿಗಳಿಗೆ ಹೆಚ್ಚೆಚ್ಚು ಖರ್ಚು. ಇದರ ಜತೆಗೆ ತಾನೇ ಮಾಡಿದ ಸಾಲದ ಮೇಲೆ ಹೆಚ್ಚುತ್ತಿರುವ ಬಡ್ಡಿ ಪಾವತಿ. ಇದರಿಂದಾಗಿ ಯೋಜನೇತರ ಖರ್ಚು 1960ರ ದಶಕದಲ್ಲಿ 3000 ಕೋಟಿ ರೂ. ಇದ್ದದ್ದು 1987-88ರಲ್ಲಿ 43691 ಕೋಟಿ ರೂ.ಗೇರಿತು. ಸುಮಾರು 15 ಪಟ್ಟು ಹೆಚ್ಚಿತು! ಈ ರೀತಿ ಸರ್ಕಾರದ ಆಯವ್ಯಯದ ಖೋತಾಕ್ಕೆ ಬರ ಪರಿಸ್ಥಿತಿ ಕಾರಣವೆಂಬುದು ಕೇವಲ ಕುಂಟು ನೆಪವಷ್ಟೆ.

ಇದೇ ರೀತಿ ಬರದ ಪರಿಸ್ಥಿತಿಯಿಂದಾಗಿ ಆಮದು-ರಫ್ತು ಸಮತೋಲದಲ್ಲಿ ಖೋತಾ ಹೆಚ್ಚಿತೆಂಬುದೂ ನಿಜ ಸಂಗತಿ ಮರೆ ಮಾಚುವ ಪ್ರಯತ್ನವಷ್ಟೆ. ಯಾಕೆಂದರೆ ಕಳೆದ ಐದು ವರ್ಷಗಳಲ್ಲಿ ನಮ್ಮ ದೇಶದ ಆಮದು ಮೊತ್ತ ಮೂರು ಪಟ್ಟು ಅಂದರೆ ಸುಮಾರು 4000 ಕೋಟಿ ರೂ.ಗಳು ಹೆಚ್ಚುವಲ್ಲಿ ಪ್ರಮುಖ ಪಾಲು ಬಂಡವಾಳ ಸರಕುಗಳ ಆಮದು. ಇದು ವಿಶ್ವಬ್ಯಾಂಕ್, ಐ.ಎಂ.ಎಫ್. ಒತ್ತಡದ ಉದಾರೀಕರಣ ನೀತಿಯ ಫಲ. ಆಹಾರ ಸರಕುಗಳ ಆಮದು ಕೂಡಾ ಆಗಿದೆ- ಮುಖ್ಯವಾಗಿ ದ್ವಿದಳ ಧಾನ್ಯಗಳು ಮತ್ತು ಎಣ್ಣೆ ಕಾಳುಗಳು ಆದರೆ ಇದು ನಡೆದಿರುವುದು ಬರದ ವರ್ಷದಲ್ಲಲ್ಲ. ಮಳೆ ಸರಿಯಾಗಿ ಬಂದ ವರ್ಷಗಳಲ್ಲೆ. ಕೈಗಾರಿಕಾ ಉತ್ಪಾದನೆಯಲ್ಲಿ ತೀವ್ರ ಹೆಚ್ಚಳಕ್ಕಾಗಿ ಬಜೆಟ್ ಖೋತಾ ಹೆಚ್ಚಿಸಿದ್ದರಿಂದ ಬೆಲೆಯೇರಿಕೆ ವಿಪರೀತಗೊಳ್ಳದಂತೆ ಕೃಷಿ ಸರಕುಗಳ ಬೆಲೆ ಮಟ್ಟ ತಡೆದಿಡಲು ಈ ಆಮದು ಮಾಡಲಾಯಿತು.

ಅಂದರೆ ಸರ್ಕಾರದ ಸಂಪನ್ಮೂಲಗಳ ಈಗಿನ ಸ್ಥಿತಿ, ವಿದೇಶೀ ವ್ಯಾಪಾರದಲ್ಲಿ ಹೆಚ್ಚುತ್ತಿರುವ ಖೋತಾಕ್ಕೆ ಕಾರಣ ಬರ ಪರಿಸ್ಥಿತಿಯಲ್ಲ. ಜನ ಸಾಮಾನ್ಯರನ್ನು, ರೈತಾಪಿ ವರ್ಗವನ್ನು ಸುಲಿದು ಅಭಿವೃದ್ಧಿ ಸಾಧಿಸುವ ಮಾರ್ಗ ಹಿಡಿದುದೇ ಅದಕ್ಕೆ ಮೂಲಭೂತ ಕಾರಣ. ವಿದೇಶೀ ಹಣಕಾಸು ಬಂಡವಾಳದ ಮೇಲೆ ಹೆಚ್ಚೆಚ್ಚು ಅವಲಂಬನೆ, ಪರಿಣಾಮವಾಗಿ ವಿದೇಶೀ ಸಾಲದ ಹೊರೆ ಇದೂ ಇದೇ ಧೋರಣೆಯ ಪರಿಣಾಮ. ಇದರಿಂದಾಗಿ ದೇಶದ ಸಾರ್ವಭೌಮತೆ ಹಾಗೂ ಜನಸಾಮಾನ್ಯರ ಜೀವನ ಮಟ್ಟದ ಮೇಲಾಗುವ ದುಷ್ಪರಿಣಾಮಗಳನ್ನು ಪ್ರತ್ಯೇಕವಾಗಿ ವಿವರಿಸಬೇಕಾಗಿಲ್ಲ.

ಜನಸಾಮಾನ್ಯರಿಗೆ ಏನೂ ನೀಡಲಾರದ, ಅಂತರ್ರಾಷ್ಟ್ರೀಯ ಸಾಲಬಲೆಯತ್ತ ರಭಸದಿಂದ ಸಾಗಿರುವ ಆರ್ಥಿಕ ಸ್ಥಿತಿ ಯನ್ನು ಸರ್ಕಾರದ ಆರ್ಥಿಕ ಸರ್ವೇಕ್ಷಣೆ "ಚುರುಕಾಗಿದೆ" ಎಂದು ವರ್ಣಿಸಿರುವುದು ಅದು ಕಳೆದ ನಾಲ್ಕು ದಶಕಗಳಲ್ಲಿ ಹಿಡಿದಿರುವ ದಾರಿಗೆ ಅಡಗಿಕೊಂಡಿರುವ ಬಿಕ್ಕಟ್ಟನ್ನು ಮರೆಮಾಚಲಿಕ್ಕಾಗಿಯೇ ವಿನಃ ಬೇರೆ ಯಾವುದಕ್ಕೂ ಅಲ್ಲ.

(ಆಧಾರ: 'ಪೀಪಲ್ಸ್ ಡೆಮಾಕ್ರಸಿ')

ನಿರುದ್ಯೋಗದ ವಿರುದ್ಧ ಆಂದೋಲನ

ದೇಶವನ್ನು ಮತ್ತು ಜನಗಳನ್ನು ಎದುರಿಸುತ್ತಿರುವ ಒಂದು ತುರ್ತು ಸಮಸ್ಯೆಯೆಂದರೆ ಹೆಚ್ಚುತ್ತಿರುವ ನಿರುದ್ಯೋಗದ ಸಮಸ್ಯೆ. ಅದು ಆರ್ಥಿಕ ಸಮಸ್ಯೆಯಷ್ಟೇ ಅಲ್ಲ, ಒಂದು ಗಂಭೀರ ರಾಜಕೀಯ ಸಮಸ್ಯೆಯಾಗುತ್ತಿದೆ. ಕೋಮುವಾದಿ ಮತ್ತು ವಿಚ್ಛಿದ್ರಕಾರೀ ಶಕ್ತಿಗಳು ತಮ್ಮ ದುಷ್ಟ ಉದ್ದೇಶಗಳಿಗೆ ಅದನ್ನು ಬಳಸಿಕೊಳ್ಳುತ್ತಿದ್ದಾರೆ.ಕಾಂಗ್ರೆಸ್(ಐ) ಕೂಡಾ ತನ್ನ ಸ್ವಾರ್ಥ ಸಾಧನೆಗೆ ಅದನ್ನು ಬಳಸಿಕೊಳ್ಳುತ್ತಿದೆ.

ನಿರುದ್ಯೋಗ ಸಮಸ್ಯೆ ನಮ್ಮ ದೇಶದ ಒಂದು ಪ್ರಮುಖ ಸಮಸ್ಯೆಯಾಗಿ ಬಿಟ್ಟಿದೆ. ಅದೊಂದು ಸರ್ವವ್ಯಾಪೀ ಸಮಸ್ಯೆಯಾಗಿಬಿಟ್ಟಿದೆ. ಯಾವ ಕೋಮು ಅಥವಾ ಜಾತಿಯೂ ಅದರಿಂದ ಮುಕ್ತವಾಗಿಲ್ಲ. ಚರ್ಚಿನಲ್ಲಿ ಪ್ರಾರ್ಥಿಸುವವರಾಗಲಿ, ಮಸೀದೆಯಲ್ಲಿ ಪ್ರಾರ್ಥಿಸುವವರಾಗಲಿ, ದೇವಸ್ಥಾನದಲ್ಲಿ ಪ್ರಾರ್ಥಿಸುವವರಾಗಲಿ ಅಥವಾ ಎಲ್ಲಿ ಪ್ರಾರ್ಥಿಸದವರೇ ಆಗಲಿ, ಎಲ್ಲರಿಗೂ ನಿರುದ್ಯೋಗ, ಅದರ ಜತೆಗೆ ಬಡತನದ ಶಾಪ ತಟ್ಟಿದೆ. ಮುಸ್ಲಿಮರ, ಹಿಂದೂಗಳ, ಹರಿಜನರ, ಕ್ಯಾಥೋಲಿಕರ ಧಾರ್ಮಿಕ ನಂಬಿಕೆಗಳು ಅವರನ್ನು ಇಹಲೋಕದ ಈ ಸಂಕಟಗಳಿಂದ ರಕ್ಷಿಸುವುದಿಲ್ಲ. ಅದಕ್ಕೆ ಎಲ್ಲಾ ಶ್ರಮಿಕರ, ಜಾತಿ, ಧರ್ಮದ ಭೇದಭಾವವಿಲ್ಲದೆ ಈ ಸಮಸ್ಯೆಗಳಿಂದ ಪೀಡಿತರಾದ ಎಲ್ಲಾ ಜನಗಳ ಐಕ್ಯತೆ ಅತ್ಯಗತ್ಯ. ಕೆಲಸವಿದ್ದವರ ಮತ್ತು ಕೆಲಸವಿಲ್ಲದವರ ಐಕ್ಯತೆಯೂ ಅತ್ಯಗತ್ಯ.

ಜಾತಿ-ಮತಗಳ ಭೇದವಿಲ್ಲದೆ ಎಲ್ಲಾ ನಿರುದ್ಯೋಗಿಗಳನ್ನು ಒಗ್ಗಟ್ಟುಗೊಳಿಸಿ ಕಾರ್ಮಿಕ ಸಂಘಟನೆಯ ಆಂದೋಲನ ಕೋಮುವಾದೀ ಶಕ್ತಿಗಳ ಹಾವಳಿಯನ್ನು ಹಾಗೂ ಕಾಂಗ್ರೆಸ್(ಐ)ನ ಸ್ವಾರ್ಥಸಾಧನೆಯನ್ನು ತಡೆಯುವಲ್ಲಿ ವರ್ಗ ಐಕ್ಯತೆಯ ಸಾರ್ವತ್ರಿಕ ಭಾವನೆ ಮೂಡಿಸುವಲ್ಲಿ ದೊಡ್ಡ ಪಾತ್ರ ವಹಿಸಬೇಕಾಗಿದೆ. ಈ ಮೂಲಕ ನಿರುದ್ಯೋಗದ ವಿರುದ್ಧ ಕಾರ್ಮಿಕ ವರ್ಗದ ಆಂದೋಲನ ರಾಷ್ಟ್ರೀಯ ಐಕ್ಯತೆಯನ್ನು ಬಲಗೊಳಿಸುತ್ತದೆ. ಈ ಪಾತ್ರವನ್ನು ಎಡಪಂಥೀಯ ಕಾರ್ಮಿಕ ಸಂಘಗಳು, ವಿಶೇಷವಾಗಿ ಸಿ.ಪಿ.ಐ.(ಎಂ) ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುವ ಸಂಘಗಳು ಸತತವಾಗಿ ವಹಿಸುತ್ತಲೇ ಬಂದಿವೆ. ಯಾಕೆಂದರೆ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ದೇಶದ ಐಕ್ಯತೆಯ ಮತ್ತು ಇಡೀ ಜನತೆಯ ಹಿತಾಸಕ್ತಿಗಳಿಂದ ಬೇರ್ಪಡಿಸಲು ಸಾಧ್ಯವಿಲ್ಲ ಎಂಬುದರ ಪೂರ್ಣ ಅರಿವು ಅವಕ್ಕಿದೆ.

ಮುಂಬರುವ ಚುನಾವಣೆಗಳಲ್ಲಿ ನಿರುದ್ಯೋಗ ಸಮಸ್ಯೆ ಒಂದು ಪ್ರಮುಖ ಸ್ಥಾನ ಪಡೆಯಲಿದೆ. ಚುನಾವಣೆಗೆ ಸ್ಪರ್ಧಿಸುವ ಪಕ್ಷಗಳು ಈ ಸಮಸ್ಯೆಯನ್ನು ಹೇಗೆ ಪರಿಹರಿಸುವುದು ಎಂಬ ಪ್ರಶ್ನೆಗೆ ಉತ್ತರ ಕೊಡಬೇಕಾಗುತ್ತದೆ. ಕಾಂಗ್ರೆಸ್(ಐ) ಈಗಾಗಲೇ ಒಂದು ಕುಟುಂಬದ ಕನಿಷ್ಠ ಒಬ್ಬ ವ್ಯಕ್ತಿಗೆ ಉದ್ಯೋಗ ನೀಡುವ ಭರವಸೆ ನೀಡಲಾರಂಭಿಸಿದೆ. ಆದರೆ ಈ ಸಮಸ್ಯೆ ಹುಟ್ಟಿದ್ದಾದರೂ ಏಕೆ ಎಂದು ಜನರಿಗೆ ತಿಳಿಸಲು ನಿರಾಕರಿಸುತ್ತದೆ. ಭೂಮಾಲಕರ ಮಿತ್ರತ್ವದೊಂದಿಗೆ ಖಾಸಗೀ ಬಂಡವಾಳಶಾಹೀ ಉತ್ಪಾದನೆಯ ಮೇಲೆ ಅವಲಂಬಿಸಿದ ತನ್ನ ಧೋರಣೆಯ ದಿವಾಳಿಕೋರತನವನ್ನು ಈ ಸಮಸ್ಯೆ ಪ್ರತಿಬಿಂಬಿಸುತ್ತದೆಂದು ಅದು ಜನತೆಗೆ ಹೇಳುವುದಿಲ್ಲ. ಈ ಸಮಸ್ಯೆಯನ್ನು ಎದುರಿಸಲು ತಾವು ಹೇಗೆ ಪ್ರಯತ್ನಿಸುತ್ತೇವೆ ಎಂಬ ನೇರ, ಸ್ಪಷ್ಟ ದಿಕ್ಸೂಚಿಯನ್ನು ವಿರೋಧ ಪಕ್ಷಗಳು ಪ್ರಸ್ತುತಪಡಿಸಬೇಕು. ಇಲ್ಲವಾದರೆ ಕಾಂಗ್ರೆಸ್(ಐ)ನ ಭರವಸೆಗಳ ನಿಜ ಬಣ್ಣವನ್ನು ಬಯಲು ಮಾಡುವುದು ಅವರಿಗೆ ಕಷ್ಟವಾಗುತ್ತದೆ.

ಕಾರ್ಮಿಕ ಸಂಘಟನೆಯ ಆಂದೋಲನ ಎರಡು ಪ್ರಸ್ತಾಪಗಳನ್ನಿಡುತ್ತದೆ- ಸಂವಿಧಾನದಲ್ಲಿ ಕೆಲಸದ ಹಕ್ಕನ್ನು ಮೂಲಭೂತ ಹಕ್ಕು ಎಂದು ಸೇರಿಸುವುದು. ಅದುವರೆಗೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗಿಗಳಿಗೆ ನಿರುದ್ಯೋಗಿ ಸೌಲಭ್ಯ ಒದಗಿಸುವುದು. ಈ ಘೋಷಣೆಯೊಂದಿಗೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಸಮಸ್ತ ನಿರುದ್ಯೋಗೀ ಜನಸಮೂಹಗಳನ್ನು ಒಂದೆಡೆ ಸೇರಿಸುವುದು ವಿರೋಧ ಪಕ್ಷಗಳಿಗೆ, ಜಾತ್ಯಾತೀತ ಮತ್ತು ಎಡ ಪಕ್ಷಗಳಿಗೆ ಸುಲಭ ಸಾಧ್ಯವಾಗುತ್ತದೆ. ಕಾಂಗ್ರೆಸ್(ಐ)ನ್ನು ಭಾರತೀಯ ಜನತೆಯಿಂದ ದೂರ ಸರಿಸುವುದು ಸಾಧ್ಯವಾಗುತ್ತದೆ.

-ಬಿ.ಟಿ.ರಣದಿವೆ

ಹುಬ್ಬಳ್ಳಿಯಲ್ಲಿ ಬಡವರ ಮನೆಗಳ ಧ್ವಂಸ-ಸಿ.ಪಿ.ಐ.(ಎಂ) ಖಂಡನೆ



ಹುಬ್ಬಳ್ಳಿ ನಗರದ ಸದರ ಸೋಫಾದಲ್ಲಿ ಮಾರ್ಚ್ 3ರಂದು ಬಡ ಕಾರ್ಮಿಕರ ಮನೆಗಳನ್ನು ಧ್ವಂಸ ಮಾಡಿರುವುದನ್ನು ಸಿ.ಪಿ.ಐ.(ಎಂ) ಧಾರವಾಡ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾ॥ ವಿ.ಎನ್. ಹಳಕಟ್ಟಿ ತೀವ್ರವಾಗಿ ಖಂಡಿಸಿದ್ದಾರೆ. ಸಿ.ಪಿ.ಐ.(ಎಂ) ನಿಯೋಗವೊಂದು ಧ್ವಂಸ ಮಾಡಿರುವ ಮನೆಗಳನ್ನು ವೀಕ್ಷಿಸಿ, ಅಲ್ಲಿಯ ಜನರೊಂದಿಗೆ ಸಮಾಲೋಚಿಸಿದ ನಂತರ ಕಾ॥ ಹಳಕಟ್ಟಿಯವರು ನೀಡಿದ ಹೇಳಿಕೆಯಲ್ಲಿ ಹಾನಿಗೊಳಗಾದ ಮುಗ್ಧ ಬಡವರಿಗೆ ಮೋಸ ಮಾಡಿದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದೂ, ಬಡ ಕಾರ್ಮಿಕರಿಗಾದ ಹಾನಿಯನ್ನು ತುರ್ತಾಗಿ ತುಂಬಿಕೊಡಬೇಕೆಂದು ಒತ್ತಾಯಿಸಿದ್ದಾರೆ.

ಅಲ್ಲಿ ಮನೆ ಕಟ್ಟಿಕೊಂಡಿರುವವರು, ಮನೆ ಕಟ್ಟಲು ತಳಪಾಯ ಹಾಕಿದವರು ಬಹುಜನರು ಬಡವರು. ಅವರಲ್ಲಿ, ಬೀಡಿ ಕಾರ್ಮಿಕರು ತಾವು ಅಲ್ಲಿ ಇಲ್ಲಿ ಸಾಲ ಮಾಡಿ 12×30 ಅಡಿ ಪ್ಲಾಟಿಗೆ ಸುಮಾರು ರೂ. 1700-00ರಷ್ಟು ನೀಡಿ ಪ್ಲಾಟ್ ಪಡೆದರೂ. 5 -6ಜನ ಜನತಾ ಪಕ್ಷದ ಬೆಂಬಲಿಗರೆಂದು ಗುರುತಿಸಲ್ಪಟ್ಟವರು ಸುಮಾರು 7-8 ಎಕರೆ ಶೇತ್ಕಿ ಭೂಮಿಯಲ್ಲಿ ಪ್ಲಾಟುಗಳನ್ನು ಮಾಡಿ ಬಡವರಿಗೆ ದುಡ್ಡು ತೆಗೆದುಕೊಂಡು ಹಂಚಿರುವುದು ತಿಳಿದುಬಂದಿರುತ್ತದೆ. ಮುಗ್ಧ ಜನರು ಯಾವುದೂ ಗೊತ್ತಿಲ್ಲದೇ ಪ್ಲಾಟ್ ಖರೀದಿಸಿದರು. ಖರೀದಿ ಜನರು (ಮಧ್ಯವರ್ತಿಗಳು) ಈ ಕೂಡಲೇ ಮನೆಗಳನ್ನು ಕಟ್ಟಿಕೊಳ್ಳಿರೆಂದು ಹೇಳಿದ್ದರಿಂದ ಸಾವಿರಾರು ರೂ. ಖರ್ಚು ಮಾಡಿ ಬಹಳ ಕಷ್ಟದಿಂದ ಮನೆ ಕಟ್ಟಿದರು; ಕಟ್ಟಲು ತೊಡಗಿದರು.

ತೀರ ಅಮಾನವೀಯವಾಗಿ ಅಕ್ರಮವಾಗಿ ಮನೆಗಳನ್ನು ಮುನ್ನೆಚ್ಚರಿಕೆ ನೋಟೀಸನ್ನು ನೀಡದೆ ಧ್ವಂಸ ಮಾಡಿರುವುದನ್ನು ಮತ್ತು ಕಟ್ಟಿ ವಾಸಕ್ಕೆ ಸಿದ್ಧವಾಗಿರುವ ಮನೆಗಳನ್ನು ಧ್ವಂಸ ಮಾಡಿ ರಾಷ್ಟ್ರೀಯ ಆಸ್ತಿಪಾಸ್ತಿಗಳ ಹಾನಿ ಮಾಡಿರುವುದನ್ನು ಸಿ.ಪಿ.ಐ.(ಎಂ) ತೀವ್ರವಾಗಿ ಖಂಡಿಸಿದೆ. ಹಾಗೆ ಆಸ್ತಿಯನ್ನು ಹಾಳು ಮಾಡುವ ಬದಲು ಬೇರೊಂದು ರೀತಿಯ ಶಿಸ್ತಿನ ಕ್ರಮ ಜರುಗಿಸಬಹುದಿತ್ತು. ಬೊಮ್ಮಾಯಿ ಸರ್ಕಾರ ಇರುವಾಗ ಬೊಮ್ಮಾಯಿ ಪಕ್ಷಕ್ಕೆ ಸೇರಿದವರೇ ಮಧ್ಯವರ್ತಿಗಳಾಗಿರುವರೆನ್ನುವಾಗ ಈ ರೀತಿ ಅಧಿಕಾರಿಗಳಿಂದ ಅಕ್ರಮ ಧ್ವಂಸ

ಗಿರಿಜನರಿಗೆ ದ್ರೋಹ ಮಾಡಿದ ಮಂಡಲಪಂಚಾಯ್ತ್

ವಿರಾಜಪೇಟೆ ತಾಲೂಕಿನ ಮೂಕುಟ್ಟ ಪ್ರದೇಶದಲ್ಲಿ ಗಿರಿಜನರಿಗೆ ಬುಟ್ಟಿ ಹೆಣೆಯುವುದನ್ನು ಕಲಿಸುವ ಕೇಂದ್ರವಾಗಿದ್ದ ಕಟ್ಟಡದಲ್ಲಿ ಈಗ ಮಂಡಲಪಂಚಾಯತ್ ಸದಸ್ಯರಿಗೆ ವಾಸ ಮಾಡಲು ಮತ್ತು ಗೇರು ಬೀಜ ವ್ಯಾಪಾರ ನಡೆಸಲು ಬಾಡಿಗೆಗೆ ನೀಡಲಾಗಿದೆ. ಮಂಡಲ ಪಂಚಾಯತು ಕಾಂಗ್ರೆ ನೇತೃತ್ವದಲ್ಲಿದೆ. ಜಿಲ್ಲಾಪರಿಷತ್ ಅಧ್ಯಕ್ಷರ ಪ್ರತ್ಯಕ್ಷ ಸಮ್ಮತಿಯೂ ಇದಕ್ಕಿದೆ.

ಇದು ಹರಿಜನ-ಗಿರಿಜನರ ಬಗ್ಗೆ ಕಾಂಗ್ರೆ ಪ್ರೇಮದ ವೈಖರಿ ಒಂದು ಉದಾಹರಣೆಯಷ್ಟೆ. ಈ ಪ್ರದೇಶದ ಪಣಿಯರ ದುಸ್ಥಿತಿಯ ಬಗ್ಗೆ ಸಿ.ಪಿ.ಐ.(ಎಂ)ನ ವಿರಾಜಪೇಟೆ ಶಾಖೆ ಆಗಾಗ ಗಮನ ಸೆಳೆಯುತ್ತಾ ಬಂದಿದೆ. ಇವರ ಶಾಲೆಯ ಕೊಠಡಿ ನಾಶವಾಗಿ ಗಿರಿಜನರ ಮಕ್ಕಳು ಜಗುಲಿಯಲ್ಲಿ ಪಾಠ ಕಲಿಯಬೇಕಾಗಿದೆ. ಸಾಲವಾಗಿ ಕೊಟ್ಟ ಹಸುಗಳು ಸತ್ತಿವೆ. ಮನೆಗಳು ವಾಸಯೋಗ್ಯವಾಗಿಲ್ಲ. ಕೆಲವು ತಿಂಗಳ ಹಿಂದೆ ಹಲವು ಮಂದಿ ನಿಗೂಢ ರೋಗಕ್ಕೆ ತುತ್ತಾದರು. ಆದರೆ ಈ ಬಗ್ಗೆ ಮಂಡಲ್ ಪಂಚಾಯತ್ ಏನೂ ಮಾಡಿಲ್ಲ. ಈ ಅನ್ಯಾಯಗಳನ್ನು ವಿರಾಜಪೇಟೆ ಸಿ.ಪಿ.ಐ.(ಎಂ) ತೀವ್ರವಾಗಿ ಖಂಡಿಸಿದೆ.

ಎರಡು ಹೊತ್ತಿನ ಕೂಳಿಗೂ ಗತಿಯಿಲ್ಲದ ಗಿರಿಜನ ಹೆಸರಿನಲ್ಲಿರುವ ಕಾರ್ಡುಗಳ ಮೂಲಕ ನ್ಯಾಯಬೆಲೆ ಅಂಗಡಿಗಳಲ್ಲಿ ಪಾಮೋಲಿನ್ ಎಣ್ಣೆ, ಅಕ್ಕಿ, ಸಕ್ಕರೆ, ಮತ್ತಿತರ ಸಾಮಗ್ರಿಗಳು ಮಾರಾಟವಾದಂತೆ ತೋರಿಸಿ ಗಡಿಯಾಚೆ ಕಳ್ಳ ವ್ಯಾಪಾರದಲ್ಲಿ ಹೋಗುವುದನ್ನು ನಿಲ್ಲಿಸಬೇಕೆಂದೂ ಸಿ.ಪಿ.ಐ.(ಎಂ) ವಿರಾಜಪೇಟೆ ಶಾಖೆ ಒತ್ತಾಯಿಸಿದೆ. ನಡೆಸಿ ಬಡವರಿಗೆ ತೊಂದರೆಯುಂಟು ಮಾಡಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಕಾ॥ ಹಳಕಟ್ಟಿಯವರು ಈ ಅಮಾನವೀಯ ಕ್ರಮದಿಂದ ಹಾನಿಗೊಳಗಾದ ಮುಗ್ಧ ಬಡವರಿಗೆ ಪರಿಹಾರ ಪಡೆಯಲು ಪಕ್ಷ ಸಂಯುಕ್ತ ಚಳುವಳಿ ರೂಪಿಸಲು ಪ್ರಯತ್ನಿಸುತ್ತದೆ ಎಂದಿದ್ದಾರೆ.

ಗಿರಿಜನರಿಗಾಗಿ ಕಟ್ಟಿಸಿದ ಕಟ್ಟಡದಿಂದ ಕಾಂಗ್ರೆ ಮಂಡಲ ಪಂಚಾಯತ್ ಸದಸ್ಯರನ್ನು ತೆರವು ಮಾಡಿಸಿ ಗಿರಿಜನರಿಗೆ ಮತ್ತೆ ಒಪ್ಪಿಸಲು ಕ್ರಮ ಕೈಗೊಳ್ಳದಿದ್ದರೆ ಬೇಟೋಳಿ ಮಂಡಲ ಪಂಚಾಯ್ತಿ ಮತ್ತು ಜಿಲ್ಲಾಪರಿಷತ್ತಿನ ಈ ಗಿರಿಜನ ದ್ರೋಹದ ವಿರುದ್ಧ ಹೋರಾಟ ನಡೆಸಲು ನಿರ್ಧರಿಸಿರುವ ಸಿ.ಪಿ.ಐ.(ಎಂ) ವಿರಾಜಪೇಟೆ ಶಾಖೆ ಇದಕ್ಕೆ ಜನತೆಯ ಬೆಂಬಲ ಕೋರಿದೆ.

ಹೊಸಪೇಟೆ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಏರಿಸಿರುವ ಬೆಲೆಗಳನ್ನು ಪ್ರತಿಭಟಿಸಿ ರಾಜ್ಯದಾದ್ಯಂತ ಡಿ.ವೈ.ಎಫ್.ಐ. ಪ್ರದರ್ಶನ ಧರಣಿ ಸತ್ಯಾಗ್ರಹ ನಡೆಸುತ್ತಿದೆ. ಇದರ ಅಂಗವಾಗಿ ಹೊಸಪೇಟೆ ಘಟಕ ಫೆ. 20ರಂದು ಹೊಸಪೇಟೆಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಾಲ್ಲೂಕು ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ತಹಶೀಲ್ದಾರ್‌ರವರ ಮೂಲಕ ರಾಜ್ಯದ ಮುಖ್ಯಮಂತ್ರಿಯವರಿಗೆ ಅರ್ಪಿಸಿರುವ ಮನವಿಯಲ್ಲಿ, ಕೇಂದ್ರ ಸರ್ಕಾರದ ಆರ್ಥಿಕ ನೀತಿಯಿಂದ ಬಜೆಟ್ ಖೋತಾ ಸರಿದೂಗಿಸಲು ಜನರ ದಿನಬಳಕೆಯ ವಸ್ತುಗಳ ಬೆಲೆಗಳನ್ನು ಏರಿಸಿರುವುದನ್ನು ಅಕ್ಕಿ ಖೋತಾ ಮಾಡಿರುವುದನ್ನು ಖಂಡಿಸಲಾಗಿದೆ. ಅದೇ ರೀತಿಯಲ್ಲಿ, ರಾಜ್ಯ ಸರ್ಕಾರ ಹಾಲಿನ ದರ, ಪ್ರಯಾಣ ದರ, ಹೋಟೆಲ್ ತಿಂಡಿ, ವಿದ್ಯುತ್ ದರಗಳನ್ನು ಏರಿಸುವುದನ್ನು ಹೇಳಿಕೆಯಲ್ಲಿ ಖಂಡಿಸಲಾಗಿದೆ. ಕೇರಳದ ಎಡರಂಗ ಸರ್ಕಾರದಂತೆ ಕರ್ನಾಟಕದಲ್ಲಿಯೂ ದಿನ ಬಳಕೆಯ ವಸ್ತುಗಳನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಿಸಬೇಕೆಂದು ಹಾಗೂ ಅಗತ್ಯ ಪ್ರಮಾಣದಲ್ಲಿ ಒದಗಿಸಬೇಕೆಂದು ಒತ್ತಾಯಿಸಲಾಗಿದೆ. ಈ ಮೆರವಣಿಗೆಯ ನೇತೃತ್ವವನ್ನು ಕಾ॥ ನಾಗರಾಜ್, ಆರ್. ಎಸ್.ರವಿ, ಸೋಮಪ್ಪ ವಹಿಸಿದ್ದರು. ಕಾ॥ ಬಾಷಾ, ನೀಲಕಂಠ, ಸೋಮಪ್ಪ, ಶ್ರೀನಿವಾಸ್‌ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಪಿ.ಯು.ಸಿ. ಪ್ರಶ್ನೆ ಪತ್ರಿಕೆಯ ಬಯಲು
ತುರ್ತು ಮಧ್ಯಪ್ರವೇಶಕ್ಕೆ ಶಿಕ್ಷಣ ಸಚಿವರಿಗೆ ಎಸ್.ಎಫ್.ಐ. ಒತ್ತಾಯ

ಪಿ.ಯು.ಸಿ ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಬಯಲಾಗಿವೆಯೆನ್ನಲಾದ ದಟ್ಟವಾದ ವದಂತಿಯ ಹಿನ್ನೆಲೆಯಲ್ಲಿ ತುರ್ತು ತನಿಖೆಯನ್ನು ನಡೆಸಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಮತ್ತು ಪರೀಕ್ಷೆಗಳನ್ನು ನಡೆಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿಯು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಪ್ರಶ್ನೆ ಪತ್ರಿಕೆಗಳು ಬಯಲಾದುದರ ಬಗ್ಗೆ ವಿದ್ಯಾರ್ಥಿಗಳ, ಶಿಕ್ಷಕರು ಮತ್ತು ಪಾಲಕರಲ್ಲಿ ಗೊಂದಲ ಸೃಷ್ಟಿಯಾಗಿದ್ದು ಅತ್ಯಂತ ಆತಂಕದ ಪರಿಸ್ಥಿತಿ ಉಂಟಾಗಿರುವ ಹಿನ್ನೆಲೆಯಲ್ಲಿ ರಾಜ್ಯ ಶಿಕ್ಷಣ ಸಚಿವರು ಕೂಡಲೇ ಮಧ್ಯಪ್ರವೇಶಿಸಿ ತನಿಖೆ ನಡೆಸಿ ಪ್ರತಿಕ್ರಿಯೆ ವ್ಯಕ್ತಪಡಿಸಬೇಕು. ಇಲ್ಲವಾದಲ್ಲಿ ಶೈಕ್ಷಣಿಕ ನೈತಿಕತೆಯೇ ಕುಸಿದು ಬೀಳುವುದು.

ಈ ಬಗ್ಗೆ ಎಸ್.ಎಫ್.ಐ. ನಿಯೋಗವೊಂದು ಶಿಕ್ಷಣ ಸಚಿವರೊಂದಿಗೆ ಚರ್ಚಿಸಲಿದೆ ಎಂದು ರಾಜ್ಯ ಕಾರ್ಯದರ್ಶಿ ಕಾ॥ ಎಸ್.ವೈ.ಗುರುಶಾಂತ್ ಹಾಗೂ ಅಧ್ಯಕ್ಷ ಕಾ॥ ಜಿ.ಸಿ.ಬೈಯಾರೆಡ್ಡಿಯವರು ತಿಳಿಸಿದ್ದಾರೆ.

ಹೊಸಕೋಟೆ ಎಸ್.ಐ. ವಿರುದ್ಧ ಕ್ರಮದ ಭರವಸೆ

ಇದೇ ಮಾರ್ಚ್ 8ರಂದು ಹೊಸಕೋಟೆಯ ಭುವಾಲ್ಕಾ ಸ್ಟೀಲ್ ಇಂಡಸ್ಟ್ರೀಸ್ ಕಾರ್ಮಿಕ ಸಂಘಟನೆಯ ಮುಖಂಡ ಚಿದಾನಂದಯ್ಯನವರನ್ನು ಪೋಲೀಸರು ರಾತ್ರಿ 9ಗಂಟೆಗೆ ಕರೆದೊಯ್ದರು. 10ನೇ ತಾರೀಖಿನವರೆಗೂ ಅವರು ಎಲ್ಲಿದ್ದಾರೆಂದು ತಿಳಿಸಲು ನಿರಾಕರಿಸಿದರು. ಚಿದಾನಂದಯ್ಯನವರ ಹೆಂಡತಿ ಶಾಂತಮ್ಮ ಎಸ್.ಐ.ಯವರನ್ನು ಈ ಬಗ್ಗೆ ಕೇಳಲು ಹೋದಾಗ ಆಕೆಯನ್ನು ತೀವ್ರವಾಗಿ ಥಳಿಸಲಾಯಿತು. ಹೊಸಕೋಟೆ ಪೋಲೀಸ್ ಠಾಣೆಯ ಈ ಎಸ್.ಐ. ವಿರುದ್ಧ ಹೊಸಕೋಟೆಯ ಕಾರ್ಮಿಕರು, ಜನತೆ ಈಗಾಗಲೇ ಹಲವು ದೂರುಗಳನ್ನು ಕೊಟ್ಟಿದ್ದಾರೆ. ಭುವಾಲ್ಕಾ ಇಂಡಸ್ಟ್ರೀಸ್, ಹೆಚ್ಚಾಗಿ ಮಹಿಳೆಯರೇ ಇರುವ ಹಾರ್ವರ್ಡ್ ಗಾರ್ಮೆಂಟ್ಸ್ ಹಾಗೂ ಇತರ ಕಾರ್ಖಾನೆಗಳ ಕಾರ್ಮಿಕರ ಮೇಲೆ ಸುಳ್ಳು ಮೊಕದ್ದಮೆ ಹಾಕಿಸಿ ಬೆದರಿಸುವುದರ ವಿರುದ್ಧ ಈಗಾಗಲೇ ಸಿ.ಐ.ಟಿ.ಯು. ಪ್ರತಿಭಟಿಸಿ ಸಂಬಂಧಪಟ್ಟವರ ಗಮನಕ್ಕೆ ತರಲಾಗಿತ್ತು.

ಇತ್ತೀಚಿನ ಈ ಘಟನೆಯಾದ ನಂತರವೂ ಠಾಣೆಗೆ ದೂರನ್ನು ನೀಡಲಾಗಿತ್ತು. ಮಾತ್ರವಲ್ಲದೆ ಸಿ.ಐ.ಟಿ.ಯು. ಬೆಂಗಳೂರು ಜಿಲ್ಲಾ ಸಮಿತಿಯ ಉಪಾಧ್ಯಕ್ಷರಾದ ಕಾ॥ ಟಿ.ಎಸ್.ಅನಂತರಾಮ್, ಕಾರ್ಯದರ್ಶಿಗಳಾದ ಕಾ॥ ಆರ್. ಶ್ರೀನಿವಾಸ್ ಮತ್ತು ಜಾನ್ ವಿನ್ಸೆಂಟ್ ಹಾಗೂ ಕೋಶಾಧಿಕಾರಿ ಕಾ॥ ನಾರಾಯಣರಾವ್ ಭಾನುರವರು ಸಹಿ ಹಾಕಿದ ಮನವಿ ಪತ್ರವನ್ನು ಬೆಂಗಳೂರು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ರವರಿಗೆ ದಿ. 13ರಂದು ಸಲ್ಲಿಸಲಾಯಿತು. ಪ್ರಜಾಪ್ರಭುತ್ವ ಚಳುವಳಿಯಲ್ಲಿ ಸಕ್ರಿಯರಾಗಿರುವ ವಿವಿಧ ಕಾರ್ಖಾನೆಗಳ ಕಾರ್ಮಿಕರಿಗೆ, ಸ್ಥಳೀಯ ಜನತೆಗೆ ಸದಾ ಕಿರುಕುಳ ಕೊಡುತ್ತಿರುವ, ಬೆದರಿಸುತ್ತಿರುವ ಈ ಪೋಲೀಸ್ ಅಧಿಕಾರಿಯನ್ನು ಸಸ್ಪೆಂಡ್ ಮಾಡಿ ಆತನ ಅತ್ಯಾಚಾರಗಳ ಬಗ್ಗೆ ತನಿಖೆ ನಡೆಸಬೇಕೆಂದು ಈ ಮನವಿ ಪತ್ರದಲ್ಲಿ ಒತ್ತಾಯಿಸಲಾಗಿತ್ತು.

ಐವತ್ತು ಮಹಿಳೆಯರೂ ಸೇರಿದಂತೆ 25 0 ಕಾರ್ಮಿಕರು ಒಂದು ಪ್ರತಿಭಟನಾ ಮೆರವಣಿಗೆ ನಡೆಸಿ ಪೋಲೀಸ್ ಸೂಪರಿಂಟೆಂಡೆಂಟರ ಕಛೇರಿಯೆದುರು ಧರಣಿ ನಡೆಸಿದರು. ಜಾನ್‌ವಿನ್ಸೆಂಟ್, ರಾಮಚಂದ್ರಯ್ಯ, ರಾಮಯ್ಯ ಮತ್ತು ಅನುಸೂಯಾರವರಿದ್ದ ಒಂದು ಪ್ರತಿನಿಧಿ ಮಂಡಲವೂ ಪೋಲೀಸ್ ಸೂಪರಿಂಟೆಂಡೆಂಟರನ್ನು ಭೇಟಿಯಾಗಿ ಮಹಿಳೆಯನ್ನು ತೀವ್ರವಾಗಿ ಥಳಿಸಿದ ಈ ಎಸ್.ಐ.ಯನ್ನು ಸಸ್ಪೆಂಡ್ ಮಾಡಬೇಕೆಂದು ಒತ್ತಾಯಿಸಿತು.

ಈಗಾಗಲೇ ಈ ಎಸ್.ಐ.ನ ಅತ್ಯಾಚಾರಗಳ ಬಗ್ಗೆ ತನಿಖೆಗೆ ಆಜ್ಞೆ ನೀಡಲಾಗಿದೆ. ತನಿಖೆಯ ವರದಿ ಬಂದ ಮೇಲೆ ಸೂಕ್ತ ಕ್ರಮ ಕೈಗೊಳಲಾಗುವುದೆಂದು ಪೋಲೀಸ್ ಸೂಪರಿಂಟೆಂಡೆಂಟ್ ಭರವಸೆ ನೀಡಿದರು.

ಅಪ್ಪಿಕೊ ಯಮರಾಯಾ



ಅಪ್ಪಿಕೊ ಯಮರಾಯಾ
ಬಿಗಿಯಾಗಿ ಅಪ್ಪಿಕೊ ನಮ್ಮ ಸಂಗಾತಿಯನ್ನು
ಮನದಣಿಯೆ ಖುಷಿಪಡು ಅಪ್ಪಿಕೊಂಡು ನಮ್ಮ ಸಫ್‌ದರ್‌ನನ್ನು
ತೀರ ಅಪರೂಪ ನಿನಗೆ ಇಂಥವರ ಅಪ್ಪುಗೆ!

ಎಂಥ ವಿರೋಚಿತ ಸ್ವಾಗತ
ನೀನು ಕಳಿಸಿದ ಸಾವಿಗೆ!
ಖೂಳರ ಕಬ್ಬಿಣದ ಸಲಾಕೆಗಳು ಮಳೆಯಾಗಿ
ಸುರಿಯುವಾಗ ನಿಂತನು ಅಡ್ಡ ಬಾಗಿಲಿಗೆ ತಾನು ಕುಸಿದರೂ ಸೈ
ಅಸುನೀಗಿದರೂ ಸೈ ತನ್ನವರು ಉಳಿಯಲೆಂದು
ಹೃದಯ ಉಕ್ಕಾಗಿಸಿ ಉಕ್ಕಿ ಹರಿಸಿದನು
ಧೈರ್ಯವನ್ನು ಪ್ರೇಮವನ್ನು ಮಾನವತೆಯನ್ನು.

ಹಾರಿ ಹಾರಿ ಮೇಲೇರಿ ಹೋಗುವಾಗ
ನಿನ್ನ ದೂತರ ಜೊತೆ ಅವನ ಜೀವ ಪಕ್ಷಿ
ಕೆಳಗೆ ನೋಡಿರಲು ಸಾಕು ಕಂಬನಿದುಂಬಿದ ಕಂಗಳಿಂದ
ತನ್ನ ಪ್ರೀತಿಯ ಭಾರತವನ್ನು
ಬಳಲಿ ಬಾಡಿರುವ ಭಾರತವನ್ನು
ಸೊರಗಿ ಸೋತಿರುವ ಭಾರತವನ್ನು
ಕುದಿಯುತ್ತಿರುವ ಭಾರತವನ್ನು
ಶೋಷಣೆಯ ವಿರುದ್ಧ ಸಿಡಿದೇಳುತ್ತಿರುವ ಭಾರತವನ್ನು
ಒಂದು ಕೋರಿಕೆ ನಮ್ಮದು ನಾರಿಸಬೇಡ ಯಮರಾಯಾ
ಸ್ವರ್ಗ ಸಲ್ಲದು ಅವನಿಗೆ ನೂಕು ನರಕಕ್ಕೇನೆ
ನಡೆಸುವನು ನಮ್ಮ ಸಫ್ದರ್ ಅಲ್ಲಿಯೂ
ತನ್ನ ಮನದಾಶಯಗಳ ಸಾಕಾರಗೊಳಿಸುವ ಪ್ರಯತ್ನವನ್ನು
ನಿಮಿಷ ತಡವಿಲ್ಲದೆ
ತಿಳಿಯದಂತೆ ಮಾಡುವನು ವ್ಯತ್ಯಾಸ ನಿನಗೇ
ನಿನ್ನ ಸ್ವರ್ಗ ನರಕಗಳದ್ದು!

ವ್ಯಥೆ ಬೇಡ ನಿನಗೆ ಸ್ವಲ್ಪವೂ ಅವನನ್ನು
ಕೆಲಸವಿನ್ನೂ ಮುಗಿಯದಿರುವಾಗಲೇ ಒಯ್ದಿರುವದಕ್ಕಾಗಿ
ಇರುವೆವು ನಾವಿಲ್ಲಿ ಹಣತೆಯ ಬಾಳಜ್ಯೋತಿಯನ್ನು ಅವರು
ಹೊಸಕಿ ನಂದಿಸಿದಾಗಲೇ ಅದರಿಂದಲೇ
ಹತ್ತಿ ಉರಿಯುತ್ತಿರುವ ದೊಂಬಿದೀವಟಿಗೆಗಳು.
ಯಮರಾಯಾ ಖುಷಿಪಡು ಇನ್ನೂ ಖುಷಿ ಪಡು.
ಮುಂಬರುವ ದಿನಗಳಲ್ಲಿ ನಾವೂ
ನೂರು ಸಾವಿರ ಸಫ್ದರ್ ಹಕ್ಕಿಗಳಾಗಿ
ಬರುವೆವು ನಿನ್ನ ಅಪ್ಪುಗೆಯೊಳಗೆ
[illegible] ಹೋರಾಟಗಳೊಂದಿಗೆ
-ಸಂಕುಲ

ಕಾಂಗ್ರೆಸ್ ಪಕ್ಷವನ್ನು ಅಧಿಕಾರದಿಂದ ಕೆಳಗಿ

ಭೂಮಿಗಾಗಿ ಭೂಸುಧಾರಣೆಗಾಗಿ ಹೋರಾಡಲು ಸಜ್ಜು;

ಎಲ್ಲಾ ರೈತರ ಸಮಸ್ಯೆಗಳಿಗಾಗಿ ಹೋರಾಡಿ, ರೈತರ ಐಕ್ಯತೆ ಕಟ್ಟಲು ದೃಢ ನಿರ್ಣಯ

ಶ್ರೀಮತಿ ಇಂದಿರಾಗಾಂಧಿಯವರ ಹತ್ಯೆಯ ಸಂದರ್ಭದಲ್ಲಿ, ದೇಶದಲ್ಲಿ ಮೂಡಿಬಂದ ಸಹಾನುಭೂತಿಯ ಅಲೆಯಲ್ಲಿ ಭಾರಿ ಬಹುಮತದಿಂದ ಅಧಿಕಾರಕ್ಕೆ ಬಂದ ರಾಜೀವ್‌ಗಾಂಧಿ ನೇತೃತ್ವದ ಕಾಂಗ್ರೆಸ್(ಐ) ಪಕ್ಷದ ಸರ್ಕಾರ ಇಂದು ಜನತೆಯ ಎಲ್ಲಾ ಸಹಾನುಭೂತಿಯನ್ನು ಕಳೆದುಕೊಂಡಿದೆ. ಯಾವುದೇ ಮೂಲಭೂತ ಸಮಸ್ಯೆಗೆ ಪರಿಹಾರ ಒದಗಿಸುವಲ್ಲಿ ರಾಜೀವ್‌ಗಾಂಧಿ ಸರ್ಕಾರ ವಿಫಲವಾಗಿದೆ ಮಾತ್ರವಲ್ಲ, ಅದು ಅನುಸರಿಸುತ್ತಾ ಬಂದಿರುವ ನೀತಿಯಿಂದಾಗಿ ಸಮಸ್ಯೆಗಳು ಇನ್ನಷ್ಟು ಉಲ್ಬಣಗೊಂಡಿವೆ. ಬಡತನದ ರೇಖೆಗಿಂತ ಕೆಳಗೆ ಬದುಕುತ್ತಿರುವವರ ಸಂಖ್ಯೆ ಹೆಚ್ಚಾಗಿದ್ದು ನಿರುದ್ಯೋಗಿಗಳ ಸಂಖ್ಯೆ ಬೃಹದಾಕಾರವಾಗಿ ಬೆಳೆದಿದೆ. ರಾಜೀವ್‌ಗಾಂಧಿಯವರ ನೂತನ ಆರ್ಥಿಕ ನೀತಿ ನೂತನ ಜವಳಿ ನೀತಿಯಿಂದಾಗಿ ಲಕ್ಷಾಂತರ ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದು ಉದ್ಯೋಗದಲ್ಲಿದ್ದ ಲಕ್ಷಾಂತರ ಕಾರ್ಮಿಕರು ಉದ್ಯೋಗ ಕಳೆದುಕೊಂಡು ಬೀದಿ ಪಾಲಾಗಿದ್ದಾರೆ. ರೈತರು ಭೂಮಿಯನ್ನು ಕಳೆದುಕೊಂಡು ಕೃಷಿ ಕೂಲಿಕಾರರಾಗುತ್ತಿದ್ದಾರೆ. ಕೃಷಿ ಕೂಲಿಕಾರರಿಗೆ ತೀವ್ರ ಬಿಕ್ಕಟ್ಟಿಗೆ ಒಳಗಾಗಿದ್ದು ಚಿಕ್ಕಚಿಕ್ಕ ಹಿಡುವಳಿದಾರ ವರ್ಷವಿಡೀ ಕೆಲಸ ಸಿಗದೆ, ಕೆಲಸ ಸಿಕ್ಕಾಗೆಲ್ಲಾ ಜೀವನಾವಶ್ಯ ಕೂಲಿ ಸಿಗದೆ ಅಮಾನವೀಯ ಬದುಕನ್ನು ಬದುಕುತ್ತಿದ್ದಾರೆ. ಕಷ್ಟಪಟ್ಟು ಬೆಳೆದ ಬೆಳೆಗೆ ಲಾಭದಾಯಕ ಬೆಲೆ ಸಿಗದಂತಾಗಿ ರೈತ ದಿವಾಳಿಯಾಗಿದ್ದಾನೆ. ಒಟ್ಟಾರೆಯಾಗಿ ಜನ ಸಾಮಾನ್ಯರ ಕೈಯಲ್ಲಿ ದುಡ್ಡು ಇಲ್ಲದಂತಾಗಿ, ಅವರು ಕೊಳ್ಳುವ ಶಕ್ತಿ ತೀವ್ರವಾಗಿ ಕುಸಿದು ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆ ಇಲ್ಲದಂತಾಗಿ, ಕಾರ್ಖಾನೆಗಳು ರೋಗಗ್ರಸ್ತವಾಗಿ ಮುಚ್ಚಿ ಹೋಗುತ್ತಿವೆ.

ಈ ಹಿನ್ನಲೆಯಲ್ಲಿ ಇಲ್ಲಿಯವರೆಗೆ ಕಾಂಗ್ರೆಸ್(ಐ) ಜೊತೆಯಲ್ಲಿ ನಿಂತ ಕೆಳವರ್ಗದ ಜನ ಕಾಂಗ್ರೆಸ್(ಐ)ನಿಂದ ದೂರ ಸರಿಯುತ್ತಿದ್ದಾರೆ. ಎಲ್ಲಾ ಜನ ವಿಭಾಗಗಳ ಮಧ್ಯದಲ್ಲಿ ಇಂದು ಕಾಂಗ್ರೆಸ್(ಐ) ಬಗ್ಗೆ ತೀವ್ರ ಅತೃಪ್ತಿ ಬೆಳೆದು ಬರುತ್ತಿದೆ. ಹತ್ತಾರು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳು ಅಧಿಕಾರಕ್ಕೆ ಬಂದಿರುವುದು ಜನತೆಯಲ್ಲಿ ಕಾಂಗ್ರೆಸ್ ಬಗ್ಗೆ ಮೂಡಿ ಬಂದಿರುವ ಅತೃಪ್ತಿಗೆ ಒಂದು ನಿದರ್ಶನವಾಗಿದ್ದರೆ ಇತ್ತೀಚೆಗೆ ಕಾರ್ಮಿಕರು ರೈತರು ಮಾತ್ರವಲ್ಲ ಮಧ್ಯಮ ವರ್ಗದ ನೌಕರರು ಸಹ ಬೀದಿಗಿಳಿದು ದೀರ್ಘಾವಧಿಯ ಹೋರಾಟಗಳನ್ನು ನಡೆಸುತ್ತಿರುವುದು ಇನ್ನೊಂದು ನಿದರ್ಶನವಾಗಿದೆ.

ಅದೇ ಸಂದರ್ಭದಲ್ಲಿ ತನ್ನ ವಿರುದ್ಧ ಜನತೆಯಲ್ಲಿ ಬೆಳೆದು ಬರುತ್ತಿರುವ ಹೋರಾಟದ ಅಲೆಯನ್ನು ಹಿಮ್ಮೆಟ್ಟಿಸಲು ಕಾಂಗ್ರೆಸ್(ಐ) ಸರ್ಕಾರ ಹೆಚ್ಚೆಚ್ಚು ಸರ್ವಾಧಿಕಾರಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಕಾರ್ಮಿಕರ ಟ್ರೇಡ್ ಯೂನಿಯನ್ ಹಕ್ಕುಗಳನ್ನು, ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಸಿದುಕೊಳ್ಳಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಜನತೆಯ ಗಮನವನ್ನು ಅವರ ಮೂಲಭೂತ ಸಮಸ್ಯೆಗಳಿಂದ ಬೇರೆಡೆಗೆ ತಿರುಗಿಸಲು ಅವರ ಮಧ್ಯದಲ್ಲಿ ಭಾಷೆ, ಗಡಿ ಸಮಸ್ಯೆ ಮೊದಲಾದ ವಿವಾದಗಳನ್ನು ಪ್ರಚೋದಿಸಲಾಗುತ್ತಿದೆ. ಜನತೆಯು ತನ್ನಿಂದ ದೂರ ಸರಿಯುತ್ತಿದ್ದಂತೆ ಅಧಿಕಾರದಲ್ಲಿ ಉಳಿಯುವ ಉದ್ದೇಶಕ್ಕಾಗಿ ಕಾಂಗ್ರೆಸ್(ಐ) ಪಕ್ಷ ಎಲ್ಲಾ ವಿದಧ ಕೋಮುವಾದಿ, ಜಾತಿವಾದಿ, ವಿಭಜನಕಾರಿ ಶಕ್ತಿಗಳೊಂದಿಗೆ ಒಂದಾಗುತ್ತಿದೆ. ಕಾಂಗ್ರೆಸ್(ಐ)ನ ಈ ಸಮಯಸಾಧಕ ನೀತಿಯಿಂದಾಗಿ ಈ ಛಿದ್ರಕಾರಿ ಶಕ್ತಿಗಳಿಗೆ ಕುಮ್ಮಕ್ಕು ಸಿಕ್ಕಂತಾಗಿ ಅವು ಯಾವ ಮುಚ್ಚುಮರೆ ಇಲ್ಲದೆ ಇಂದು ಜನತೆಯ ಐಕ್ಯತೆಯನ್ನು, ಧೇಶದ ಸಮಗ್ರತೆಯನ್ನು ನಾಶ ಮಾಡಲು ಹೆಣಗಾಡುವಂತಾಗಿದೆ.

ಆದ್ದರಿಂದ ದೇಶದ ಕಾರ್ಮಿಕರ, ರೈತರ ಮಧ್ಯಮ ವರ್ಗದ ನೌಕರರ ಮತ್ತು ಸಮಸ್ತ ದುಡಿಯುವ ಜನತೆಯ ಹಿತದೃಷ್ಟಿಯಿಂದ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವ ದೃಷ್ಟಿಯಿಂದ ಮುಂಬರುವ ಚುನಾವಣೆಯಲ್ಲಿ ರಾಜೀವ್‌ಗಾಂಧಿ ಸರ್ಕಾರವನ್ನು ಸೋಲಿಸುವುದು, ಮತ್ತು ಅದೇ ಸಮಯದಲ್ಲಿ ಕೋಮುವಾದಿ, ಜಾತಿವಾದಿ, ಶಕ್ತಿಗಳನ್ನು ಜನತೆಯಿಂದ ಪ್ರತ್ಯೇಕಿಸುವುದು ಮತ್ತು ಕಾಂಗ್ರೆಸ್(ಐ)ಗೆ ಬದಲಿಯಾಗಿ ಎಡ ಪ್ರಜಾಪ್ರಭುತ್ವವಾದಿ ಜಾತ್ಯಾತೀತ ಶಕ್ತಿಗಳನ್ನು ಬೆಂಬಲಿಸಿ ಗೆಲ್ಲಿಸುವುದು ಅತೀ ತುರ್ತಾದ ಕರ್ತವ್ಯವಾಗಿದೆ ಎಂದು ಮಾರ್ಚ್ 14 ರಿಂದ 16ರವರೆಗೆ ಬಳ್ಳಾರಿಯಲ್ಲಿ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ 9ನೇ ರಾಜ್ಯ ಸಮ್ಮೇಳನವು ಪರಿಗಣಿಸುತ್ತದೆ. ಮತ್ತು ಈ ಕರ್ತವ್ಯವನ್ನು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜಾತ್ಯಾತೀತ ಶಕ್ತಿಗಳನ್ನು ಬೆಂಬಲಿಸಿ ಗೆಲ್ಲಿಸುವುದು ಅತೀ ತುರ್ತಾದ ಕರ್ತವ್ಯವಾಗಿದೆ ಎಂದು ರಾಜ್ಯದ ರೈತರಲ್ಲಿ ಮನವಿ ಮಾಡಿಕೊಂಡಿದೆ.

ಕರ್ನಾಟಕ ಪ್ರಾಂತ ರೈತ ಸಂಘದ 9ನೇ ಸಮ್ಮೇಳನ ಇದೀಗ ತಾನೇ ಯಶಸ್ವಿಯಾಗಿ ಮುಕ್ತಾಯವಾಗಿದೆ. ರಾಯಚೂರಿನಲ್ಲಿ ನಡೆದ 8ನೇ ಸಮ್ಮೇಳನದಿಂದ 9ನೇ ಸಮ್ಮೇಳನದವರೆಗಿನ ಅವಧಿ ಕರ್ನಾಟಕ ಪ್ರಾಂತ ರೈತ ಸಂಘದ ಇತಿಹಾಸದಲ್ಲಿ ಒಂದು ಪ್ರಮುಖ ಘಟ್ಟ. ಅಷ್ಟೇ ಏಕೆ ಅಖಿಲ ಭಾರತ ಕಿಸಾನ್ ಸಭಾದ ಇತಿಹಾಸದಲ್ಲಿ ಕೂಡ ಅವಧಿ ತನ್ನ ಗುರುತನ್ನುಳಿಸುತ್ತದೆ ಎಂದ ಮೇಲೆ ಕರ್ನಾಟಕದ ಮಾತೇನು?

ಕರ್ನಾಟಕ ಪ್ರಾಂತ ರೈತ ಸಂಘ 1986ರಲ್ಲಿ ಮಹತ್ವಪೂರ್ಣವಾದ ಹೆಜ್ಜೆಯಿಟ್ಟ ಸೆಪ್ಟೆಂಬರ್‌ನಲ್ಲಿ 'ವಿಧಾನಸೌಧ ಚಲೋ' ಸಂಘಟಿಸಿತು. ಇದೇ ಅವಧಿಯಲ್ಲಿ ಮರವರುಷ ಪ್ರಥಮ ಅಖಿಲ ಭಾರತ ಚಳುವಳಿ ಸಂಘಟಿಸಲ್ಪಟ್ಟಿರೆ, 1988ರಲ್ಲಿ ಮತ್ತೊಂದು ದೃಢವಾದ ಹೆಜ್ಜೆಯಿರಿಸಿ ಅಖಿಲ ಭಾರತ ಎಡ ಪಕ್ಷಗಳ ನೇತೃತ್ವದ ಐಕ್ಯ ಕಾರ್ಯಾಚರಣೆಯನ್ನು ಸಂಘಟಿಸಿತು. ಈ ಪ್ರಮುಖ ಹೆಜ್ಜೆಗಳ ಜೊತೆಗೆ ಕರ್ನಾಟಕದಲ್ಲಿ ನಡೆದ ಪ್ರಥಮ ಅಖಿಲ ಭಾರತ ಕಿಸಾನ್ ಮಂಡಳಿಯ ಸಭೆ ಹಾಗೂ ಅದರೊಡನೆ ನಡೆದ ರೈತರ ಬೃಹತ್ ರ್‍ಯಾಲಿ. ಇವೆಲ್ಲಾ ಈ ಅವಧಿಯ ಪ್ರಮುಖ ಬೆಳವಣಿಗೆಗಳು.

ಇದೇ ಅವಧಿಯಲ್ಲಿಯೇ ಕರ್ನಾಟಕ ಪ್ರಾಂತ ರೈತ ಸಂಘದ ಸದಸ್ಯತ್ವ ಒಂದು ಲಕ್ಷದ ಗೆರೆಯನ್ನು ದಾಟಿದೆ. ಇದರೊಡನೆಯೇ ಪ್ರಾಂತ ರೈತ ಸಂಘದ ಕಾರ್ಯಕರ್ತರಿಗಾಗಿ ನಡೆದ ರಾಜ್ಯ ಮಟ್ಟದ ತರಬೇತಿ ಶಿಬಿರ ಹಾಗೂ ನಂತರ ಒಂದರ ಬೆನ್ನ ಹಿಂದೆ ಒಂದರಂತೆ ಎಲ್ಲಾ ಪ್ರಮುಖ ಜಿಲ್ಲೆಗಳಲ್ಲಿ ನಡೆದ ಜಿಲ್ಲಾಮಟ್ಟದ ಕಾರ್ಯಕರ್ತರ ತರಬೇತಿ ಶಿಬಿರಗಳು ಪ್ರಮುಖ ಸಂಘಟನಾತ್ಮಕ ಬೆಳವಣಿಗೆ. ರಾಜ್ಯದ ರೈತ ಸಂಘಟನೆಯ ಅಧ್ಯಯನ ನಡೆಸಿ ಸಂಘಟನಾ ವರದಿಯನ್ನು ಅಂಗೀಕರಿಸಿದ್ದು ಮತ್ತೊಂದು ಹೆಜ್ಜೆ. ಇವು ಸಂಘಟನೆಯ ವ್ಯಾಪ್ತಿಗೆ ಹಾಗೂ ದೃಢೀಕರಣಕ್ಕೆ ಕಾರಣವಾಗಿದೆ.

ಈ ಅವಧಿಯಲ್ಲಿ ಭೂಮಿಗಾಗಿ ಹಲವಾರು ಜಿಲ್ಲೆಗಳಲ್ಲಿ ಧೀರೋದಾತ್ತ ಹೋರಾಟಗಳು ನಡೆದಿವೆ. ಪೋಲೀಸರ ಭೂಮಾಲಕರ ಹಾಗೂ ಧಾರ್ಮಿಕ ಮಠಮಾನ್ಯಗಳ ಭಯಂಕರ ಶಕ್ತಿಗಳು ರೈತ ಸಂಘ... ಹಲವಾರು ಕಡೆಗಳಲ್ಲಿ ಪರಿಣಾಮಕಾರಿಯಾಗಿ... ಇಂತಹ ಹಲವಾರು ಹೋರಾಟಗಳು ರೈತ ಸಂಘ...

ಇದೇ ಅವಧಿಯಲ್ಲಿ ರಾಜ್ಯದಲ್ಲಿ ... ಸಮಾವೇಶ, ಈರುಳ್ಳಿ ಬೆಳೆಗಾರರ ಸಮಸ್ಯೆಗಳ... ನಡೆಯುತ್ತಿರುವ ಆಯಾಮಟದ ಅಭಿವ್ಯಕ್ತಿ... ಮುಂದುವರಿದು ರಾಜ್ಯ ಸರ್ಕಾರವನ್ನು ... ಅವಧಿಯಲ್ಲಿ ಬರಗಾಲ ಪೀಡಿತ ರೈತರ ಕೃ... ಕೈಗೊಂಡಿವೆ. ಕಾರ್ಮಿಕರು ರೈತರಿಗೆ ನೆವು ನಿ... ನೀರಾವರಿ ರೈತರ ತಾತ್ಕಾಲಿಕ ಬೇಡಿಕೆಗಳಿಗಾಗಿ ...

ಪ್ರಥಮವಾಗಿ ಕರ್ನಾಟಕದಲ್ಲಿ ಕೃ... ಪ್ರಾಂತ ರೈತ ಸಂಘ ಕಾರಣವಾದುದು ಕ... ಮಹತ್ವದ ಬೆಳವಣಿಗೆ.

ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ... ಗುಣಾತ್ಮಕವಾದ ಬದಲಾವಣೆಯನ್ನು ಪ್ರತಿಬಿಂ... ನಮ್ಮ ಸಂಘಟನೆಯ ದೃಢತೆಯನ್ನು, ಬ... ಹೊರಗೆಡವಿದ ಸಮ್ಮೇಳನ ರೈತ ಸಂಘದ ಪ... ಈ ಸಮ್ಮೇಳನ ಕೈಗೊಂಡ ಕೆಲವು ಪ್ರಮುಖ ನಿ...

"ಹಾರಲಿ ಹಾರಲಿ ಕೆಂಬಾವುಟ ಹಾ...

"ಬೆಳೆಯಲಿ ಬೆಳೆಯಲಿ ರೈತ ಸಂ...

'ಹರಿಜನ ಮತ್ತು ಗಿರಿಜನರ ಮೇಲೆ ಯಾವುದೇ ಮೂಲೆಯಲ್ಲಿ ದಬ್ಬಾಳಿಕೆ ನಡೆದರೂ ಪ್ರತಿಭಟಿಸಿ'

ಶತಮಾನಗಳಿಂದಲೂ ಸಮಾಜದ ತುಳಿತಕ್ಕೆ ಒಳಗಾಗಿರುವ ಶೋಷಿತ ಹರಿಜನ ಗಿರಿಜನರನ್ನು ಸಾಮಾಜಿಕವಾಗಿ ಮೇಲೆತ್ತಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಅನೇಕ ಕಾನೂನುಗಳನ್ನು ರಚಿಸಿದ್ದರೂ ಅದರ ಉಲ್ಲಂಘನೋಪಾದಿಯಲ್ಲಿ ಇಂದಿಗೂ ರಾಜ್ಯದ್ಯಂತ ಹರಿಜನ ಮತ್ತು ಗಿರಿಜನರ ಮೇಲೆ ವ್ಯಾಪಕವಾಗಿ ನಡೆಯುತ್ತಿರುವ ದಬ್ಬಾಳಿಕೆಗೆ ಕಡಿವಾಣವಿಲ್ಲದಂತೆ ಸಾಗುತ್ತಿದೆ. ಅದರಲ್ಲೂ ಮುಖ್ಯವಾಗಿ ಜಿಲ್ಲಾ ಪರಿಷತ್ ಮತ್ತು ಮಂಡಳ ಪಂಚಾಯ್ತಿ ಚುನಾವಣೆಗಳ ನಂತರ ಅವರ ಮೇಲೆ ನಡೆಯುತ್ತಿರುವ ಅತಿರೇಕಗಳು ಹೆಚ್ಚಾಗಿವೆ ಮತ್ತು ಕ್ರೂರವಾಗಿವೆ. ಮಲ ತಿನಿಸುವ ಪ್ರಕರಣಗಳು. ಸಾಮಾಜಿಕ ಬಹಿಷ್ಕಾರಗಳು ಹರಿಜನ ಗಿರಿಜನ ಮಹಿಳೆಯರ ಮೇಲೆ ಅತ್ಯಾಚಾರಗಳು ದಿನ ದಿನಕ್ಕೆ ಹೆಚ್ಚಾಗುತ್ತಿವೆ.

ಹಳ್ಳಿಗಾಡಿನ ಭೂಮಾಲೀಕರು ಮತ್ತು ಅವರ ಏಜೆಂಟರುಗಳು ಹರಿಜನ ಗಿರಿಜನ ಸೂರುಗಳಿಗೆ ಬೆಂಕಿ ಹಚ್ಚುವುದು, ಊರುಗಳಲ್ಲಿ ಬಹಿಷ್ಕಾರ ಹಾಕುವುದು ಇಂತಹ ಹೇಯ ಘಟನೆಗಳು ಹೆಚ್ಚಾಗುತ್ತಿವೆ.

ಇದೇ ಸಮಯದಲ್ಲಿ ಹರಿಜನ ಮತ್ತು ಗಿರಿಜನರಲ್ಲಿ ಬೆಳೆದು ಬರುತ್ತಿರುವ ಜಾತಿಯ ಶಕ್ತಿಗಳು ಮತ್ತು ವಿಚ್ಛಿದ್ರಕಾರಿ ಶಕ್ತಿಗಳು ಇದನ್ನು ಉಪಯೋಗಿಸಿಕೊಂಡು ಅವರನ್ನು ಪ್ರಜಾಪ್ರಭುತ್ವ ಚಳುವಳಿಗಳಿಂದ ಬೇರ್ಪಡಿಸಲು ಸತತವಾದ ಪ್ರಯತ್ನಗಳನ್ನು ಮಾಡುತ್ತಿವೆ. ಇಂತಹ ಶಕ್ತಿಗಳನ್ನು ನಾವು ಗುರ್ತಿಸಿ ಅವುಗಳ ವಿರುದ್ಧ ಎಚ್ಚರಿಕೆ ವಹಿಸಬೇಕಾಗಿದೆ.

ಹರಿಜನ ಮತ್ತು ಗಿರಿಜನರ ಮೇಲೆ ಹೆಚ್ಚಾಗುತ್ತಿರುವ ಈ ದಬ್ಬಾಳಿಕೆ ಮತ್ತು ದೌರ್ಜನ್ಯಗಳನ್ನು ಖಂಡಿಸುವುದೇ ಅಲ್ಲದೆ ಅವುಗಳ ತೀವ್ರ ರೀತಿಯಾದಂತಹ ಹೋರಾಟಗಳನ್ನು ನಡೆಸಲು 9ನೇ ಪ್ರಾಂತ ರೈತ ಸಮ್ಮೇಳನ ನಿರ್ಣಯಿಸಬೇಕಾಗಿದೆ. ಅಷ್ಟೇ ಅಲ್ಲ ಎಲ್ಲೇ ಯಾವ ಮೂಲೆಯಲ್ಲಾಗಲಿ ಹರಿಜನ ಮತ್ತು ಗಿರಿಜನರ ಮೇಲೆ ದಬ್ಬಾಳಿಕೆ ನಡೆದರೆ ತಕ್ಷಣ ಅವುಗಳ ವಿರುದ್ಧ ಸ್ಥಳೀಯ ಘಟಕಗಳು ಪ್ರತಿಭಟಿಸಿ ಹೋರಾಟವನ್ನು ರೂಪಿಸಬೇಕೆಂದು 9ನೇ ರಾಜ್ಯ ಸಮ್ಮೇಳನವು ಕರೆ ನೀಡುತ್ತದೆ.

ರೇಷ್ಮೆ ಕೃಷಿ ಮತ್ತು ಇದರ ಉದ್ದಿಮೆ ಬಗ್ಗೆ ನಿರ್ಣಯ

ರೇಷ್ಮೆ ಕೃಷಿ ಭಾರತ ದೇಶದಲ್ಲಿಯೇ ಮಣ್ಣಿನ ಗುಣಾತ್ಮಕವಾದ ಮತ್ತು ಹೆಚ್ಚು ಇಳುವರಿಯನ್ನು ಕೊಡುವ ಪ್ರದೇಶದ ಕರ್ನಾಟಕ ರಾಜ್ಯವಾಗಿದೆ. ಇದು ರೇಷ್ಮೆ ಕೃಷಿಯೂ ಹೌದು; ಕೈಗಾರಿಕೆಯೂ ಹೌದು. ಹೀಗಿರುವಾಗ ಈ ಉದ್ದಿಮೆಯಲ್ಲಿ ರೇಷ್ಮೆ ಹುಳ ಸಾಕಿ ಗೂಡನ್ನು ಉತ್ಪಾದಿಸುವ ಪ್ರಥಮ ಘಟ್ಟ ರೈತರಾಗಿದ್ದು 2ನೇ ಘಟ್ಟ ಗೂಡಿನಿಂದ ದಾರ ತೆಗೆದು ಹುರಿ ಮಾಡುವುದು, 3ನೇ ಘಟ್ಟ ಈ ಹುರಿಯಿಂದ ಬಟ್ಟೆ ನೇಯುವುದು ಈ ಮೂರು ಘಟ್ಟಗಳಲ್ಲಿ ಭಾಗವಹಿಸುವವರು ಪ್ರಥಮವಾಗಿ ರೈತರು, 2ನೇಯವರು ರೀಲರುಗಳು, 3ನೇಯದು ಮಿಲ್ಲು ಮಾಲೀಕರು. ಇದು ಬಹಳ ಸೂಕ್ಷ್ಮವಾದ ಬೆಳೆಯಾಗಿದ್ದು ರೈತರು ಬಹಳ ಹುಷಾರಿನಿಂದ ಕಷ್ಟಪಟ್ಟು ಈ ಬೆಳೆ ಬೆಳೆಯಬೇಕಾಗಿದೆ. ಇದಕ್ಕೆ ನೀರು ಭೂಮಿ ಹವಾಗುಣ ಸರಿಹೊಂದುವ ಮನೆಯನ್ನು ರೈತರು ಬಹಳ ಶ್ರಮಪಟ್ಟು ಒದಗಿಸಬೇಕಾಗಿದೆ. ಇಷ್ಟೆಲ್ಲಾ ಕಷ್ಟಪಟ್ಟು ಈ ಬೆಳೆಯನ್ನು ಬೆಳೆದರೆ ಮಿಲ್ಲು ಮಾಲೀಕರ ತಂತ್ರದಿಂದ ರೀಲರುಗಳು ನಿಗದಿಯಾದ ಲಾಭದಾಯಕ ಬೆಲೆ ಕೊಡದೆ ರೈತರ ಶೋಷಣೆಯಾಗುತ್ತಿದೆ ನಂತರ ರೀಲರುಗಳು ಮಿಲ್ ಮಾಲೀಕರು ಹೂಡುವ ತಂತ್ರಗಳಿಂದ ರೀಲರುಗಳು ಸಹ ಕೆಲವಾರು ಸಂದರ್ಭಗಳಲ್ಲಿ ನಷ್ಟಕ್ಕೆ ಗುರಿಯಾಗಿದ್ದಾರೆ. ಒಟ್ಟಿಗೆ ಹೇಳುವುದಾದರೆ ಪ್ರಥಮವಾಗಿ ರೈತರು ನಂತರ ರೀಲರುಗಳು ತೊಂದರೆಗೆ ಒಳಗಾಗುತ್ತಾರೆ. ಮಿಲ್ ಮಾಲೀಕರು ಇದರ ಲಾಭವನ್ನು ಯಥೇಚ್ಛವಾಗಿ ಪಡೆಯುತ್ತಿದ್ದಾರೆ. ರೇಷ್ಮೆ ಬಟ್ಟೆಯ ಬೆಲೆ ದಿನದಿನಕ್ಕೂ ಹೆಚ್ಚುತ್ತಿರುವಾಗ ರೇಷ್ಮೆ ಗೂಡಿನ ಬೆಲೆ ಮತ್ತು ರೇಷ್ಮೆ ನೂಲಿನ ಬೆಲೆ ಇದಕ್ಕೆ ಸಮನಾಗಿ ಏರುತ್ತಿಲ್ಲ. ಹಾಗೆಯೇ ಇಡೀ ಈ ಉದ್ದಿಮೆಯಲ್ಲಿ ದಾರ ತೆಗೆಯುವ ಸಣ್ಣ ಸಣ್ಣ ಘಟಕಗಳು ಯಥೇಚ್ಛವಾಗಿದ್ದು ಇವು ಬಹುತೇಕ ಖಾಸಗಿ ಕ್ಷೇತ್ರಗಳಾಗಿರುತ್ತವೆ ಹಾಗೆಯೇ ಬಟ್ಟೆ ನೇಯುವ ಮಿಲ್ಲುಗಳು ಸಹ ಖಾಸಗಿ ಕ್ಷೇತ್ರಕ್ಕೆ ಸೇರಿ ಸತತವಾಗಿ ಶೋಷಣೆ ದಬ್ಬಾಳಿಕೆ ನಡೆಯುತ್ತಿದೆ. ಈ ಉದ್ದಿಮೆಯಲ್ಲಿ ಉತ್ಪಾದಿಸುವ ರೈತರನ್ನು ರೀಲರುಗಳನ್ನು ಅತಿ ಮುಖ್ಯವಾಗಿ ಕಾರ್ಮಿಕರನ್ನು ಉಳಿಸಲು ರಕ್ಷಣೆ ಕೊಡಲು ಈ ಉದ್ದಿಮೆ ಇರುವ ತಾಲ್ಲೂಕು ಕೇಂದ್ರಗಳಲ್ಲಿ ಸರ್ಕಾರದ ಕಾರ್ಖಾನೆಗಳನ್ನು ಸ್ಥಾಪಿಸಿ ಇದರ ಮುಖಾಂತರ ಏರುಪೇರು ಆಗುವ ಬೆಲೆ ಮತ್ತು ಕಾರ್ಮಿಕರಿಗೆ ನಿಗಧಿಯಾದ ಪರಿಷ್ಕೃತ ಸಮಾನ ವೇತನವನ್ನು ಪಡೆಯಲು ಸಾಧ್ಯವಾಗುತ್ತೆ. ಈ ಉದ್ದೇಶದಿಂದ ಈಗಾಗಲೇ ವಿಶ್ವ ಬ್ಯಾಂಕ್‌ನಿಂದ ನೂರಾರು ಕೋಟಿ ರೂ.ಗಳು ಸಾಲ ಕೊಟ್ಟಿದ್ದು ಇದೆಲ್ಲಾ ಇದಕ್ಕೆ ಉಪಯೋಗಿಸದೆ ದುರುಪಯೋಗ ಆಗಿರುತ್ತದೆ.

ಆದ್ದರಿಂದ ಈ ಸಮ್ಮೇಳನ ರೇಷ್ಮೆ ಗೂಡು ಉತ್ಪಾದಿಸುವ ರೈತರಿಗೆ ನಿಗದಿಯಾದ ಲಾಭದಾಯಕ ಬೆಲೆ ಕೊಡುವುದು. ಕಾರ್ಮಿಕರಿಗೆ ಅನುಕೂಲವಾಗುವಂತೆ ಪರಿಷ್ಕೃತ ನಿಗದಿಯಾದ ಬೆಲೆ ಕೊಡುವುದು. ರೀಲರುಗಳಿಗೆ ನಷ್ಟವಾಗದಂತೆ ರೇಷ್ಮೆ ಬೆಲೆಯನ್ನು ನಿಗದಿಗೊಳಿಸುವುದು. ರೇಷ್ಮೆ ಬಟ್ಟೆಯನ್ನು ಮಿಲ್ ಮಾಲೀಕರಿಗೆ ಅನುಕೂಲವಾಗುವಂತೆ ದರವನ್ನು ಸಿಕ್ಕಾಪಟ್ಟೆ ಹೆಚ್ಚಿಸದೆ ಬೆಲೆಯನ್ನು ನಿಗದಿಗೊಳಿಸುವುದು. ರೇಷ್ಮೆ ಉತ್ಪಾದನೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಸರ್ಕಾರಿ ಕಾರ್ಖಾನೆಗಳನ್ನು ತೆರೆಯುವುದಕ್ಕೆ ಒತ್ತಾಯಿಸಿ ಈ ನಿರ್ಣಯವನ್ನು ಮಂಡಿಸಿದೆ.

ಇದಲ್ಲದೆ ರೋಗರಹಿತ ಬಿತ್ತನೆಯನ್ನು ಸಹ ಸರ್ಕಾರಿ ರೇಷ್ಮೆ ಕೋಠಿ ಗಳಿಂದ ರೈತರಿಗೆ ಒದಗಿಸಬೇಕೆಂದು ಇದರಿಂದ ಲಕ್ಷಾಂತರ ರೈತರಿಗೆ ಮತ್ತು ಕಾರ್ಮಿಕರಿಗೆ ಹಾಗೂ ರೀಲರುಗಳಿಗೆ ಸರ್ಕಾರ ನೆರವು ಕೊಡಲು ಈ ಸಮ್ಮೇಳನ ಒತ್ತಾಯಿಸುತ್ತದೆ.

ಸಲುಕರಿ



ರಗಿವೆ. ಈ ಶಕ್ತಿಗಳನ್ನು ರೈತ ಸಂಘ
ತೆ ಹಾಗೂ ರೈತರ ನೆಚ್ಚಿಕೆಗಳಿಸಿದರು.
ಂತಹ ಕಾರ್ಯಕರ್ತರನ್ನೊದಗಿಸಿವೆ.
ಗಾರರ ಸಮಾವೇಶ, ಅಡಿಕೆ ಬೆಳೆಗಾರರ
ಪ್ರಯತ್ನ ಇವು ಕೂಡಾ ರೈತ ಸಂಘ
ತೊಗರಿ ಬೆಳೆಗಾರರ ಹೋರಾಟ
ವಲ್ಲಿ ಯಶಸ್ವಿಯಾಗಿದೆ. ಇದೇ
ಕಸರ ಹೋರಾಟಗಳನ್ನೂ ತೀವ್ರವಾಗಿ
ದ್ಧತೆಯನ್ನು ಸಾಧನವನ್ನು ಒದಗಿಸಿದೆ.
ಳನ್ನು ಹಲವೆಡೆಗಳಲ್ಲಿ ನಡೆಸಿದ್ದಾರೆ.
ರ ಸಂಘಟನೆಯ ಸ್ವತಂತ್ರ ಅಸ್ತಿತ್ವಕ್ಕೆ
ಳುವಳಿಯ ಮುನ್ನಡೆಯಲ್ಲಿ ಅತ್ಯಂತ

9ನೇ ರಾಜ್ಯ ಸಮ್ಮೇಳನದ ಚರ್ಚೆ
ಎಂಬುದು ಆಶ್ಚರಿಯ ಮಾತೇನಲ್ಲ.
ಹಾಗೆಯೇ ದುರ್ಬಲ ಅಂಶಗಳನ್ನು
ಬೆಳವಿಗೆ ಹಾದಿಯನ್ನು ಹಾಕಿಕೊಟ್ಟಿದೆ.
ನ್ನು ಇಲ್ಲಿ ಪ್ರಕಟಿಸಲಾಗಿದೆ.

ಲಿ"

'ಶಾಂತಿಗಾಗಿ ಅಲಿಪ್ತ ನೀತಿಗಾಗಿ ರೈತರು'

ನಮ್ಮ ಕರ್ನಾಟಕ ಪ್ರಾಂತ ರೈತ ಸಂಘದ 9ನೇ ರಾಜ್ಯ ಸಮ್ಮೇಳನ ಜಗತ್ತಿನಲ್ಲಿರುವ ಒಂದು ಗಂಭೀರ ಪರಿಸ್ಥಿತಿಯಲ್ಲಿ ನಡೆಯುತ್ತದೆ. ಇಡೀ ಮಾನವ ಜನಾಂಗ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವಂತಹ ಯಾತನಮಯವಾದ ಪರಿಸ್ಥಿತಿಯಲ್ಲಿದ್ದಾರೆ. ಜಗತ್ತಿನ ಸಾಮ್ರಾಜ್ಯಶಾಹಿಗಳು ಮತ್ತು ಅವುಗಳ ನಾಯಕ ಸ್ಥಾನದಲ್ಲಿರುವ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಇಡೀ ಜಗತ್ತಿನ ಜನತೆಯನ್ನು ಅಣು ಸಮರದ ಭಯದಲ್ಲಿ ನಿರಂತರವಾಗಿ ಇಟ್ಟು ಅವರ ಬದುಕಿನ ಹಕ್ಕಿಗೆ ಸವಾಲನ್ನು ಹಾಕಿದ್ದಾರೆ.

ಮಾನವ ಜನಾಂಗವನ್ನು ಕ್ಷಣಾರ್ಧದಲ್ಲಿ ಸರ್ವನಾಶ ಮಾಡುವ ಮಾರಕಾಸ್ತ್ರಗಳನ್ನು ತಯಾರು ಮಾಡಿ ಇಡೀ ಜಗತ್ತನ್ನೇ ಯುದ್ಧಭೀತಿಯ ವಾತಾವರಣದಲ್ಲಿ ಮುಳುಗಿಸಿದ್ದಾರೆ. ಅಮೆರಿಕನ್ ಸಾಮ್ರಾಜ್ಯಶಾಹಿಗಳು ತಾನು ತಯಾರಿಸುತ್ತಿರುವ ಮಾರಕಾಸ್ತ್ರಗಳನ್ನು ತನ್ನ ಅಧೀನದಲ್ಲಿರುವ ಬಡ ರಾಷ್ಟ್ರಗಳಿಗೆ ಬಲವಂತವಾಗಿ ಮಾರಾಟ ಮಾಡುವುದು ಒಂದು ದೇಶದ ಮೇಲೆ ಇನ್ನೊಂದು ದೇಶವನ್ನು ಎತ್ತಿ ಕಟ್ಟುವುದು ಆಫ್ರಿಕಾ ಮತ್ತು ಲ್ಯಾಟೀನ್ ಅಮೆರಿಕಾದಲ್ಲಿ ತನ್ನ ಹಸ್ತಕ್ಷೇಪವನ್ನು ನಡೆಸಿ ದಕ್ಷಿಣ ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾದಲ್ಲಿ ಗಂಭೀರವಾದ ವಾತಾವರಣವನ್ನುಂಟು ಮಾಡಿದೆ. ಅಷ್ಟೇ ಅಲ್ಲದೆ ಎಲ್ಲಾ ರಾಷ್ಟ್ರಗಳು ಈಗ ತಮ್ಮ ತಮ್ಮಲ್ಲಿ ರಕ್ಷಣಾ ವೆಚ್ಚಕ್ಕೆ ಹಣ ವ್ಯಯ ಮಾಡುವ ಪರಿಸ್ಥಿತಿ ಬಂದಿದೆ.

ಈ ನಿಟ್ಟಿನಲ್ಲಿ ಜಗತ್ತಿನ ಶಾಂತಿ ಚಳು ವಳಿಯು ನಮ್ಮ ದೇಶದ ಎಲ್ಲಾ ವಿಭಾಗದ ಜನತೆಯ ಚಳವಳಿಯಾಗಬೇಕಾಗಿದೆ. ಈ ಶಾಂತಿ ಚಳುವಳಿಯನ್ನೇ ಮುಂದುವರಿಸಿಕೊಂಡು ಒಂದು ವ್ಯಾಪಕ ಹೋರಾಟವನ್ನೇ ರೂಪಿಸಬೇಕಾಗಿದೆ.

ಈ ನಿಟ್ಟಿನಲ್ಲಿ ಅಲಿಪ್ತ ಚಳುವಳಿಯ ಸಹ ಜಗತ್ತಿನ ಶಾಂತಿ ಚಳುವಳಿಯನ್ನು ಬೆಂಬಲಿಸುವುದರಲ್ಲಿ ಮತ್ತು ಯುದ್ಧಕೋರ ನೀತಿಯನ್ನು ವಿರೋಧಿಸಿ ದೆಹಲಿಯ ನಿರ್ಣಯ ಮತ್ತು ಇಟಲಿಯಲ್ಲಿ ಸೇರಿದ 6 ಅಲಿಪ್ತ ರಾಷ್ಟ್ರಗಳ ಘೋಷಣೆಗಳು ಶಾಂತಿ ಚಳುವಳಿಯನ್ನು ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಆದರೆ ನಮ್ಮ ದೇಶದಲ್ಲಿ ಅಲಿಪ್ತ ಚಳುವಳಿಯು ಕೇವಲ ಕಾಂಗ್ರೆಸ್ ಪಕ್ಷದ ವಿದೇಶಾಂಗ ನೀತಿ ಎಂದು ಭಾವಿಸಿರುವುದು ಆಶ್ಚರ್ಯವಾಗಿದೆ. ಇದೇ ನಮ್ಮ ದೇಶದ ಜನತೆಯ ಸಮಗ್ರ ನೀತಿಯಾಗಬೇಕಾಗಿದೆ ಮತ್ತು ಅಲಿಪ್ತ ನೀತಿಯನ್ನು ಮತ್ತು ಅದರ ಚಳುವಳಿಯನ್ನು ಬಲಪಡಿಸಬೇಕಾಗಿದೆ.

ಸರ್ಕಾರಿ ಭೂಮಿಯನ್ನು ಭೂಹೀನರಿಗೆ ಹಂಚುವ ಬಗ್ಗೆ

ಕರ್ನಾಟಕ ರಾಜ್ಯದಲ್ಲಿ ಸುಮಾರು 15-20 ವರ್ಷಗಳಿಂದಲೂ ಭೂಹೀನ ರೈತರು ಮತ್ತು ಕೃಷಿ ಕಾರ್ಮಿಕರು ಸಾಗುವಳಿ ಮಾಡುತ್ತಾ ಬಂದಿರುವ ಭೂಮಿಯನ್ನು ಖಾಯಂ ಮಾಡಬೇಕೆಂದು ಹತ್ತಾರು ವರ್ಷಗಳಿಂದಲೂ ಅನೇಕ ರೀತಿಯ ಹೋರಾಟಗಳನ್ನು ಮಾಡುತ್ತ ಬಂದಿದ್ದು ಈಗಲೂ ಮಾಡುತ್ತಿದ್ದಾರೆ. ಆದರೂ ಸಹ ನಮ್ಮ ರಾಜ್ಯ ಸರ್ಕಾರಗಳು ಹಲವಾರು ಸಂದರ್ಭಗಳಲ್ಲಿ ಖಾಯಂ ಮಾಡುವ ಆಶ್ವಾಸನೆಯನ್ನು ಕೊಟ್ಟು, ಕೊಟ್ಟ ಆಶ್ವಾಸನೆಯನ್ನು ಈಡೇರಿಸುವಲ್ಲಿ ವಿಫಲರಾಗಿದ್ದಾರೆ. ಕರ್ನಾಟಕದಲ್ಲಿ ಲಕ್ಷಾಂತರ ಎಕರೆ ಭೂಮಿಯನ್ನು ಸಾಗುವಳಿ ಮಾಡುತ್ತಿರುವ ಈ ಭೂಹೀನರ ಪರಿಸ್ಥಿತಿ ತ್ರಿಶಂಕುಸ್ವರ್ಗದಂತಾಗಿದೆ. ಕಳೆದ 8ವರ್ಷಗಳ ಹಿಂದೆ ಸರ್ಕಾರವು "ಸಿ" ಮತ್ತು "ಡಿ" ಭೂಮಿಯನ್ನು ಸಾಮಾಜಿಕ ಅರಣ್ಯೀಕರಣದ ಹೆಸರಿನಲ್ಲಿ ಅರಣ್ಯ ಇಲಾಖೆಯವರಿಗೆ ವರ್ಗಾವಣೆ ಮಾಡಿದ್ದು ಅದರಲ್ಲಿ ಹೆಚ್ಚಿನಂಶ ಭೂಹೀನ ರೈತರು ಮತ್ತು ಕೃಷಿ ಕಾರ್ಮಿಕರು ಒಕ್ಕಲು ಮಾಡುತ್ತಿದ್ದು ಅದನ್ನು ಅವರಿಗೆ ಖಾಯಂ ಮಾಡಬೇಕೆಂದು ನಮ್ಮ ಪ್ರಾಂತರೈತ ಸಂಘ ಮತ್ತು ಕೃಷಿ ಕಾರ್ಮಿಕರ ಸಂಘ ಸತತವಾಗಿ ಹೋರಾಟ ಮಾಡಿದ್ದರ ಫಲವಾಗಿ ಸರ್ಕಾರವು ಅವರಿಗೆ ಖಾಯಂ ಮಾಡುತ್ತೇವೆಂದು ಹೇಳಿ ಅದಕ್ಕೆ ಸಂಬಂಧಿಸಿದಂತೆ ಒಂದು ಆಜ್ಞೆಯನ್ನು ಮಾಡಿದ್ದರೂ ಆದೇಶ ಮಾತ್ರ ಇದುವರೆವಿಗೂ ಜಾರಿ ಮಾಡಿಲ್ಲ.

ಅರಣ್ಯ ಇಲಾಖೆಯವರ ವಶದಲ್ಲಿರುವ ಸಿ ಮತ್ತು ಡಿ ಭೂಮಿಯನ್ನು ಸರ್ವೆ ಮಾಡಿಸಿ ಈಗಾಗಲೇ ಸಾಗುವಳಿ ಮಾಡುತ್ತಿರುವ ರೈತರಿಗೆ ಖಾಯಂ ಮಾಡಬೇಕೆಂದು ಒಂದು ಆಜ್ಞೆಯನ್ನು ಸಮಿತಿಗಳ ಮುಖಾಂತರ ಈ ಭೂಮಿಯನ್ನು ಹಂಚುತ್ತೇವೆಂದು ಹೇಳಿದ್ದು ಇದುವರೆವಿಗೂ ಯಾವ ತರದ ಆಜ್ಞೆ ಜಾರಿಗೊಳಿಸಲಿಲ್ಲ.

ಭೂಮಾಲೀಕರು ಮತ್ತು ಪ್ಲಾಂಟೇಶನ್ ಮಾಲೀಕರ ವಶದಲ್ಲಿರುವ ಒತ್ತುವರಿ ಭೂಮಿಯನ್ನು ವಶಪಡಿಸಿಕೊಂಡು ಬಡವರಿಗೆ ಹಂಚಬೇಕೆಂದು ಹಲವಾರು ವರ್ಷಗಳಿಂದಲೂ ಹೋರಾಟ ಮಾಡುತ್ತಿದ್ದರೂ ಇದುವರೆವಿಗೂ ಒತ್ತುವರಿ ಭೂಮಿಯನ್ನು ಅವರಿಂದ ವಶಪಡಿಸಿಕೊಂಡು ಭೂಹೀನರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಹಂಚುವುದರಲ್ಲಿ ಸರ್ಕಾರ ಈಗಲೂ ಮೀನಾ ಮೇಷ ಎಣಿಸುತ್ತಿದೆ.

ಇನಾಂ ಭೂಮಿ ಮತ್ತು ಸಾಮಾಜಿಕ ಅರಣ್ಯೀಕರಣದ ಹೆಸರಿನಲ್ಲಿ ಸರ್ಕಾರ ಮತ್ತು ಅರಣ್ಯ ಇಲಾಖೆಯವರ ಅಧೀನದಲ್ಲಿರುವ ಭೂಮಿಯನ್ನು ಹಂಚುವುದರಲ್ಲಿ ಸರ್ಕಾರ ಯಾವುದೇ ರೀತಿಯ ಆಸಕ್ತಿಯನ್ನು ತೋರಿಸುತ್ತಿಲ್ಲಾ. ಈ ಸಂಬಂಧವಾಗಿ ನಮ್ಮ ಪ್ರಾಂತ ರೈತ ಸಂಘ ಮತ್ತು ಕೃಷಿ ಕಾರ್ಮಿಕರ ಸಂಘವು ನಿರಂತರವಾದ ಹೋರಾಟಗಳನ್ನು ಮಾಡುತ್ತಾ ಬಂದಿದ್ದರೂ ಸರ್ಕಾರ ಹಲವಾರು ಪೊಳ್ಳು ನೆಪವೊಡ್ಡಿ ಮುಖ್ಯ ಪ್ರಶ್ನೆಯಾದ ಭೂಮಿಯ ಹಂಚಿಕೆಯನ್ನು ನೆನೆಗುದಿಗೆ ಹಾಕಿದೆ.

ನಮ್ಮ ರಾಜ್ಯದಲ್ಲಿ ಭೂಮಿಯ ಹಂಚಿಕೆ ಪ್ರಶ್ನೆ ಮುಖ್ಯವಾಗಿ ಅರಣ್ಯ ಭೂಮಿ ಸಿ ಮತ್ತು ಡಿ ಭೂಮಿ ಗೋಮಾಳ ಇನಾಂ ಭೂಮಿ ಮತ್ತು ಕರಾಬ್ ಭೂಮಿಗಳ ಹಂಚಿಕೆಯ ಪ್ರಶ್ನೆ ಮತ್ತು ನಿವೇಶನಗಳ ಹಂಚಿಕೆ ನಮ್ಮ ರಾಜ್ಯದ ಭೂಹೀನರ ಹಾಗೂ ಕೃಷಿ ಕಾರ್ಮಿಕರಿಗೆ ಅತಿ ಅವಶ್ಯವಾಗಿದ್ದು ಸರ್ಕಾರದ ಜನ ವಿರೋಧಿ ನೀತಿಯನ್ನು ವಿರೋಧಿಸಿ ರಾಜ್ಯದಾದ್ಯಂತ ತೀವ್ರ ಹೋರಾಟವನ್ನು ದೀರ್ಘ ಮತ್ತು ಸಮರಶೀಲ ಹೋರಾಟ ಮಾಡಬೇಕಾಗಿದೆ.

ಪ್ರಜಾಪ್ರಭುತ್ವ ಮತ್ತು ಮಹಿಳೆಯರ ಹಕ್ಕುಗಳು

ಫ್ರಾನ್ಸ್ ದೇಶದ ಪ್ರಮುಖ ಕಾಲ್ಪನಿಕ ಸಮಾಜವಾದಿ ಚಾರ್ಲ್ಸ್ ಫೋರಿಯರ್- "ಯಾವುದೇ ಒಂದು ಸಮಾಜದಲ್ಲಿ ಮಹಿಳಾ ವಿಮೋಚನೆಯ ಮಟ್ಟವು ಸಮಾಜದ ಸಮಗ್ರ ವಿಮೋಚನೆಯನ್ನು ಅಳೆಯುವ ಸ್ವಾಭಾವಿಕ ಮಾನದಂಡ" ಎಂದು ಮೊತ್ತ ಮೊದಲಿಗೆ ಹೇಳಿದನು. ಈ ವಸ್ತು ಸ್ಥಿತಿಯನ್ನು ಫ್ರೆಡರಿಕ್ ಎಂಗೆಲ್ಸ್ "ಸಮಾಜವಾದ ಕಾಲ್ಪನಿಕ ಮತ್ತು ವೈಜ್ಞಾನಿಕ" ಎಂಬ ತಮ್ಮ ಹೊತ್ತಿಗೆಯಲ್ಲಿ ಗುರುತಿದ್ದಾರೆ.

ಶೋಷಣೆಯ ಆಧಾರದ ಮೇಲೆ ನಿಂತಿರುವ ಯಾವುದೇ ಸಮಾಜವು ಮೊತ್ತ ಮೊದಲಿಗೆ ಮಹಿಳೆಯನ್ನು ಶೋಷಿಸಲು ಆರಂಭಿಸುತ್ತದೆ. ಮಹಿಳಾ ಶೋಷಣೆಯಿಂದ ಮುಕ್ತವಾದ ಸಮಾಜವು ಶೋಷಣಾರಹಿತ ಸಮಾಜವಾಗಲಾರದು. ಆದುದರಿಂದ ಮಹಿಳೆಯರ ವಿಮೋಚನೆಯು ಸಮಾಜದ ಸಮಗ್ರ ವಿಮೋಚನೆಯ ಮಾನದಂಡ ಎಂದು ಫೋರಿಯರ್‌ನ ಹೇಳಿಕೆಯು ಸಮಂಜಸವಾಗಿದೆ.

ಈ ಸ್ವಾಭಾವಿಕ ಮಾನದಂಡವನ್ನು ಪ್ರಜಾಪ್ರಭುತ್ವ ಸಮಾಜಕ್ಕೆ ಅನ್ವಯಿಸುವಾಗ ನಾವು ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದಂತೆ ಪ್ರಜಾಪ್ರಭುತ್ವದ ತಿರುಳನ್ನು ಜಾಗರೂಕತೆಯಿಂದ ಅಳೆಯಬಹುದು. ಪ್ರಜಾಪ್ರಭುತ್ವವು ನಿಜವಾಗ ಬೇಕಾದರೆ ಅದು ಪ್ರತಿಯೊಬ್ಬ ನಾಗರಿಕನ ಹಕ್ಕನ್ನು ಖಾತರಿಗೊಳಿಸಬೇಕು. ನಮ್ಮ ಸಂವಿಧಾನದಲ್ಲಿ ಮಹಿಳೆಯರ ಹಕ್ಕುಗಳು ಮತ್ತು ಅದರ ಆಚರಣೆಯನ್ನು ಗಮನಿಸಬೇಕು. ನಮ್ಮ ಸಂವಿಧಾನವು ಯಾವುದೇ ರಾಜಕೀಯದಲ್ಲಾಗಲೀ, ಪ್ರಜಾಪ್ರಭುತ್ವ ಚಟುವಟಿಕೆಗಳಲ್ಲಾಗಲೀ ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲ.

ಪಾಳೆಯಗಾರಿ ಹಿಡಿತವು ಮದುವೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಬಿಗಿಗೊಳಿಸಿದೆ. ಇತ್ತೀಚಿನ ವರ್ಷಗಳಲ್ಲಿ ವರದಕ್ಷಿಣೆ ಪದ್ಧತಿ ಎಷ್ಟರ ಮಟ್ಟಿಗೆ ಬೆಳೆದಿದೆ ಎಂದರೆ ಪ್ರಜಾಪ್ರಭುತ್ವ ಹಕ್ಕುಗಳು ವಿಕಾಸಗೊಳ್ಳುವುದರ ಬದಲು ಸಂಕುಚಿತಗೊಳ್ಳುತ್ತಿವೆ. ವಾಸ್ತವವಾಗಿ ಅನೇಕ ಮಹಿಳೆಯರು ವರದಕ್ಷಿಣೆಯ ಪಿಡುಗಿನಿಂದ ಜೀವ ಕಳೆದುಕೊಳ್ಳುತ್ತಿದ್ದಾರೆ. ಇತ್ತೀಚಿನ ಕಾನ್ಪುರ ಹಾಗೂ ಪಾಲ್ಘಾಟ್‌ನಲ್ಲಿ ನಡೆದ ಘಟನೆಗಳು ಇದಕ್ಕೆ ಜೀವಂತ ಉದಾಹರಣೆಗಳಾಗಿವೆ.

ನಮ್ಮ ಪ್ರಜಾಪ್ರಭುತ್ವವು ಇಂದು ದುರಂತದ ಹಾದಿಯಲ್ಲಿದೆ. ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆಯ ಶೋಷಣೆಯಿಂದ ತಮ್ಮ ದೈನಂದಿನ ಬದುಕನ್ನು ರಕ್ಷಿಸಿಕೊಳ್ಳಲು ಹೋರಾಡುತ್ತಿರುವ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಸರ್ವಾಧಿಕಾರದಿಂದ ಕಿತ್ತುಕೊಳ್ಳಲಾಗುತ್ತಿದೆ. ಆಳುವ ವರ್ಗವು ಹೇಗೆ ಹಕ್ಕುಗಳನ್ನು ಮೊಟಕುಗೊಳಿಸಿದಾಗ ದೌರ್ಜನ್ಯ, ದಬ್ಬಾಳಿಕೆಗಳು ವ್ಯಾಪಕವಾಗುತ್ತವೆ. ಇಂತಹ ದಬ್ಬಾಳಿಕೆಗೆ ಮಹಿಳೆಯು ಮೊದಲಿಗೆ ಗುರಿಯಾಗುತ್ತಾಳೆ. ಇವತ್ತಿನ ದಿನಗಳಲ್ಲಿ ದಿಗಿಲು ಹುಟ್ಟಿಸುವಂತಹ ಬೆತ್ತಲೆ ಮೆರವಣಿಗೆ, ಮಾನಭಂಗ, ಕೊಲೆ- ಇವೆಲ್ಲಾ ಮಹಿಳೆಯ ಹಕ್ಕುಗಳನ್ನು ಎಷ್ಟರ ಮಟ್ಟಿಗೆ ಸಂಕುಚಿತಗೊಂಡಿದೆ ಎಂಬುದನ್ನು ತೋರಿಸುತ್ತದೆ.

ಕಾ॥ ಎಂ.ಎಂ.ರಾಜಮ್ಮ

ಆಸ್ತಿಯ ಹಕ್ಕನ್ನು ಖಾತರಿ ಮಾಡುತ್ತದೆ. ಆದರೆ ಬೇರೆ ಬೇರೆ ಹಿಂದೂ ಕಾನೂನುಗಳನ್ವಯ ಮಹಿಳೆಯರನ್ನು ಪಿತ್ರಾರ್ಜಿತ ಆಸ್ತಿಯ ಹಕ್ಕಿನಿಂದ ವಂಚಿಸಲಾಗಿದೆ.

ಆಸ್ತಿಯ ಹಕ್ಕು ಎಂದರೆ ಶೋಷಣೆಯ ಹಕ್ಕು ಎಂದೇ ಅರ್ಥ. ಸಂವಿಧಾನದಲ್ಲಿ ಉದ್ಯೋಗದ ಹಕ್ಕೇ ಇಲ್ಲದಿರುವಾಗ ದುಡಿದು ಆಸ್ತಿಯನ್ನು ಸಂಪಾದಿಸುವುದು ಹೇಗೆ ಸಾಧ್ಯ. ಉದ್ಯೋಗದ ಹಕ್ಕನ್ನು ಮಹಿಳೆಯರಿಗಾಗಲಿ, ಪುರುಷರಿಗಾಗಲಿ ಸಂವಿಧಾನದಲ್ಲಿ ಖಾತರಿಪಡಿಸಿಲ್ಲ. ಅಲ್ಲದೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲನ್ನು ಪಡೆಯಲು ಮಹಿಳೆಯರಿಗೆ ಹಕ್ಕು ಇಲ್ಲ ಎಂದ ಮೇಲೆ ಆಸ್ತಿಯ ಹಕ್ಕು ಅನ್ನುವುದು ಅರ್ಥ ಹೀಗೆ. ಮಾತೃ ಪ್ರಧಾನ ವ್ಯವಸ್ಥೆ ಇದ್ದ ಸಮಾಜದ ಕೆಲವು ವಿಭಾಗಗಳಲ್ಲಿ ಮಹಿಳೆಗೆ ಆಸ್ತಿಯ ಹಕ್ಕು ಇತ್ತು. ಆದರೆ ನಂತರದ ಪ್ರಜಾಪ್ರಭುತ್ವ ವ್ಯವಸ್ಥೆಯು ಈ ಹಕ್ಕನ್ನು ಮಹಿಳೆಯಿಂದ ಕಿತ್ತುಕೊಂಡಿತು.

ಎಲ್ಲಿಯವರೆಗೆ ಮಹಿಳೆ ಆರ್ಥಿಕವಾಗಿ ಸ್ವತಂತ್ರವಾಗುವುದಿಲ್ಲವೋ ಅಲ್ಲಿಯವರೆಗೆ ನಿಜವಾದ ಸ್ವಾತಂತ್ರ್ಯವಿರುವುದಿಲ್ಲ. ಉದ್ಯೋಗದ ಅವಕಾಶಗಳು ದಿನಕಳೆದಂತೆ ಕಡಿಮೆಯಾಗುತ್ತಿರುವುದರಿಂದ ಆರ್ಥಿಕವಾಗಿ ಸ್ವತಂತ್ರವಾಗುವ ಅವಕಾಶ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ.

ನಮ್ಮ ಸಮಾಜದಲ್ಲಿ ಪಾಳೆಯಗಾರಿ ಮೌಲ್ಯಗಳು ಮಹಿಳೆಯನ್ನು ಮನೆಬಿಟ್ಟು ಹೊರಗೆ ಹೋಗದಂತೆ ಬಿಗಿಯಾದ ಸಂಕೋಲೆಯಿಂದ ಬಂದಿಸಿಟ್ಟಿದೆ. ಇಂತಹ ಪರಿಸ್ಥಿತಿಯಿರುವುದರಿಂದ ಆಕೆ

ಇಡೀ ಶೋಷಣಾ ವ್ಯವಸ್ಥೆಯನ್ನೇ ಕೊನೆಗಾಣಿಸುವ ಹೋರಾಟವನ್ನು ಮಾಡದೆ ಮಹಿಳೆಯ ಶೋಷಣೆಗೆ ಕೊನೆಯಿಲ್ಲ. ಆದುದರಿಂದ ಸ್ತ್ರೀ ಸ್ವೇಚ್ಛಾವಾದಿ ಸಂಘಟನೆಗಳ, ಪ್ರತ್ಯೇಕತಾವಾದಿ ಪ್ರವೃತ್ತಿಗಳ ವಿರುದ್ಧ ನಿರ್ದಾಕ್ಷಿಣ್ಯ ಹೋರಾಟ ಮಾಡುವ ಅವಶ್ಯಕತೆ ಇದೆ. ಪ್ರತಿಯೊಬ್ಬ ಪ್ರಜ್ಞಾವಂತ ಮಹಿಳೆಯು ಇಡೀ ಸಮಾಜದ ವಿಮೋಚನೆಗಾಗಿ ನಡೆಯುವ ಹೋರಾಟದೊಂದಿಗೆ ಸೇರಿಕೊಳ್ಳುವಾಗಲೇ ಮಹಿಳೆಯರ ಹಕ್ಕುಗಳಿಗಾಗಿ ಅವಿರತ ಹೋರಾಟವನ್ನು ಮುಂದುವರಿಸಬೇಕು. ಅಂದರೆ ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ಹಾಗೂ ವಿಸ್ತರಿಸಲು ನಡೆಯುವ ಹೋರಾಟಗಳು ಪ್ರಜಾಪ್ರಭುತ್ವವನ್ನು ವಿಸ್ತರಿಸುವ ಹೋರಾಟದ ಪ್ರಮುಖವಾದ ಅಂಗವಾಗಿದೆ. ಒಂದರಿಂದ ಇನ್ನೊಂದನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಜನತೆಯ ಒಟ್ಟಾರೆ ವಿಮೋಚನೆಗಾಗಿ ನಡೆಯುವ ಪ್ರಜಾಪ್ರಭುತ್ವ ಹೋರಾಟದಲ್ಲಿ ಮಹಿಳೆಯರ ಸಮಸ್ಯೆಗಳನ್ನು ಕಡೆಗಣಿಸುವುದನ್ನು ಹಾಗೂ ಪ್ರಜಾಪ್ರಭುತ್ವ ಹೋರಾಟಗಳಿಂದ ದೂರ ಉಳಿಯುವ ಸ್ತ್ರೀ ಸ್ವೇಚ್ಛಾವಾದಿಗಳ ಪ್ರಯತ್ನಗಳ ವಿರುದ್ಧ ಹೋರಾಡ ಬೇಕಾಗಿದೆ.

ಮಹಿಳಾ ಸಂಘಟನೆಯು ಮಹಿಳೆಯರ ಹಕ್ಕುಗಳಿಗಾಗಿ ಮತ್ತು ಅವುಗಳ ವಿಸ್ತರಣೆಗಾಗಿ ಹೋರಾಡುವುದರೊಂದಿಗೆ ಪ್ರಜಾಪ್ರಭುತ್ವ ಚಳುವಳಿಗಳಲ್ಲಿ ಭಾಗವಹಿಸಿ ಅದನ್ನು ಬಲಪಡಿಸಬೇಕು. ಇದರಿಂದ ಮಾತ್ರವೇ ನಮ್ಮ ನಿಜವಾದ ಗೆಲುವು ಸಾಧ್ಯ. ★

ರಾಯಚೂರು ಜಿಲ್ಲಾ ರೈತ ಸಮ್ಮೇಳನ

ಕರ್ನಾಟಕ ಪ್ರಾಂತ ರೈತ ಸಂಘ ರಾಯಚೂರು ಜಿಲ್ಲಾ 3ನೇ ಸಮ್ಮೇಳನ ಕುಷ್ಟಗಿಯಲ್ಲಿ ಮಾರ್ಚ್ 1, 2, 3ರಂದು ನಡೆಯಿತು. ಈ ಸಮ್ಮೇಳನ ವನ್ನು ಕಾ|| ಜಿ.ವಿ.ಶ್ರೀರಾಮರೆಡ್ಡಿಯವರು ಉದ್ಘಾಟಿಸಿದರು. ಅವರು ಮಾತನಾಡುತ್ತಾ ಆಳುವ ಸರ್ಕಾರಗಳ ಅದರಲ್ಲೂ ಕೇಂದ್ರ ಸರ್ಕಾರದ ಕೃಷಿ ನೀತಿಯಿಂದ, ರೈತ ಕೃಷಿ ಯನ್ನು ಮಾಡಲಾರದ ಪರಿಸ್ಥಿತಿ ಬಂದು, ಅವನು ಪಟ್ಟಣಗಳಲ್ಲಿಯಾದರೂ ಯಾವುದಾದರೂ ಸಣ್ಣ ವ್ಯಾಪಾರ ಮಾಡಿಯಾದರೂ ಜೀವನ ಮಾಡಬೇಕೆಂಬ ಮನೋಭಾವ ಬರುತ್ತಿದೆ. ದೇಶದ ಸಂವಿಧಾನಕ್ಕೆ 62 ಸಲ ತಿದ್ದುಪಡಿ ತಂದಿದ್ದರೆ ಒಂದೂ ತಿದ್ದುಪಡಿ ರೈತ ಕೃಷಿ ಕೂಲಿಕಾರರ ಪರವಾಗಿ ತಂದಿಲ್ಲ. ಹೀಗಿರು ವಾಗ ಅವರ ಸಮಸ್ಯೆಗಳಿಗಾಗಿ ಸಂಘಟಿತ ವಾದ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಈ ಸಮಾರಂಭದ ಅಧ್ಯಕ್ಷತೆ ಕಾ|| ಚಂದ್ರಶೇಖರ್ ಬಾಳಿಯವರು ವಹಿಸಿದ್ದರು.

ಕಾರ್ಯದರ್ಶಿ ಮಂಡಿಸಿದ ಕರಡು ವರದಿಯ ಮೇಲೆ 19 ಜನ ಚರ್ಚೆ ಯಲ್ಲಿ ಭಾಗ ವಹಿಸಿದ್ದರು. ಸಮ್ಮೇಳನ ಈ ಕೆಳಗಿನ ನಿರ್ಣಯಗಳನ್ನು ಸ್ವೀಕರಿಸಲಾಯಿತು.

ಸರ್ಕಾರಿ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ಭೂರಹಿತರಿಗೆ ಹಕ್ಕು ಪತ್ರ ಕೊಡಬೇಕು, ಹೆಚ್ಚುವರಿ ಭೂಮಿ ಹಂಚಬೇಕು, ಬರಗಾಲ ಕಾಮಗಾರಿ ಕೆಲಸ ಪ್ರಾರಂಭಿಸಬೇಕು. ಬರಗಾಲಕ್ಕೆ ಶಾಶ್ವತ ಪರಿಹಾರಕ್ಕಾಗಿ ಜಿಲ್ಲೆಯ ನನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ತೀವ್ರವಾಗಿ ಜಾರಿಗೆ ತರಬೇಕು. ಹಸಿರು ಕಾರ್ಡುಗಳನ್ನು ಎಲ್ಲಾ ಬಡವರಿಗೆ ಕೊಡ ಬೇಕು. ಪಡಿತರ ಪದ್ಧತಿಯಿಂದ ಹೆಚ್ಚಿಗೆ, ಸರಿಯಾದ ವಿತರಣೆಯಾಗಬೇಕು. ಬಾವಿ ಗಳಿಗೆ ಸರಿಯಾದ ರೀತಿಯಲ್ಲಿ ವಿದ್ಯುತ್ ಸರಬರಾಜು ಮಾಡಬೇಕು. ಕೃಷಿ ಕೂಲಿಕಾ ರರಿಗೆ ಕನಿಷ್ಠ ಕೂಲಿ ಕಾಯಿದೆ, ರೈತರಿಗೆ ಲಾಭದಾಯಕ ಬೆಲೆ ಇತರ ಮುಖ್ಯವಾದ ನಿರ್ಣಯಗಳನ್ನು ತೆಗೆದುಕೊಳ್ಳಲಾ ಯಿತು.

ಡಿ.ವೈ.ಎಫ್.ಐ., ಮಹಿಳಾ ಸಂಘ, ಎಸ್.ಎಫ್.ಐ., ಕೃಷಿ ಕೂಲಿಕಾರ ಸಂಘಟನೆ ಗಳಿಂದ ಸಮ್ಮೇಳನಕ್ಕೆ ಶುಭ ಕೋರಲಾ ಯಿತು.

ಸಮ್ಮೇಳನದಲ್ಲಿ 15 ಸದಸ್ಯರುಳ್ಳ ನೂತನ ಜಿಲ್ಲಾ ಸಮಿತಿ ಆಯ್ಕೆ ಮಾಡ ಲಾಯಿತು. ಕಾ|| ಆರ್.ಕೆ.ದೇಸಾಯಿ ಅಧ್ಯಕ್ಷರು, ಕಾ|| ಬಿ.ಲಿಂಗಪ್ಪ, ಶಿವನಗೌಡ- ಉಪಾಧ್ಯಕ್ಷರು, ಕಾ|| ಆರ್.ಬಸವರಾಜ- ಕಾರ್ಯದರ್ಶಿ, ಕಾ|| ಕಂಡೆಪ್ಪ, ರಾಮನಗೌಡ- ಸಹಕಾರ್ಯದರ್ಶಿಗಳು, ಕಾ|| ಜಿ.ಬಸವರಾಜ- ಖಜಾಂಚಿ. ಕಾ|| ಪ್ರಭುರಾಜ, ರಾಮಣ್ಣ, ವೀರನಗೌಡ, ವೀರಯ್ಯಶೆಟ್ಟಿ, ಸಂಗಪ್ಪ, ಗ್ಯಾನಪ್ಪ.

ಮಾರ್ಚ್ 1ರಂದು ಮೆರವಣಿಗೆ ಬಹಿರಂಗ ಸಭೆ ನಡೆಯಿತು. ಬಹಿರಂಗ ಸಭೆಯಲ್ಲಿ ಕಾ|| ಶ್ರೀರಾಮರೆಡ್ಡಿ, ಕಾ|| ಪುರುಷೋತ್ತಮ್, ಕಾ|| ಚಂದ್ರಶೇಖರ್ ಬಾಳಿಯವರು ಮಾತಾಡಿದರು.

ಡೊನೇಷನ್ ವಿರುದ್ಧ ಅಡ್ಮಿಷನ್ ಬಂದ್

ರಾಯಚೂರು ಜಿಲ್ಲೆಯ ಲಿಂಗಸು ಗೂರು ತಾಲೂಕಿನ ಹಟ್ಟಿ ಚಿನ್ನದ ಗಣಿ ಪ್ರದೇಶದಲ್ಲಿ ಇದೇ ಮಾರ್ಚ್ 11ರಂದು ಎಸ್.ಎಫ್.ಐ. ಹಾಗೂ ಡಿ.ವೈ.ಎಫ್.ಐ.ನ ಹಟ್ಟಿ ಗ್ರಾಮ ಘಟಕದ ಕಾರ್ಯಕರ್ತರು ಡೊನೇಷನ್ ರದ್ದುಗೊಳಿಸುವಂತೆ ಸಂತ ಅನ್ನಮ್ಮ ಶಾಲೆಯ ಮುಂದೆ ಪ್ರತಿಭಟನೆ ನಡೆಸಿದರು. ಶಾಲೆಗೆ ಪ್ರವೇಶದ (ಎಡ್ಮಿಷನ್) ದಿನವಾದ ಅಂದು ಅಡ್ಮಿಷನ್ ನಡೆಯದಂತೆ ತಡೆ ಮಾಡುವಲ್ಲಿ ಯಶಸ್ವಿಯಾದರು.

ಹಟ್ಟಿಯ ಸಂತ ಅನ್ನಮ್ಮ ಪ್ರೌಢ ಶಾಲೆಯ ಎಲ್.ಕೆ.ಜಿ., ಯು.ಕೆ.ಜಿ. ಪ್ರವೇಶಕ್ಕೆ ಸಾವಿರಾರು ರೂಪಾಯಿ ಡೊನೇಷನ್ ಪಡೆಯಲಾಗುತ್ತಿದೆ. ಹಲವಾರು ವರ್ಷಗಳಿಂದ ಈ ಬಾಬ್ತು ಯಾವುದೇ ರಸೀದಿ, ಲೆಕ್ಕ-ಪತ್ರಗಳಿಲ್ಲದೆ ಲಕ್ಷಗಟ್ಟಲೆ ರೂಪಾಯಿ ಸಂಗ್ರಹಿಸಲಾಗಿದೆ ಎಂದು ತಿಳಿದುಬಂದಿದೆ. ಹಟ್ಟಿ ಚಿನ್ನದ ಗಣಿಯ ಆಡಳಿತ ಮಂಡಳಿ ಈ ಶಾಲೆಗಾಗಿ ವರ್ಷಕ್ಕೆ 2ಲಕ್ಷರೂ.ನಿಂದ 3 ಲಕ್ಷ ರೂ.ವರೆಗೆ ಸಹಾಯಧನ ನೀಡಿದರೂ ಈ ಸುಲಿಗೆ ನಿಲ್ಲುತ್ತಿಲ್ಲವಾದ್ದರಿಂದ ಗ್ರಾಮದ ವಿದ್ಯಾರ್ಥಿಗಳು, ಯುವ ಜನರು ಈ ಪ್ರತಿಭಟನೆ ನಡೆಸಿದರು.

ಪ್ರತಿ ವಿದ್ಯಾರ್ಥಿಗೆ 2000 ರೂ. ನಷ್ಟಕ್ಕೆ ಡೊನೇಷನ್ ವಸೂಲಿ ಮಾಡುವ ಹಠವನ್ನು ಸಂತ ಅನ್ನಮ್ಮ ಶಾಲೆಯವರು ಬಿಡದಿದ್ದರೆ ವಿದ್ಯಾರ್ಥಿ ಯುವಜನರು, ನಾಗರಿಕರು, ಉಪವಾಸ ಸತ್ಯಾಗ್ರಹ ಮತ್ತಿತರ ಹೋರಾಟದ ಕ್ರಮಗಳಿಗೆ ಸಿದ್ಧತೆ ನಡೆಸುತ್ತಿದ್ದಾರೆ

FORM IV (See Rule 8)

1. Place of Publication	:	L-56, K.V. Temple Street Sulthanpet, Bangalore - 560 053
2. Periodicaly of Publication	:	Weekly
3. Printer's Name	:	P.Ramachandra Rao
Whether citizen of India	:	Yes
Address		L-56, K.V. Temple Street Sulthanpet, Bangalore - 560 053
4. Publisher's Name	:	P.Ramachandra Rao
Whether Citizen of India	:	Yes
Address	:	L-56, K.V. Temple Street Sulthanpet, Bangalore 560 053
5. Editor's Name	:	P.Ramachandra Rao
Whether Citizen of India	:	Yes
Address	:	L-56, K.V. Temple Street Sulthanpet, Bangalore - 560 053
6. Name and Address of individuals who own the share holders holding more than one percent of the total capital	:	Communist Party of India (Marxist) Karnataka State Committee L-56, K.V. Temple Street Sulthanpet, Bangalore - 560 053

I, P.Ramachandra Rao, hereby declare that the particulars given are true to the best of my knowledge and belief.

Sd/-
P. Ramachandra Rao
Publisher

Dated: 20th March 1989.

ಆಂಧ್ರ ಮಹಿಳಾ ಸಂಘದ 6ನೇ ಸಮ್ಮೇಳನ

ಆಂಧ್ರ ಮಹಿಳಾ ಸಂಘದ 6ನೇ ಆಂಧ್ರ ರಾಜ್ಯ ಸಮ್ಮೇಳನ ಪಶ್ಚಿಮ ಗೋದಾವರಿ ಜಿಲ್ಲೆ ಪಾಲಕೊಲ್ಲುವಿನಲ್ಲಿ ಮಾರ್ಚ್ 1,2,3,ರಂದು ಯಶಸ್ವಿಯಾಗಿ ಜರು ಗಿತು. ಆಂಧ್ರದ 18 ಜಿಲ್ಲೆ ಪ್ರತಿನಿಧಿಸಿ 65 0 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯದರ್ಶಿ ಮಂಡಿಸಿದ ವರದಿಯ ಮೇಲೆ 45 ಜನ ಚರ್ಚೆಯಲ್ಲಿ ಪಾಲ್ಗೊಂಡರು.

ಕಾಂಗ್ರೆಸ್, ನಕ್ಸಲೈಟ್, ಸಿ.ಪಿ.ಐ. ಗೂಂಡಾ ದಾಳಿಯಲ್ಲಿ ಪ್ರಾಣಾರ್ಪಣೆಗೈದ 11 ಸಂಗಾತಿಗಳ ಪತ್ನಿಯರು ಮಾತನಾಡಿ ದರು. ಕಾ|| ನಂಡೂರಿಪ್ರಸಾದ್‌ರಾವ್ ಸಭೆ ಯನ್ನುದ್ದೇಶಿಸಿ ಮಾತನಾಡಿದರು.

ಮಹಿಳೆಯರ ಆಸ್ತಿ ಹಕ್ಕು, ಗ್ರಾಮೀಣ ಮಹಿಳೆಯರ ಸಮಸ್ಯೆ, ಸ್ತ್ರೀ ಭ್ರೂಣ ಹತ್ಯೆ, ಬಾಲ ಕಾರ್ಮಿಕರ ಸಮಸ್ಯೆ ಮುಂತಾದ ಹಲವಾರು ನಿರ್ಣಯ ಗಳನ್ನು ಸ್ವೀಕರಿಸಲಾಯಿತು. ಕರ್ನಾಟಕ ದಿಂದ ಕಾ|| ಕೆ.ಶಾಂತಕುಮಾರಿಯವರು ಆಹ್ವಾನಿತರಾಗಿ ಸಮ್ಮೇಳನದಲ್ಲಿ ಭಾಗವಹಿಸಿ ದ್ದರು.

ಬಸ್ಸು ಸಂಚಾರಕ್ಕೆ ಶೀಘ್ರ ಕ್ರಮ ಕೈಗೊಳ್ಳಲು ಸಿ.ಪಿ.ಐ.(ಎಂ) ಒತ್ತಾಯ

ಬಂಟ್ವಾಳ್, ಮಾರ್ಚ 18 ಕಳೆದ 15 ದಿನಗಳಿಂದ ಬಂಟ್ವಾಳ್ ಸರಪಾಡಿ- ಅಜಿಲ ಮೊಗಲರು, ಮತ್ತು ಅಲ್ಲಿಪಾದಿ ಗಳಿಗೆ ಸಂಚರಿಸುತ್ತಿದ್ದ ಖಾಸಗಿ ಬಸ್ಸು ಗಳು ಮತ್ತು ಸರ್ಕಾರಿ ಬಸ್ಸುಗಳು ತನ್ನ ಸಂಚಾರಗಳನ್ನು ನಿಲ್ಲಿಸಿದ್ದರಿಂದ ಸಾರ್ವ ಜನಿಕರಿಗೆ ತೀವ್ರ ತೊಂದರೆಯಾಗಿದೆ ಎಂದು ಸಿ.ಪಿ.ಐ.(ಎಂ)ನ ಬಂಟ್ವಾಳ ತಾಲೂಕು ಸಮಿತಿಯು ಅಭಿಪ್ರಾಯ ಪಟ್ಟಿದೆ.

ಈ ಬಗ್ಗೆ ಸರ್ಕಾರಕ್ಕೆ ತಂತಿ ಮನವಿ ಯೊಂದನ್ನು ಸಮಿತಿಯ ಕಾರ್ಯದರ್ಶಿ ಶ್ರೀ ಬಿ.ವಾಸುಗಟ್ಟಿಯವರು ಕಳುಹಿಸಿ ಸರ್ಕಾ ರವು ಕೂಡಲೇ ಮಧ್ಯ ಪ್ರವೇಶ ಮಾಡಿ ಸಮಸ್ಯೆಗೆ ಪರಿಹಾರ ನೀಡಿ ಈ ರಸ್ತೆಯಲ್ಲಿ ಕೂಡಲೇ ಮೊದಲಿನಂತೆ ಬಸ್ಸುಗಳ ಓಡಾಟದ ವ್ಯವಸ್ಥೆಯನ್ನು ಮಾಡಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡಿ ದ್ದಾರೆ.

ಪತ್ರಕರ್ತರ ಮೇಲಿನ ಹಲ್ಲೆ ಖಂಡನೆ

ಗುಲ್ಬರ್ಗಾ ವಿಶ್ವ ವಿದ್ಯಾಲಯ ಘಟಿಕೋತ್ಸವ ಸಮಾರಂಭದಲ್ಲಿ ಭಾಗ ವಹಿಸಲು ಆಗಮಿಸಿದ್ದ ಪತ್ರಕರ್ತರಾದ ಶ್ರೀ ಎಂ.ಸಿ.ಮಾಣ್ಣಿರವರ ಮೇಲೆ [illegible] ಗೂಂಡಾಗಳು ಮಾಡಿದ ಹಲ್ಲೆ ಯನ್ನು ಎಸ್.ಎಫ್.ಐ. ಗುಲ್ಬರ್ಗಾ ಜಿಲ್ಲಾ ಸಹ ಕಾರ್ಯದರ್ಶಿ ಕಾ|| [illegible] ಖಂಡಿಸಿ, ಹಲ್ಲೆ ನಡೆಸಿದ ಗೂಂಡಾಗಳನ್ನು ಬಂಧಿಸಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ದ.ಕ. ಜಿಲ್ಲಾ ರೈತರ ಸಮ್ಮೇಳನ

ರೈತರಿಗೆ ಭೂಒಡೆತನ ಒತ್ತಾಯಿಸಿ ಚಳುವಳಿಗೆ ಕರೆ

ಪ್ರಾಂತರೈತ ಸಂಘದ ದ.ಕ. ಜಿಲ್ಲಾ 9ನೇ ಸಮ್ಮೇಳನ ಮಾರ್ಚ್ 4 ಮತ್ತು 5 ರಂದು ಸುಳ್ಯದಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು.

ರೈತ ನಾಯಕ ಕಾ|| ಯು. ಜನಾರ್ಧನನ್ನಾಕ್‌ರವರ ಧ್ವಜಾರೋಹಣ ಕಾ|| ಕೆ.ಆರ್.ಶ್ರೀಯಾನ್‌ರವರ ಅಧ್ಯಕ್ಷತೆಯಲ್ಲಿ ಆರಂಭವಾದ ಸಮ್ಮೇಳನವನ್ನು ಕಾ|| ಜಿ.ವಿ.ಶ್ರೀರಾಮರೆಡ್ಡಿಯವರು ಉದ್ಘಾಟಿಸಿ ದರು.

ಸ್ವಾಗತ ಸಮಿತಿ ಅಧ್ಯಕ್ಷ ಕಾ|| ಕೆ.ಸೂರ್ಯನಾರಾಯಣಭಟ್ ಮೊದಲಿಗೆ ಎಲ್ಲರನ್ನು ಸ್ವಾಗತಿಸಿದರು.

ಸಮ್ಮೇಳನಕ್ಕೆ ಶುಭಕೋರಿ ಜನತಾದಳ ಮುಖಂಡ ಶ್ರೀ ಮಾಧವ ಜಿ.ರಾವ್ ಮತ್ತು ಕೊಂಗೊಡಿ ದಯಾನಂದ ಮಂಡಲ ಪ್ರಧಾನ ಎಂ.ಬಾಲಕೃಷ್ಣರವರು ಹಾಗೂ ಎಸ್.ಎಂ.ಕಾಲೇಜ್ ವ್ಯವಸ್ಥಾಪಕ ವೆಂಕಟರಮಣಗೌಡ ಎಸ್.ಎಫ್.ಐ. ಉಪಾಧ್ಯಕ್ಷ ದೇವಪ್ಪನವರು ಮಾತನಾಡಿ ದರು.

ಪ್ರತಿನಿಧಿ ಅಧಿವೇಶನದಲ್ಲಿ ಕಾರ್ಯದರ್ಶಿ ಕಾ|| ಅಬ್ರಹಾಂ ಕರ್ಕಡ ವರದಿ ಮಂಡಿ ಸಿದರು. ಚರ್ಚೆ ನಂತರ ವರದಿ ಅಂಗೀಕರಿ ಸಲಾಯಿತು.

1974ರಲ್ಲಿ ಜ್ಯಾರಿಯಾದ ಕರ್ನಾಟಕ ಭೂಸುಧಾರಣಾ ಕಾಯಿದೆಯಂತೆ ಟ್ರಿಬ್ಯೂನಲ್‌ಗಳಿಗೆ ಅರ್ಜಿ ಸಲ್ಲಿಸಿದ ರೈತರಿಗೆ ತೀರ್ಮಾನದ ಭೂಮಿಯ ಒಡೆತನದ ಹಕ್ಕು ಇಗಲು 10ವರ್ಷ ಕಾಯಬೇಕಾ ಗಿದೆ. ಇದು ರೈತರಿಗೆ ಮಾಡಿದ ತೀರಾ ಅನ್ಯಾಯವಾಗಿದ್ದು ಭೂ ಒಡೆತನ ಶೀಘ್ರ ದೊರೆಯುವಂತೆ ಕ್ರಮ ಕೈಗೊಳ್ಳಬೇಕೆಂದು ಸಮ್ಮೇಳನ ಒತ್ತಾಯಿಸಿತು. ಜಿಲ್ಲೆಯಾ ದ್ಯಂತ ಈ ಕುರಿತು ಹೋರಾಟ ರೂಪಿ ಸಲು ನಿರ್ಧರಿಸಿತು.

ರೈತರು ಬೆಳೆದ ಬೆಳೆಗೆ ನ್ಯಾಯಬೆಲೆ, ಕೃಷಿ ಸಲಕರಣೆಗಳು ಕಡಿಮೆ ಬೆಲೆಗೆ, ಸರ್ಕಾರಿ ಭೂಮಿ ಸಾಗುವಳಿ ಮಾಡಿದ ರೈತರಿಗೆ ಸಕ್ರಮಗೊಳಿಸಬೇಕು, ನಿವೇಶನ ರಹಿತರಿಗೆ ಆರ್ಥಿಕ ನೆರವು, ಕಡಿಮೆ ಬಡ್ಡಿ ದರದಲ್ಲಿ ಸಾಲ, ಕರಾವಳಿ ಪ್ರದೇಶದಲ್ಲಿ ನದಿ ಮತ್ತು ತೋಡುಗಳಲ್ಲಿ ಹೊಯ್ಗೆ ಮಣ್ಣು ತೆಗೆಯಲು ಕ್ರಮ ಕೈಗೊಳ್ಳ ಬೇಕು. ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ವರ್ಷವಿಡೀ ಕೆಲಸದ ಭದ್ರತೆ ಒದಗಿಸ ಬೇಕು, ಭೂ ಸುಧಾರಣಾ ಕಾಯ್ದೆ ಅನ್ವಯ ಭೂಮಿ ಕಳೆದುಕೊಂಡ ಸಣ್ಣ ಹಿಡುವಳಿದಾರರಿಗೆ ಪರಿಹಾರ ನೀಡಬೇಕು ಮುಂತಾದ 16 ನಿರ್ಣಯಗಳನ್ನು ಸಮ್ಮೇಳನ ಸ್ವೀಕರಿಸಿತು.

5 ರಂದು ನಡೆದ ಮೆರವಣಿಗೆ ಬಹಿರಂಗ ಸಭೆಯಲ್ಲಿ ಸಿ.ಪಿ.ಐ.(ಎಂ) ಶಾಸಕ ಕಾ|| ಆರ್. ವೆಂಕಟರಾಮಯ್ಯ, ಶ್ರೀರಾಮರೆಡ್ಡಿ, ಬಿ.ಎಂ.ರಾಮಯ್ಯಶೆಟ್ಟಿ ಮುಂತಾದವರು ಮಾತನಾಡಿ ರಾಜೀವ್‌ಗಾಂಧಿ ಸರ್ಕಾರ ದೇಶದಲ್ಲಿ ಉದ್ಭವಿಸಿರುವ ದೇಶದ ಬಿಕ್ಕಟ್ಟನ್ನು ರೈತರು ಹಾಗೂ ಜನ ಸಾಮಾನ್ಯರ ಮೇಲೆ ಹೊರಿಸುವುದರ ಮೂಲಕ ಜನವಿರೋಧಿ ರೈತ ವಿರೋಧಿಯಾಗಿದೆ. ಇತರೆ ಜನ ವಿಭಾಗದಂತೆ ರೈತರು ಇಂದು ಹೆಚ್ಚು ಹೆಚ್ಚು ಹೋರಾಟದ ಕಣಕ್ಕಿಳಿದಿದ್ದಾರೆ. ಎಲ್ಲ ವಿಭಾಗದ ಜನತೆಯ ವಿಶ್ವಾಸ ಕಳೆದುಕೊಂಡ ಸರ್ವಾಧಿಕಾರಿ ಕಾಂಗ್ರೆಸ್ ಸೋಲಿಸಿ, ಎಡ- ಪ್ರಜಾಪ್ರಭುತ್ವ ಪ್ರಗತಿಪರ [illegible] ಕೇಂದ್ರದಲ್ಲಿ ಅಧಿಕಾರಕ್ಕೆ ತರುವ ದಿಸೆಯಲ್ಲಿ ರೈತ ಸಮುದಾಯ ಮಹತ್ವದ ಪಾತ್ರ ವಹಿಸಬೇಕೆಂದು ಕರೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಕಾ|| ಕೆ.ಆರ್.ಶ್ರೀಯಾನ್ ವಹಿಸಿದ್ದರು. ಕಾ|| ಸೂರ್ಯನಾರಾಯಣಭಟ್ ಸ್ವಾಗತಿಸಿ ಕಾ|| ಮೊನಪ್ಪಗೌಡ ವಂದಿಸಿದರು.

ನೂತನ ಜಿಲ್ಲಾ ಸಮಿತಿ

ಕಾ|| ಕೆ.ಆರ್.ಶ್ರೀಯಾನ್ (ಅಧ್ಯಕ್ಷರು) ಕಾ|| ಯು.ಜನಾರ್ಧನನ್ನಾಕ್, ಕೆ.ಸೂರ್ಯ ನಾರಾಯಣಭಟ್, ದಾಸ್‌ಭಂಡಾರಿ (ಉಪಾಧ್ಯಕ್ಷರು) ಕಾ|| ಅಬ್ರಹಾಂ ಕರ್ಕಡ (ಕಾರ್ಯದರ್ಶಿ), ರಾಮಚಂದ್ರಉಬ್ಬೈಲ್, ಬಿ. ವಿಷ್ಣುಮೂರ್ತಿ, ಕೆ. ಮೋನಪ್ಪಗೌಡ, (ಜತೆಕಾರ್ಯದರ್ಶಿಗಳು) ಡೇವಿಡ್‌ಕರ್ಕಡ (ಕೋಶಾಧಿಕಾರಿ.)

ಲಿಂಗಸುಗೂರು ತಾ|| 2ನೇ ಸಮ್ಮೇಳನ

ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕು ದ್ವಿತೀಯ ಸಮ್ಮೇಳನ ಹಟ್ಟಿ ಯಲ್ಲಿ ಫೆಬ್ರವರಿ 27ರಂದು ಕಾ|| ಪುರು ಷೋತ್ತಮ ಕಲಾಲಬಂಡಿಯವರ ಉದ್ಘಾ ಟನೆ, ತಾಲ್ಲೋಕು ಅಧ್ಯಕ್ಷ, ಕಾ|| ಶರಣಪ್ಪ ನಾಗಲಾಪುರರವರ ಧ್ವಜಾರೋಹಣದೊಂದಿಗೆ ಆರಂಭವಾಯಿತು. ಕಾ|| ಸಪ್ದರ್‌ಹಾಶ್ಮಿ, ಕಾ|| ಶಂಕರ್ ದಯಾಲ್ ತಿವಾರಿ ಹಾಗೂ ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಪ್ರ. ಕಾರ್ಯದರ್ಶಿ ಕಾ|| ಕಂಟೆಪ್ಪ ಮಟ್ಟೂರು ಅವರು ವರದಿ ಮಂಡಿಸಿದರು. ಎಸ್.ಎಫ್.ಐ., ಡಿ.ವೈ.ಎಫ್.ಐ. ಹಾಗೂ ಮಂಡಲ ಪಂಚಾಯ್ತಿ ಸದಸ್ಯರು ಶುಭಾ ಶಯ ಕೋರಿದರು. 70 ಮಂದಿ ಪ್ರತಿ ನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿ 15 ಜನರು ಚರ್ಚೆಯಲ್ಲಿ ಪಾಲ್ಗೊಂಡರು.

ನೂತನ ತಾಲ್ಲೂಕು ಸಮಿತಿ

ಕಾ|| ಗುಂಡಪ್ಪ ಪಾಟೀಲ (ಅಧ್ಯಕ್ಷ), ಕಾ|| ಶೇಖರಪ್ಪ (ಉಪಾಧ್ಯಕ್ಷ) ಕಂಟೆಪ್ಪ ಮಟ್ಟೂರ (ಪ್ರ. ಕಾರ್ಯದರ್ಶಿ) ಮಾನಯ್ಯ (ಸಹಕಾರ್ಯದರ್ಶಿ) ಶರಣಪ್ಪ ನಾಗಲಾಪುರ (ಖಜಾಂಚಿ)ಯವರನ್ನೊಳಗೊಂಡ 15 ಜನರ ಸಮಿತಿ ಆರಿಸಲಾಯಿತು.

ರೈತರ ಕಾಲ್ನಡಿಗೆ ಜಾಥ

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ನೇರಳಕುಪ್ಪೆ ರೈತ ಸಂಘದ ಬಗುರ್‌ಹುಕುಂ ಸಾಗುವಳಿ ಭೂಹೀನ ಬಡ ರೈತರಿಗೆ ಹಕ್ಕು ಪತ್ರ ನೀಡಬೇಕು ರೈತರನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಿಸ ಬೇಕೆಂದು ಒತ್ತಾಯಿಸಿ ಪ್ರಾಂತ ರೈತ ಸಂಘದ ಕರೆಯಂತೆ ಮಾರ್ಚ್ 2ರಂದು ನೇರಳಕುಪ್ಪೆಯಿಂದ ಹೊರಟ ರೈತರ ಕಾಲ್ನಡಿಗೆ ಜಾಥ 4ರಂದು ಮೈಸೂರನ್ನು ತಲುಪಿ ಜಿಲ್ಲಾಧಿಕಾರಿಯವರಿಗೆ ತಮ್ಮ ಬೇಡಿಕೆಗಳ ಮನವಿ ಅರ್ಪಿಸಿ ಒತ್ತಾಯಿ ಸಿತು. ಕಳೆದ ಹತ್ತಾರು ವರ್ಷಗಳಿಂದ ತಾವು ಸಾಗುವಳಿ ಮಾಡಿಕೊಂಡು ಬರುತ್ತಿ ರುವ ಭೂಮಿಯನ್ನು ಕಸಿದುಕೊಳ್ಳುವ ಸರ್ಕಾರದ ಜನವಿರೋಧಿ ನೀತಿಯನ್ನು ಕೈಬಿಟ್ಟು ಒಕ್ಕಲೆಬ್ಬಿಸುವುದನ್ನು ಕೂಡಲೇ ನಿಲ್ಲಿಸಿ ಸಾಗುವಳಿ ಪತ್ರ ನೀಡಬೇಕೆಂದು ರೈತ ಸಂಘ ಜಿಲ್ಲಾಕಾರಿಗಳನ್ನು ಒತ್ತಾಯಿಸ ಲಾಯಿತು. ರೈತರ ಮೇಲೆ ದಂಡ ಹಾಕು ವುದನ್ನು ತಕ್ಷಣದಿಂದಲೇ ನಿಲ್ಲಿಸಬೇ ಕೆಂದು ನಿರ್ಲಕ್ಷ್ಯ ತೋರಿದರೆ ಆದರೆ ರೈತ ಸಂಘ ಮುಂದಿನ ಹಂತದ ಹೋರಾಟ ನಡೆಸುವುದಾಗಿ ಹೇಳಿದೆ. ಕಾ|| ರೈತ ಸಂಘದ ಕಾರ್ಯದರ್ಶಿ ಕಾ|| ವಿ.ಸಿ.[illegible] ಅಧ್ಯಕ್ಷ, ಕಾ|| ಗೋಪಾಲ [illegible] ನೇತೃತ್ವ ವಹಿಸಿದ್ದರು.

ಕೇರಳದಲ್ಲಿ ಮತ್ತೆ ಜನವಾದೀ ಸಂಸ್ಕೃತಿಯ ಕೇಂದ್ರಗಳಾಗಿ ಗ್ರಂಥಾಲಯಗಳು

ಕೇರಳದ ಎಲ್.ಡಿ.ಎಫ್. ತನ್ನ ಚುನಾವಣಾ ಘೋಷಣೆಯಲ್ಲಿ ಕೇರಳ ಗ್ರಂಥಾಲಯ ಆಂದೋಲನಕ್ಕೆ ತುರ್ತು ಪರಿಸ್ಥಿತಿಯಲ್ಲಿ ತಗಲಿಸಿದ ಗ್ರಹಣವನ್ನು ನಿವಾರಿಸುವ ವಚನ ನೀಡಿತ್ತು. ಇತ್ತೀಚೆಗೆ 48 ಗಂಟೆಗಳ ದೀರ್ಘ ಚರ್ಚೆ ನಡೆಸಿ ಜನ ಸಾಮಾನ್ಯರ ಜ್ಞಾನ ಸಂಪಾದನೆಯಿಂದ ಭಯಗೊಂಡವರ ಅಡ್ಡಿ-ಆತಂಕಗಳನ್ನೆಲ್ಲಾ ಮೀರಿ ಕೇರಳ ವಿಧಾನ ಸಭೆ ಕೇರಳ ಸಾರ್ವಜನಿಕ ಗ್ರಂಥಾಲಯ (ಕೇರಳ ಗ್ರಂಥ ಶಾಲಾ ಸಂಘಂ ಮಸೂದೆ ಎಂಬ ಸಮಗ್ರ ಶಾಸನವೊಂದನ್ನು ಅಂಗೀಕರಿಸಿ ಮತದಾರರಿಗೆ ನೀಡಿದ ಇನ್ನೊಂದು ವಚನವನ್ನು ಎಲ್.ಡಿ.ಎಫ್. ಈಡೇರಿತು.

ಜನಪರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಶಿಷ್ಟತೆ ಪಡೆದ ಕೇರಳದ ಇನ್ನೊಂದು ವಿಶಿಷ್ಟತೆ ಈ ಗ್ರಂಥಾಲಯ ಆಂದೋಲನ. 1945 ರಲ್ಲಿ ಆರಂಭವಾದ ಈ 'ಕೇರಳ ಗ್ರಂಥ ಶಾಲಾ ಸಂಘಂ' ಆಂದೋಲನ ತನ್ನ ಬೆಳ್ಳಿಹಬ್ಬದ ಹೊತ್ತಿಗೆ ರಾಜ್ಯಾದ್ಯಂತ ವ್ಯಾಪಿಸಿ 45 00 ಶಾಖೆಗಳನ್ನು ಹೊಂದಿತ್ತು. ರಾಜ್ಯದ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಜನತೆಯ ನೆರವಿನಿಂದ, ಜನತೆಗಾಗಿ, ಜನತೆಯಿಂದ ನಡೆಸಲ್ಪಡುವ ಇವು ಕೇವಲ ಗ್ರಂಥಾಲಯಗಳಷ್ಟೇ ಆಗಿಲ್ಲ. ಎಲ್ಲ ಗ್ರಂಥಾಲಯಗಳಿಗೂ ತಮ್ಮದೇ ಆದ ವಚನಾಲಯಗಳಿವೆ. ಬೆಳಿಗ್ಗೆ ಇಲ್ಲಿ ಊರಿನ ಜನರೆಲ್ಲಾ ಬಂದು ಪತ್ರಿಕೆಗಳನ್ನು, ನಿಯತಕಾಲಿಕೆಗಳನ್ನು ಓದುತ್ತಾರೆ. ಹೆಚ್ಚಿನ ಗ್ರಂಥಾಲಯಗಳಲ್ಲಿ ಕಲಾ ಮತ್ತು ಆಟೋಟಗಳ ವಿಭಾಗಗಳೂ ಸಕ್ರಿಯವಾಗಿವೆ. ಇವು ಜನಸಾಮಾನ್ಯರ ಸಾಂಸ್ಕೃತಿಕ ಜೀವನದ ಕೇಂದ್ರಗಳಾಗಿ ಬೆಳೆದಿವೆ ಹಲವು ಶಾಖೆಗಳು ವಯಸ್ಕರ ಶಿಕ್ಷಣದಲ್ಲಿ ತೊಡಗಿವೆ. ಶ್ರೀಮಂತರ 'ಕ್ಲಬ್'ಗಳಿಗೆ ಪರ್ಯಾಯವಾಗಿ ಬೆಳೆದ ಸಂಘಟನೆಗಳಿವು. ಬಹಳಷ್ಟು ಯುವಕರು ಈ ಗ್ರಂಥಶಾಲಾ ಆಂದೋಲನದ ಮೂಲಕವೇ ಸಾಮಾಜಿಕ, ರಾಜಕೀಯ ಕಾರ್ಯಕರ್ತರಾಗಿ ರೂಪಗೊಂಡರು.

ಇಂತಹ ಶಕ್ತಿಶಾಲೀ ಜನಪರ ಸಾಂಸ್ಕೃತಿಕ ಆಂದೋಲನ ಆಳುವ ವರ್ಗಗಳ ವಕ್ರಗಣ್ಣಿಗೆ ಬಿದ್ದರೆ ಆಶ್ಚರ್ಯವೇನಿಲ್ಲ. 1975 ರ ತುರ್ತು ಪರಿಸ್ಥಿತಿಯ ಕರಾಳ ರಾತ್ರಿ ಅವರಿಗೆ ಸುವರ್ಣಾವಕಾಶ ಒದಗಿಸಿತು. ಗ್ರಂಥಾಶಾಲಾ ಸಂಘಂನ್ನು ವಿಸರ್ಜಿಸಿ ಕರುಣಾಕರನ್ ಸರಕಾರ ಒಂದು ಅಧಿಕಾರಶಾಹೀ ಯಂತ್ರವನ್ನು ಸ್ಥಾಪಿಸಿ ಇಡೀ ವ್ಯವಸ್ಥೆಯನ್ನೇ ಭ್ರಷ್ಟಾಚಾರದ ತವರಾಗಿ ಮಾಡಲಾಯಿತು.

ಕೇರಳ ಶಿಕ್ಷಣ ಮಂತ್ರಿಯವರು ಮಂಡಿಸಿದ ಈ ಸಮಗ್ರ ಶಾಸನ ಕೇರಳದ ಬೃಹತ್ ಗ್ರಂಥಾಲಯ ಆಂದೋಲನಕ್ಕೆ ಸ್ಪಷ್ಟ ಕಾನೂನು ನೆಲೆ ನಿರ್ಮಿಸಿ ಅದರ ಅಪಾರ ಸಾಧ್ಯತೆಗಳಿಗೆ ಅವಕಾಶ ನೀಡುವ ಉದ್ದೇಶ ಹೊಂದಿತ್ತು. ಕಾಂಗ್ರೆಸ್(ಐ)ನವರು ಇದನ್ನು ನೇರವಾಗಿ ವಿರೋಧಿಸಲು ಸಾಧ್ಯವಾಗದ್ದರಿಂದ ಕೇವಲ 48 ವಿಭಾಗಗಳಿರುವ ಈ ಮಸೂದೆಗೆ 1324 ತಿದ್ದುಪಡಿಗಳ ಮೂಲಕ ಅಡ್ಡಿ ಆತಂಕವೊಡ್ಡಲು ಪ್ರಯತ್ನಿಸಿತು. ದೀರ್ಘ ಹಾಗೂ ಸತತ ಚರ್ಚೆಯ ನಂತರ ಕೊನೆಗೂ ಬಹುದಿನಗಳ ನಿರೀಕ್ಷೆಯ ಈ ಸಮಗ್ರ ಶಾಸನ ಅವಿರೋಧವಾಗಿ ಅಂಗೀಕಾರ ಪಡೆಯಿತು.

"ದೆಹಲಿಯಾಗಲಿ ರಾಜಸ್ತಾನವಾಗಲಿ ವೇತನ-ಭತ್ಯೆ ಸಮಾನವಾಗಲಿ"

"ಇದು ಅಜಮೇರ್‌ನಲ್ಲಿ ಒಂದು ತಿಂಗಳಿಗೂ ಹೆಚ್ಚು ಕಾಲ ನಡೆಯುತ್ತಾ ಬಂದಿದ್ದ ರಾಜಸ್ತಾನ ಸರ್ಕಾರೀ ನಗರದ ಮುಷ್ಕರಕ್ಕೆ ಬೆಂಬಲವಾಗಿ ನಡೆದ ಸೌಹಾರ್ದ ಮೆರವಣಿಗೆಯಲ್ಲಿ ಕೇಳಿಬಂದ ಒಂದು ಘೋಷಣೆ. ಫೆಬ್ರವರಿ 24ರಂದು ರಾಜ್ಯಾದ್ಯಂತ ರಾಜ್ಯ ಸರ್ಕಾರೀ ನೌಕರರಿಗೆ ಬೆಂಬಲವಾಗಿ ಆರಂಭವಾದ ರಾಜ್ಯವ್ಯಾಪೀ 'ಕೈಗಾರಿಕಾ ಬಂದ್' ಸರ್ಕಾರ ಕೊನೆಗೂ ತನ್ನ ನೌಕರರ ಬೇಡಿಕೆಗಳಲ್ಲಿ ಬಹಳಷ್ಟು ಮನ್ನಿಸುವಂತೆ ಮಾಡಿತು. ಫಲವಾಗಿ ಫೆಬ್ರವರಿ 24ರಂದು 46 ದಿನಗಳ ದೀರ್ಘ ಮುಷ್ಕರವನ್ನು ನಿಲ್ಲಿಸಿದರು.

ಈ ಮುಷ್ಕರ ರಾಜಸ್ತಾನ ರಾಜ್ಯ ಸರ್ಕಾರೀ ನೌಕರರ ಇತಿಹಾಸದಲ್ಲಿ ಹೊಸ ದಾಖಲೆ ಸ್ಥಾಪಿಸಿದೆ. ಜಿಲ್ಲಾ ಮಟ್ಟದಿಂದ ಗಜೆಟೆಡ್ ಅಧಿಕಾರಿಗಳೂ ಸೇರಿದಂತೆ ಎಲ್ಲಾ ವಿಭಾಗಗಳ ಅಭೂತಪೂರ್ವ ಐಕ್ಯತೆಯನ್ನು ಸಾಧಿಸಿದ ಹೋರಾಟವಿದು.

ಅಖಿಲಭಾರತ ರಾಜ್ಯ ಸರ್ಕಾರೀ ನೌಕರರ ಒಕ್ಕೂಟದ ಪ್ರಧಾನಕಾರ್ಯದರ್ಶಿ ಸುಕೋಮಲ್ ಸೇನ್ ರಾಜಸ್ತಾನದ ಸರ್ಕಾರೀ ನೌಕರರು ಮತ್ತು ಶಿಕ್ಷಕರನ್ನು ಅಭಿನಂದಿಸಿದ್ದಾರೆ.

ಕಾನಪುರ ಗಿರಣಿ ಕಾರ್ಮಿಕರಿಗೆ ದೊಡ್ಡ ವಿಜಯ

ಫೆಬ್ರವರಿ 27ರಂದು ಕಾನಪುರದ 40 ಸಾವಿರ ಗಿರಣಿ ಮತ್ತು ಉಣ್ಣೆ ಕಾರ್ಮಿಕರ ಚಾರಿತ್ರಿಕ ಚಳುವಳಿ ಅಭೂತಪೂರ್ವ ಯಶಸ್ಸಿಯೊಂದಿಗೆ ಮುಕ್ತಾಯಗೊಂಡಿತು.

ಅಕ್ಟೋಬರ್ 1985 ರಲ್ಲಿ ಈ ಕಾರ್ಮಿಕರಿಗೆ ಮಾಸಿಕ ರೂ. 60/- ತಾತ್ಕಾಲಿಕ ಪರಿಹಾರ ಕೊಟ್ಟ ಉತ್ತರಪ್ರದೇಶದ ಸರ್ಕಾರ ಸಂಬಳ ಮತ್ತು ಕೆಲಸದ ಭಾರದ ಬಗ್ಗೆ ನಿರ್ಧರಿಸಲು ಕೆ.ಕೆ.ಪಾಂಡೆ ಕೈಗಾರಿಕಾ ಟ್ರಿಬ್ಯೂನಲ್ ನೇಮಿಸಿತು. ಈ ಟ್ರಿಬ್ಯುನಲ್ ನಡೆಸಿದ ತನಿಖೆ ಸಂಪೂರ್ಣವಾಗಿ ಪಕ್ಷಪಾತ ಪೂರ್ಣವಾಗಿತ್ತು. ಟ್ರಿಬ್ಯೂನಲ್‌ನ ಅಧ್ಯಕ್ಷ ಪಾಂಡೆಯವರ ಇಬ್ಬರು ಮಕ್ಕಳಿಗೆ ಈ ಗಿರಣಿಯಲ್ಲಿ ಉನ್ನತ ಹುದ್ದೆಗಳನ್ನು ನೀಡಲಾಯಿತೆಂಬುದು ಗಮನಾರ್ಹ.

ಈ ಟ್ರಿಬ್ಯುನಲ್ ಪಕ್ಷಪಾತ ಪೂರ್ಣ ಶಿಫಾರಸನ್ನೂ ತಕ್ಷಣ ಜ್ಯಾರಿ ಮಾಡಲು ಕೂಡಾ ಸರ್ಕಾರ ಮೋಸದ ದಾರಿ ಅನುಸರಿಸಿತು. ಕಾರ್ಮಿಕರು ಒಕ್ಕೊರಲಿನಿಂದ ಇದನ್ನು ತಿರಸ್ಕರಿಸಿದರು. ಸಿ.ಐ.ಟಿ.ಯು. ನೇತೃತ್ವದಲ್ಲಿ ಪಾಂಡೆಅವಾರ್ಡ್ ವಿರೋಧಿ ಸಂಯುಕ್ತ ಪ್ರಚಾರ ಸಮಿತಿ ಆರಂಭಗೊಂಡಿತು. ಭಾರೀ ಮತ ಪ್ರದರ್ಶನಗಳನ್ನು ನಡೆಸಲು ಈ ಸಮಿತಿ ನೀಡಿದ ಕರೆಗೆ ದೊರೆತ ಭಾರೀ ಯಶಸ್ಸಿನಿಂದಾಗಿ ಸರ್ಕಾರ ಈ ಅವಾರ್ಡಿನ ಮೇಲೆ ತಡೆಯಾಜ್ಞೆ ತಂದಿತು. ಗಿರಣಿ ಮಾಲೀಕರು ಈ ತಡೆಯಾಜ್ಞೆಯ ವಿರುದ್ಧ ತಡೆಯಾಜ್ಞೆ ಪಡೆದದ್ದು ಕಾರ್ಮಿಕರನ್ನು ಇನ್ನಷ್ಟು ಕೋಪೋದ್ರಿಕ್ತರನ್ನಾಗಿಸಿತು.

ಈ ನಡುವೆ ಸಂಯುಕ್ತ ಕಾರ್ಯಾಚರಣೆಯಿಂದ ಕುಂಟುನೆಪ ಹೇಳಿಕೊಂಡು ತಪ್ಪಿದ್ದ ಕೆಲವು ಸಂಘಗಳು ಕಾರ್ಮಿಕರ ನಡುವೆ ತಮ್ಮ ಪ್ರಭಾವ ಕರಗುತ್ತಿರುವುದನ್ನು ಕಂಡು 'ರೈಲು ತಡೆ' ಕರೆ ನೀಡಿದರು. ಒಂದೆರಡು ಗಂಟೆಯ ತಡೆಯ ನಂತರ ಸರ್ಕಾರದಿಂದ ಭರವಸೆ ಪಡೆದು ಕಾರ್ಯಕ್ರಮ ಮುಗಿಸಬಹುದೆಂದು ಅವರ ನಿರೀಕ್ಷೆಯಾಗಿತ್ತು. ಆದರೆ ನಡೆದದ್ದೇ ಬೇರೆ. ಎಲ್ಲಾ ಕಾರ್ಮಿಕ ಸಂಘಗಳು ರೈಲ್ವೇ ಹಳಿಗಳ ಮೇಲೆ ಕೂತರು. ಪೋಲೀಸ್ ಅಧಿಕಾರಿಗಳು ಬಂದು ಮುಖಂಡರನ್ನು ಮುಖ್ಯಮಂತ್ರಿಗಳು ಮಾತುಕತೆಗೆ ಕರೆದಿದ್ದಾರೆಂದಾಗ ಹೊರಡಲನುವಾದ ಮುಖಂಡರಿಗೆ ಕಾರ್ಮಿಕರು ಛೀಮಾರಿ ಹಾಕಿದರು. ಪಾಂಡೆ ಅವಾರ್ಡ್ ರದ್ದಾದ ಮೇಲೆ ಮಾತ್ರವೇ ತಾವು ಅಲ್ಲಿಂದ ಕದಲುವುದೆಂದು ಕಾರ್ಮಿಕರು ಘೋಷಿಸಿದರು. ಮರುದಿನ ಫೆಬ್ರವರಿ 23ರ ಬೆಳಿಗ್ಗೆ ಹೊತ್ತಿಗೆ ಪ್ರಚಾರ ಸಮಿತಿಯ ಮುಖಂಡತ್ವದಲ್ಲಿ ಹೊಸ ಘೋಷಣೆ ಮೊಳಗಿತು- "ಆಟ್ ಘಂಟೇ ಕಾಮ್ ಕರೇಂಗೆ, ಸೋಲಾ ಘಂಟೆ ಜಾಮ್ ಕರೇಂಗೆ" (ಎಂಟು ಗಂಟೆ ಕೆಲಸ, ಹದಿನಾರು ಗಂಟೆ ರೈಲು ತಡೆ).

ಚಾರಿತ್ರಿಕ ಹೋರಾಟ ಆರಂಭವಾಗಿತ್ತು. ಪ್ರತಿದಿನ ಮೂರುಬಾರಿ ಒಂದೊಂದು ಷಿಫ್ಟ್ ಮುಗಿದಂತೆ ಕಾರ್ಮಿಕರು ಸರದಿಯಂತೆ ರೈಲು ತಡೆ ನಡೆಸಿದರು. ಅತ್ತ ಗಿರಣಿ ನೌಕಾಲೆಗೂ ಅವಕಾಶ ನೀಡಲಿಲ್ಲ. ಮೆರವಣಿಗೆಗಳು, ಸೌಹಾರ್ದ ಸಭೆಗಳು ನಡೆದವು. ವಿಧಾನಸಭೆಯ ಸರ್ವಪಕ್ಷ ಸಮಿತಿ ಬಂದಾಗ ಆಂದೋಲನದ ಮುಖಂಡರು ಮುಂದಿಟ್ಟ ವಾದಗಳನ್ನು ಒಪ್ಪಿಕೊಂಡ ಸಮಿತಿ ಪಾಂಡೆ ಅವಾರ್ಡನ್ನು ರದ್ದು ಮಾಡಲು ಶಿಫಾರಸು ಮಾಡಿದರು. ಎರಡು ದಿನಗಳ ನಂತರ ಉತ್ತರ ಪ್ರದೇಶ ಸರ್ಕಾರ ಪಾಂಡೆ ಅವಾರ್ಡನ್ನು ರದ್ದು ಮಾಡುವ ನಿರ್ಣಯ ಘೋಷಿಸಿತು. ಫೆಬ್ರವರಿ 22ರಿಂದ ಆರಂಭವಾದ ರೈಲುತಡೆ ಫೆಬ್ರವರಿ 27ರ ಬೆಳಿಗ್ಗೆ ರೈಲು ಸಂಚಾರವನ್ನು 110 ಗಂಟೆ ಸಂಪೂರ್ಣ ಸ್ತಬ್ಧಗೊಳಿಸಿದ್ದ ಕಾರ್ಮಿಕರು ಐಕ್ಯ ಕಾರ್ಯಾಚರಣೆಯ ಯಶಸ್ಸಿನ ಸಂತಸದೊಂದಿಗೆ ರೈಲು ಹಳಿಗಳನ್ನು ತೆರವು ಮಾಡಿದರು.

ನಾಟೋ ದೇಶಗಳಿಗೆ ನಿಶ್ಶಸ್ತ್ರೀಕರಣ ನೀತಿಯಿಲ್ಲ

ಮೇಜರ್ ಜನರಲ್ ಮಿಕೆಲ್ ಮೆಯೆನ್‌ಫೆಲ್ಸ್ ಹಾಲೆಂಡಿನ ನಿವೃತ್ತ ಸೇನಾಧಿಕಾರಿ. ಈಗ 'ಶಾಂತಿ ಮತ್ತು ನಿಶ್ಶಸ್ತ್ರೀಕರಣಕ್ಕಾಗಿ ಸೇನಾಧಿಕಾರಿಗಳು' ಸಂಘಟನೆಯ ಅಧ್ಯಕ್ಷರು. ವಿಶ್ವ ಶಾಂತಿಯ ಪ್ರಯತ್ನಗಳ ಬಗ್ಗೆ ಅವರ ಅಭಿಪ್ರಾಯ ಹೀಗಿದೆ:

"ಸಮಾಜವಾದೀ ಮುಂದಡಿ ನನ್ನಲ್ಲಿ ಆಶಾಭಾವನೆ ಹುಟ್ಟಿಸುತ್ತಿವೆ. ಆದರೆ ದುರದೃಷ್ಟವಶಾತ್ ಪಾಶ್ಚಿಮಾತ್ಯ ದೇಶಗಳಲ್ಲಿನ ಪ್ರತಿಕ್ರಿಯೆ ಬಗ್ಗೆ ಹೀಗೆ ಹೇಳಲು ಸಾಧ್ಯವಿಲ್ಲ. ಸಹಕಾರದ ಮಾರ್ಗದಲ್ಲಿ ನಮ್ಮ ಸಮಾಜದಲ್ಲಿ ಇನ್ನೂ ಹಲವು ತೊಡಕುಗಳಿವೆ. ಅವುಗಳಲ್ಲೊಂದು ಅಂತರ್ರಾಷ್ಟ್ರೀಯ ಅಂಶಗಳಿಗಿಂತ ರಾಷ್ಟ್ರೀಯ ಹಿತಾಸಕ್ತಿಗಳೇ ಪ್ರಬಲವಾಗುವ ಒಂದು ದುರ್ಬಲ ರಾಜಕೀಯ ರಚನೆ. ಅಲ್ಲದೆ ನಾಟೋ ದೇಶಗಳಿಗೆ ಒಂದು ಸುಸ್ಪಷ್ಟವಾದ ನಿಶ್ಶಸ್ತ್ರೀಕರಣ ನೀತಿಯೆಂಬುದಿಲ್ಲ.

ಪಾರಂಪರಿಕ ಶಸ್ತ್ರಾಸ್ತ್ರಗಳ ಕಡಿತದ ಬಗ್ಗೆ ಎಯೆನ್ನಾ ಮಾತುಕತೆಗಳ ಫಲಿತಾಂಶದ ಬಗ್ಗೆ ನನಗೆ ಕಳವಳ. ನಾಟೋ ಕೂಟದ ಯೋಜನೆಗಳನ್ನು ಪೂರ್ಣಗೊಳಿಸುವಂತೆ ಒತ್ತಡ ತರುವ ಪ್ರಭಾವೀ ಶಕ್ತಿಗಳು ನಮ್ಮ ಸಮಾಜದಲ್ಲಿವೆ. ಈ ಅಂಶ ಮರೆಯಲು ಸಾಧ್ಯವಿಲ್ಲ. ಸೋವಿಯತ್ ಸಾಮರ್ಥ್ಯದೆದುರು ಭಯದಿಂದಾಗಿ ಅವರಿಗೆ ಸಾರ್ವಜನಿಕ ಅಭಿಪ್ರಾಯದ ಬೆಂಬಲ ದೊರಕಿಸಿ ಕೊಡುತ್ತದೆ. ಪಾರಂಪರಿಕ ಶಸ್ತ್ರಾಸ್ತ್ರಗಳಲ್ಲಿ ನಾಟೋಕ್ಕಿಂತ ವಾರ್ಸಾಪಂಥಿ ಸಂಘಟನೆಯ ಬಲ ಹೆಚ್ಚು ಎಂಬ ವಾದ ಈಗಲೂ ಚಾಲ್ತಿಯಲ್ಲಿದೆ. ನಾನು ಅದನ್ನು ನಂಬುವುದಿಲ್ಲ. ನಾವಿಕ ಮತ್ತು ವಿಮಾನ ಪಡೆಗಳಲ್ಲಿ ಈಗಲೂ ನಾಟೋದ್ದೇ ಪ್ರಾಬಲ್ಯ. ಆದರೆ ಸಮಾನ ಶಕ್ತಿ ಇಂದಿನ ಪ್ರಮುಖ ಪ್ರಶ್ನೆಯಲ್ಲ. ಎಷ್ಟು ಸಲ ಯುರೋಪನ್ನು ನಾಶ ಮಾಡಬಹುದೆಂಬುದು ಬಹು ಮುಖ್ಯ ಪ್ರಶ್ನೆಯೇ?

ಪೋಲೀಸ್ ತಂತ್ರಕ್ಕೆ ನ್ಯಾಯಾಧೀಶರ ಛೀಮಾರಿ

ಕೆಳೆದ ವರ್ಷ ಮೇ-ಜೂನ್‌ನಲ್ಲಿ ಅಸ್ಸಾಂ ರೈಫಲ್ ಸೈನಿಕರು ಬುಡಕಟ್ಟು ಮಹಿಳೆಯ ಮೇಲೆ ಉಜಾನ್ ಮೈದಾನ್‌ಬಾರಿಯಲ್ಲಿ ನಡೆದ ಬರ್ಬರ ಅತ್ಯಾಚಾರಗಳ ಬಗ್ಗೆ ತನಿಖೆ ನಡೆಸದೆಯೇ ತ್ರಿಪುರಾ ಸರ್ಕಾರ ಅದನ್ನು ರಾಕರಿ ನಿರ್ಣಯಿಸುತ್ತಾ ಬಂದಿದೆ. ಮೇಲಧಿಕಾರಿಗಳ ಆದೇಶದ ಮೇರೆಗೆ ರಾಜ್ಯ ಪೋಲೀಸರೂ ಅದೇ ರಾಗ ಹಾಡುತ್ತಾ ಬಂದಿದ್ದರು. ಪೋಲೀಸರ ಈ ವಿಳಂಬ ತಂತ್ರದ ಬಗ್ಗೆ ಇದೇ ಫೆಬ್ರವರಿ 2ರಂದು ದಕ್ಷಿಣ ತ್ರಿಪುರಾ ಸಬ್-ಡಿವಿಜನಲ್ ಮ್ಯಾಜಿಸ್ಟ್ರೇಟರರು ಛೀಮಾರಿ ಹಾಕಿದ್ದಾರೆ. ಜೂನ್ 3ರಂದು ಎಫ್.ಐ.ಆರ್. ಸಲ್ಲಿಸಿದ ಬಳಿಕ ಎಂಟು ತಿಂಗಳ ಮೌನದ ನಂತರವಷ್ಟೇ ತನಿಖೆಯ ಪ್ರಗತಿಯ ಬಗ್ಗೆ ಪೋಲೀಸ್ ಇನ್ಸ್‌ಪೆಕ್ಟರ್ ವರದಿ ಸಲ್ಲಿಸಲಾಗಿದೆ ಎಂದಿರುವ ನ್ಯಾಯಾಧೀಶರು ಇಂತಹ ಗಂಭೀರ ಅಪರಾಧದಲ್ಲಿ ಈ ರೀತಿಯ ವರ್ತನೆ ನೋಡಿದರೆ ವಿಳಂಬ ತಂತ್ರ ಪ್ರವೃತ್ತಿ ಕಾಣುತ್ತಿದೆ ಎಂದು ತಮ್ಮ ಆದೇಶದಲ್ಲಿ ಹೇಳಿದ್ದಾರೆ. ಹಲ್ಲೆಗೊಳಗಾದ ಮಹಿಳೆಯರ ವೈದ್ಯಕೀಯ ಪರೀಕ್ಷೆ ಹಾಗೂ ಬಟ್ಟೆಗಳ ರಾಸಾಯನಿಕ ಪರೀಕ್ಷೆ ತಕ್ಷಣವೇ ಮಾಡಬೇಕೆಂದು ಗೊತ್ತಿದ್ದರೂ ಹಾಗೆ ಮಾಡುದಿರುವುದು ನೋಡಿದರೆ ಈ ಪೋಲೀಸ್ ಅಧಿಕಾರಿಯ ವರ್ತನೆ ಸಂಶಯಾಸ್ಪದವಾಗಿದೆ ಎಂದು ನ್ಯಾಯಾಧೀಶರು ಛೀಮಾರಿ ಹಾಕಿದ್ದಾರೆ.

"ಬಕ್ರೇಶ್ವರ್: ಸ್ವಾಭಿಮಾನದ ಸಂಕೇತ ರಕ್ತ-ಬೆವರಿನಿಂದ ಕಟ್ಟುತ್ತೇವೆ"

ಬಕ್ರೇಶ್ವರ್ ಮತ್ತು ಹಾಲ್ದಿಯಾ ಥರ್ಮಲ್ ವಿದ್ಯುತ್ ಸ್ಥಾವರಗಳನ್ನು ಆರಂಭಿಸುವುದಕ್ಕೆ ಕೇಂದ್ರ ಸರ್ಕಾರ ಸಹಾಯವನ್ನು ನೀಡಲು ನಿರಾಕರಿಸಿದೆ. ರಾಜ್ಯದ ಅಭಿವೃದ್ಧಿಗೆ ಗಣನೀಯ ಕಾಣಿಕೆ ನೀಡಲಿರುವ ಈ ವಿದ್ಯುತ್ ಸ್ಥಾವರಕ್ಕೆ ಕೇಂದ್ರ ಹಣ ನೀಡಲಿಲ್ಲವೆಂದು ಸುಮ್ಮನೆ ಕೂರಲಿಲ್ಲ. ರಕ್ತ ಮತ್ತು ಬೆವರಿನಿಂದ ಬಕ್ರೇಶ್ವರ ಸ್ಥಾವರವನ್ನು ಕಟ್ಟಲು ಜನತೆಯನ್ನು ಕ್ರಿಯಾಶೀಲ ಕಾರ್ಯಕ್ಕೆ ಎಡರಂಗ ಸರ್ಕಾರ ಇಳಿಸಿತು. ಅದರಂತೆ ರಾಜ್ಯದಾದ್ಯಂತ 'ರಕ್ತದಾನ' ಮಾಡಿ ಅದರ ಹಣವನ್ನು ಯೋಜನೆಗೆ ವಿನಿಯೋಗಿಸಲು ಕರೆ ನೀಡಲಾಯಿತು. ಇದನ್ನು ಸ್ವಾಭಿಮಾನದ ಸಂಕೇತವಾಗಿ ಪರಿಗಣಿಸಿದ ರಾಜ್ಯದ ಜನತೆ ಎಲ್ಲೆಡೆ ರಕ್ತದಾನ ಶಿಬಿರಗಳನ್ನೇರ್ಪಡಿಸಿದರು. ರಕ್ತ ಸಂಗ್ರಹಿಸುವ ಎಲ್ಲಾ ಕೇಂದ್ರಗಳೂ ತುಂಬಿ ಸ್ಥಳವಿಲ್ಲದಂತಾಯಿತಲ್ಲದೇ ರಕ್ತ ನೀಡಲು ಬಂದವರ ಸಂಖ್ಯೆ ಬೆಳೆಯುತ್ತಲೇ ಹೋಯಿತು.

ಇದರಲ್ಲಿ ಪಾಲ್ಗೊಳ್ಳಲು ಎಸ್.ಎಫ್.ಐ. ಪ.ಬಂಗಾಳದ ಘಟಕ ನೀಡಿದ ಕರೆಗೆ ಅಪೂರ್ವ ಪ್ರಕ್ರಿಯೆ ದೊರೆಯಿತು. ಶಿಬಿರ ತುಂಬಿ ಹಾರಿದ ಬಹಳಷ್ಟು ವಿದ್ಯಾರ್ಥಿ ಯುವಜನರು ತಮಗೆ ಅವಕಾಶ ತಪ್ಪಿಹೋದುದಕ್ಕೆ ತೀವ್ರ ನಿರಾಶೆ ಹೊಂದಿ ವಾಪಸಾದರು.

ಸಮ್ಮೇಳನದ ಪ್ರತಿನಿಧಿಗಳಿಗೆ ವಿನಂತಿಸಿಕೊಳ್ಳುವಾಗಲೇ ಇದು ತುಂಬಾ ಸಾಂಕೇತಿಕವೆಂದು ಪ್ರತಿ ರಾಜ್ಯವನ್ನು ಪ್ರತಿನಿಧಿಸಿ ಒಬ್ಬರು ಅಥವಾ ಇಬ್ಬರು ಸಂಗಾತಿಗಳು ಮಾತ್ರ ರಕ್ತದಾನ ಮಾಡಬೇಕೆಂದು ಮತ್ತೆ ಮತ್ತೆ ವಿವರಿಸಲಾಯಿತು.

ಕರ್ನಾಟಕವನ್ನು ಪ್ರತಿನಿಧಿಸಿ ಮುಂದೆ ಬಂದವರಲ್ಲಿ ಮೂರು ಸಂಗಾತಿಗಳನ್ನು ಮಾತ್ರ ಆಯ್ಕೆ ಮಾಡಲಾಯಿತು. ಅವರೆಂದರೆ ಕಾ॥ ಬಿ.ಉಮೇಶ್ (ತುಮಕೂರು) ಕಾ॥ ಮಾಯಿ (ಬೆಂಗಳೂರು) ಮತ್ತು ಕಾ॥ ಎಸ್.ಬಾಲಪ್ಪ (ಬಳ್ಳಾರಿ).

ಹೀಗೆ ಬಂದು ರೂ. 41,000 ಚೆಕ್ಕನ್ನು ಬಹಿರಂಗ ರ್‍ಯಾಲಿಯಲ್ಲಿ ಮುಖ್ಯಮಂತ್ರಿ ಜ್ಯೋತಿಬಸುರವರಿಗೆ ಪ.ಬಂಗಾಳದ ಘಟಕದ ಕಾರ್ಯದರ್ಶಿ ಸುಜನ್‌ಚಕ್ರವರ್ತಿ ನೀಡಿದರು.

ಪೋರ್ಚುಗಲ್ ಕಮ್ಯೂನಿಸ್ಟ್ ಪಕ್ಷದ ನಿಯೋಗ

ಪೋರ್ಚುಗಾಲ್ ಕಮ್ಯೂನಿಸ್ಟ್ ಪಕ್ಷದ ನಿಯೋಗವೊಂದು ಸಿ.ಪಿ.ಐ.(ಎಂ) ಮುಖಂಡತ್ವವನ್ನು ಮಾರ್ಚ್ 13ರಂದು ಭೇಟಿ ಮಾಡಿತು. ಕೇಂದ್ರ ಸಮಿತಿಯ ಕಾರ್ಯದರ್ಶಿ ಬ್ಲಾಂಕ್ವಿ ಟೈಕ್ಸೇರಾ ಹಾಗೂ ಕೇಂದ್ರ ಸಮಿತಿಯ ಪರ್ಯಾಯ ಸದಸ್ಯ ಡೊಮಿಂಗೋಸ್ ಲೋಪ್ಸ್ ಈ ನಿಯೋಗದಲ್ಲಿದ್ದರು.

ಪೋರ್ಚುಗಲ್ ಪಕ್ಷದ 12ನೇ ಮಹಾಧಿವೇಶನಕ್ಕೆ ಸಿ.ಪಿ.ಐ.(ಎಂ) ನಿಯೋಗವನ್ನು ಆಹ್ವಾನಿಸಲಾಗಿತ್ತು. ಆದರೆ ಅದು ಸಿ.ಪಿ.ಐ.(ಎಂ)ನ 13ನೇ ಮಹಾಧಿವೇಶನದ ಸ್ವಲ್ಪ ಮೊದಲು ನಡೆದದ್ದರಿಂದ ಭಾಗವಹಿಸಿರಲಿಲ್ಲ. ಆದರೆ ಸಂದೇಶ ಕಳುಹಿಸಲಾಗಿತ್ತು. ಆ ಪಕ್ಷವೂ ನಮ್ಮ 13ನೇ ಮಹಾಧಿವೇಶನಕ್ಕೆ ಸಂದೇಶ ಕಳುಹಿಸಿತ್ತು.

ಪೋರ್ಚುಗಾಲ್ ಕಮ್ಯೂನಿಸ್ಟ್ ಪಕ್ಷ 2ಲಕ್ಷ ಸದಸ್ಯತ್ವ ಹೊಂದಿದ್ದು ಆ ದೇಶದ ರಾಜಕೀಯದಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಅದು 31 ಸಂಸತ್ ಸದಸ್ಯರನ್ನು ಹೊಂದಿದೆ. ಯುರೋಪಿಯನ್ ಸಂಸತ್ತಿನ 24 ಪೋರ್ಚುಗೀಸ್ ಎಂ.ಪಿ.ಗಳಲ್ಲಿ ಮೂವರು ಕಮ್ಯೂನಿಸ್ಟರು. ದೇಶದ ಮೂರನೇ ಒಂದು ಭಾಗ ನಗರಸಭೆಗಳು ಈ ಪಕ್ಷದ ಹತೋಟಿಯಲ್ಲಿವೆ. ನಮ್ಮೆರಡು ಪಕ್ಷಗಳ ನಡುವೆ ಸಂಬಂಧಗಳನ್ನು ಇನ್ನಷ್ಟು ಬಲಪಡಿಸುವ ಆಶಯವನ್ನು ಎರಡೂ ಪಕ್ಷಗಳು ವ್ಯಕ್ತಪಡಿಸಿವೆ.

ಕಾಮ್ರೇಡ್ ಪೃಥ್ವೀಸಿಂಗ್‌ಆಝಾದ್

ಮಾರ್ಚ್ 5 ರಂದು ಹರ್‍ಯಾಣಾದ ಹಿಸ್ಸಾರ್‌ನಲ್ಲಿ ನಿಧನರಾದ ಕಾ॥ ಪೃಥ್ವೀಸಿಂಗ್ ಆಝಾದ್‌ರಿಗೆ ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಶ್ರದ್ಧಾಂಜಲಿ ಅರ್ಪಿಸುತ್ತಾ ಕಮ್ಯೂನಿಸ್ಟ್ ಆಂದೋಲನದ ಹಿತಚಿಂತಕರು ಮತ್ತು ಇತರ ಪ್ರಜಾಪ್ರಭುತ್ವವಾದಿ ಜನ ಇವರನ್ನು ಸದಾ ಸ್ಮರಿಸಿಕೊಳ್ಳುತ್ತದೆ ಎಂದಿದೆ.

ಪೃಥ್ವೀಸಿಂಗ್ ಆಝಾದ್ ಈ ಶತಮಾನದ ಆದಿಯಲ್ಲಿ ಜೀವನೋಪಾಯಕ್ಕಾಗಿ ಅಮೆರಿಕಾ ಹೋದರು. ಅಲ್ಲಿ ಗದರ್ ಪಾರ್ಟಿಯ ಸಂಸ್ಥಾಪಕ ಸದಸ್ಯರಾಗಿದ್ದರು. ದೀರ್ಘಕಾಲ ಜೈಲಿನಲ್ಲಿ ತಲೆಮರೆಸಿಕೊಂಡಿದ್ದ ಇವರು ತಮ್ಮ ಸ್ವಂತ ಅನುಭವಗಳಿಂದ ಕಮ್ಯೂನಿಸ್ಟ್ ಆಂದೋಲನದೊಳಗೆ ಬಂದರು. ಅಂಡಮಾನ್ ಜೈಲಿನಿಂದ ಪಂಜಾಬಿನ ಒಂದು ಜೈಲಿಗೆ ವರ್ಗಾಯಿಸುವಾಗ ಅವರು ಗುರುಮುಖ್‌ಸಿಂಗ್ ಜತೆಗೆ ಜೈಲಿನಿಂದ ಪರಾರಿಯಾಗಿ ತಲೆಮರೆಸಿಕೊಂಡರು. ಆ ನಡುವೆ ಮಾಸ್ಕೋ ಹೋಗಿ ಬಂದರು. ಕಾನೂನು ಬದ್ಧತೆ ಬಂದ ಮೇಲೆ ಅವರು ಪಂಜಾಬಿನಲ್ಲಿ ಕಿಸಾನ್ ಸಭಾದಲ್ಲಿ ಕೆಲಸ ಮಾಡಲಾರಂಭಿಸಿದರು.

KRNW/BGS-312 MAG(2) PRB DECR 319-78/79

ಪುಟ 1ರಿಂದ

ಪಂಜಾಬ್ ಸಮಸ್ಯೆಗೆ ಪರಿಹಾರ

...ತ್ತುಗಳಿಗೆ ಕರೆದಲು ಎಷ್ಟು ಹಣ ಸುರಿಯಲಾಗಿದೆ ಎಂದು ಪ್ರಧಾನಿಗಳು ಎಂದಾದರೂ ವಿಚಾರಿಸಿದ್ದಾರೆಯೇ?

ಅದೇ ರೀತಿ ದೆಹಲಿ ದಂಗೆಗಳ ಬಗ್ಗೆ ಪ್ರಧಾನ ಮಂತ್ರಿಗಳು ಹೇಳಿಕೊಂಡಿರುವುದು ಅರ್ಥವಾಗುತ್ತಿಲ್ಲ. 2300 ಅಪಾದಿತರ ವಿರುದ್ಧ 25 ಕೇಸುಗಳನ್ನು ದಾಖಲು ಮಾಡಲಾಗಿದೆ. ಇನ್ನೊಂದರ ವಿಚಾರಣೆ ಮುಗಿದಿದೆ. 10 ಜನರಿಗೆ ಶಿಕ್ಷೆಯಾಗಿದೆ. ಆರು ಜೀವಾವಧಿ ಶಿಕ್ಷೆಗೊಳಗಾಗಿವೆ ಎಂದು ಪ್ರಧಾನಮಂತ್ರಿ ತಿಳಿಸಿದ್ದಾರೆ. ಈ ಸಂಗತಿಗಳನ್ನು ಮೊದಲೇ ತಿಳಿಸಲು ಸರ್ಕಾರಕ್ಕೆ ಏಕೆ ಸಾಧ್ಯವಾಗಿರಲಿಲ್ಲ? ಮಿಶ್ರಾ ಆಯೋಗದ ವರದಿಯ ಬಗ್ಗೆ ನಂತರ ಇಬ್ಬರು ಕಾಂಗ್ರೆಸ್ಸಿಗರ ವಿಚಾರಣೆಯ ಶಿಫಾರಸು ಮಾಡಿದ ಜೈನ್-ಬ್ಯಾನರ್ಜಿ ಸಮಿತಿಯ ಬಗ್ಗೆ ಪ್ರಸ್ತಾಪವೇ ಇಲ್ಲವೇಕೆ? ಈ ಶಿಫಾರಸಿನ ಬಗ್ಗೆ ಒಂದು ವರ್ಷವಾದರೂ ಏನೂ ಮಾಡಿಲ್ಲವೇಕೆ?

ಪಂಜಾಬ್ ಒಪ್ಪಂದದ ಬಗ್ಗೆಯೂ ಪ್ರಧಾನಿಗಳ ಘೋಷಣೆಯಲ್ಲಿ ಪ್ರಸ್ತಾಪವೇ ಇಲ್ಲ. ಈ ಒಪ್ಪಂದ ಪಂಜಾಬಿನಲ್ಲಿ ಶಾಂತಿ ಸ್ಥಾಪಿಸುವ ಅವರ ಒಂದು ಪ್ರಯತ್ನವಾಗಿತ್ತು. ಸಮಯಬದ್ಧ ಅಂಶಗಳನ್ನು ಹೊಂದಿದ್ದ ಈ ಒಪ್ಪಂದವನ್ನು ಇಡೀ ದೇಶ ಸ್ವಾಗತಿಸಿತ್ತು. ಇದು ತೀವ್ರಗಾಮಿಗಳನ್ನು ದೂರಕ್ಕೆ ತಳ್ಳಿತ್ತು. ಚುನಾವಣೆಗಳಲ್ಲಿ ಇದಕ್ಕೆ ಪಂಜಾಬಿನ ಜನತೆ ಅಗಾಧ ಬೆಂಬಲ ನೀಡಿತ್ತು. ಇಂತಹ ಒಪ್ಪಂದ ಈಗ ಜೀವಂತವಾಗಿದೆಯೇ, ಸತ್ತಿದೆಯೇ ಎಂಬ ಪ್ರಶ್ನೆಗೆ ಉತ್ತರ ಬೇಕಾಗಿತ್ತು. ಈ ಉತ್ತರವಿಲ್ಲದೆ ತೀವ್ರ ಗಾಮಿತ್ವ ಸಡಿಲಗೊಂಡು ಬರುತ್ತದೆ, ಪಂಜಾಬಿನಲ್ಲಿ ಶಾಂತಿ ನೆಲೆಸುತ್ತದೆ ಎಂದು ನಿರೀಕ್ಷಿಸುವುದು ಕೇವಲ ಕನಸು.

ಪಂಜಾಬಿನ ಪ್ರಶ್ನೆಯನ್ನು ಮುಂದಿನ ಚುನಾವಣೆಯಲ್ಲಿ ಬಳಸಿ ಕೊಂಡು ತೀವ್ರ ಹಾನಿಯುಂಟುಮಾಡಬೇಕೇ ಅಥವಾ ಇಂತಹ ಸಂಕುಚಿತ ವಿಚಾರ ಬಿಟ್ಟು ದೇಶದ ಐಕ್ಯತೆಯ ವಿಶಾಲ ಹಿತಾಸಕ್ತಿ ಗಮನಿಸಬೇಕೇ ಎಂಬುದನ್ನೀಗ ಸರ್ಕಾರ ತಾನೇ ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ಪಂಜಾಬಿನ ಸಮಸ್ಯೆ ಪಂಜಾಬಿಗೇ ಸೀಮಿತವಾಗಿಲ್ಲ. ಇಡೀ ದೇಶವನ್ನು ತಟ್ಟಲಾರಂಭಿಸಿದೆ. ಎಲ್ಲೆಡೆ ಕೋಮುವಾದಿ, ಮೂಲಭೂತವಾದಿ ಶಕ್ತಿಗಳಿಗೆ ಉತ್ತೇಜನ ನೀಡಿದೆ. ಜಮ್ಮು-ಕಾಶ್ಮೀರ ಅದರ ಪ್ರಭಾವ ಹರಡಿದೆ. ಆದ್ದರಿಂದ ರಾಜಕೀಯ ಪರಿಹಾರ ಕಂಡು ಹಿಡಿಯುವಲ್ಲಿ ವಿಳಂಬವಾದರೆ ಅದರ ಪರಿಣಾಮ ಗಂಭೀರವಾಗಬಹುದು. ಆದರೆ ಸರ್ಕಾರಕ್ಕೆ ಈ ತುರ್ತಿನ ಬಗ್ಗೆ ಪರಿವೆಯಿದ್ದಂತಿಲ್ಲ. ಐದು ತಿಂಗಳ ಹಿಂದೆ ನೇಮಿಸಿದ ಮಂತ್ರಿಮಂಡಲದ ಉಪಸಮಿತಿ ಇನ್ನೂ ಈ ಬಗ್ಗೆ ಯಾವುದೇ ರಾಜಕೀಯ ಪಕ್ಷದೊಡನೆ ಪರಾಮರ್ಶೆ ನಡೆಸಿಲ್ಲ. ಕೇವಲ ಹೇಳಿಕೆಗಳು, ಘೋಷಣೆಗಳಿಂದ, ಕೆಲವು ಕಿರಿಕಿರಿಗಳನ್ನು ನಿವಾರಿಸುವುದರಿಂದಷ್ಟೇ ಸಮಸ್ಯೆ ಪರಿಹಾರವಾಗುವುದಿಲ್ಲ. ಎದೆಗಾರಿಕೆಯಿಂದ ಕೂಡಿದ ಒಂದು ನಿರ್ಣಯವನ್ನು ಸರ್ಕಾರ ಕೈಗೊಳ್ಳಬೇಕು.

ಹೆಚ್ಚಿನ ವಿರೋಧ ಪಕ್ಷಗಳು ಕೂಡಾ ಈ ಸಮಸ್ಯೆಯ ಪರಿಹಾರದ ಬಗ್ಗೆ ಇನ್ನೂ ಅಗತ್ಯವಿರುವಷ್ಟು ಆಸಕ್ತಿ ತಳೆಯುತ್ತಿಲ್ಲ ಎಂಬುದು ಖೇದದ ಸಂಗತಿ. ಇದು ಕೇವಲ ರಾಜೀವ್‌ಗಾಂಧಿ ಅಥವಾ ಕಾಂಗ್ರೆಸ್(ಐ)ನ ಸಮಸ್ಯೆಯಲ್ಲ. ಇಡೀ ದೇಶದ ರಾಜಕೀಯ ವ್ಯವಸ್ಥೆಯನ್ನು ತಟ್ಟುವ ರಾಷ್ಟ್ರೀಯ ಸಮಸ್ಯೆಯೆಂದು ಪರಿಗಣಿಸಿ ಶಾಂತಿ ಸ್ಥಾಪಿಸುವಲ್ಲಿ ಅವು ತಮ್ಮ ಕೊಡುಗೆ ನೀಡಬೇಕು.

ಪಂಜಾಬ್ ಬಹಳಷ್ಟು ನೊಂದಿದೆ. ಅಲ್ಲಿ ಈಗ ಪ್ರತಿಯೊಬ್ಬರಿಗೂ ಶಾಂತಿ ಬೇಕು.

('ಪೀಪಲ್ಸ್ ಡೆಮಾಕ್ರಸಿ'ಯಿಂದ)

ನಾಗರಿಕ ಸೌಲಭ್ಯಗಳಿಗಾಗಿ ಹೋರಾಟ

ಹೊಸಪೇಟೆ ತಾಲ್ಲೂಕಿನ ಮಲಪನಗುಡಿ ಮಂಡಲ ಪಂಚಾಯ್ತ್ ಪ್ರದೇಶದಲ್ಲಿ ನಿವೇಶನ ರಹಿತರಿಗೆ ನಿವೇಶನ, ಮಹಿಳೆಯರಿಗೆ ಶೌಚಾಲಯ, ಕುಡಿಯುವ ನೀರು ಮುಂತಾದ ನಾಗರಿಕ ಸೌಲಭ್ಯಗಳನ್ನು ಒದಗಿಸಬೇಕೆಂದು ಮಂಡಲ ಪ್ರಧಾನರಿಗೆ ಡಿ.ವೈ. ಎಫ್.ಐ. ಅನಂತಶಮನಗುಡಿ ಘಟಕದ ನೇತೃತ್ವದಲ್ಲಿ ಹಲವಾರು ಮನವಿ ಪತ್ರಗಳನ್ನು ನೀಡಲಾಗಿತ್ತು. ಆದರೂ ಈ ಬಗ್ಗೆ ಗಮನ ಹರಿಸದೇ ಇದ್ದಾಗ ಮಾರ್ಚ್ 2ರಿಂದ ಇದನ್ನು ಪ್ರತಿಭಟಿಸಿ ಸರದಿ ಉಪವಾಸ ಸತ್ಯಾಗ್ರಹ ಆರಂಭವಾಯಿತು. ಇದನ್ನು 7ದಿನಗಳವರೆಗೆ ನಿರ್ಲಕ್ಷಿಸಿದಾಗ ನೂರಾರು ರೈತರು, ಕಾರ್ಮಿಕರು, ಯುವಕರು, ಮಹಿಳೆಯರು ಮೆರವಣಿಗೆ ಹೋಗಿ ಹೊಸಪೇಟೆಯಲ್ಲಿ ಸಭೆ ಸೇರಿದ್ದ ತಾಲ್ಲೂಕು ಪಂಚಾಯ್ತಿಗೆ ಕೊನೆಯ ಮನವಿ ಪತ್ರ ಸಲ್ಲಿಸಲಾಯಿತು. ಮನವಿ ಪತ್ರ ಸ್ವೀಕರಿಸಿದ ಶಾಸಕ ಭೂಪತಿಯವರು ಕೂಡಲೇ ಗಮನಹರಿಸುವುದಾಗಿ ಭರವಸೆ ನೀಡಿದರು. ಅಲ್ಲಿ ನಡೆದ ರ್‍ಯಾಲಿಯನ್ನುದ್ದೇಶಿಸಿ ಹೊಸಪೇಟೆ ತಾಲ್ಲೂಕು ಸಂಘದ ಮುಖಂಡ ಕಾ॥ ಪಾಂಡುರಂಗರವರು ಮಾತನಾಡಿ ಕೆಲವು ಪಟ್ಟಭದ್ರ ರಾಜಕೀಯ ಹಿತಾಸಕ್ತಿಗಳು ಹೋರಾಟದ ಮುಂಚೂಣಿಯಲ್ಲಿರುವ ನಾಯಕರ ಮೇಲೆ ಹಲ್ಲೆ ನಡೆಸುವ ಬೆದರಿಕೆ ಹಾಕಿರುವುದನ್ನು ಖಂಡಿಸುತ್ತಾ ದುಡಿಯುವ ಜನ ಇಂತಹ ಬೆದರಿಕೆಗಳಿಗೆ ಎಂದೂ ಜಗ್ಗುವುದಿಲ್ಲ ಎಂದರು. ಕೂಡಲೇ ಈ ಸಮಸ್ಯೆಯತ್ತ ಗಮನ ಹರಿಸದಿದ್ದಲ್ಲಿ ಮತ್ತೆ ಸರದಿ ಉಪವಾಸ ಆರಂಭಿಸುವುದಾಗಿ ಕಾ॥ ಪಾಂಡುರಂಗ ಹೇಳಿದರು. ಕಾ॥ ಭರಮಪ್ಪ, ಕಾ॥ ನೀಲಕಂಠ, ಕಾ॥ ಷಣ್ಮುಖಪ್ಪ ಮಾತನಾಡಿ ಸಂಬಂಧಪಟ್ಟ ಅಧಿಕಾರಿಗಳು, ಜಿಲ್ಲಾಪರಿಷತ್ ಅಧ್ಯಕ್ಷರು, ಮಂಡಲಪ್ರಧಾನರು ಕೂಡಲೇ ಮಧ್ಯಸ್ಥಿಕೆ ವಹಿಸಬೇಕೆಂದು ಒತ್ತಾಯಿಸಿದರು.

ಬೃಹತ್ ಬಹಿರಂಗ ಸಭೆ

ಕಾಂಗ್ರೆಸ್ ದೇಶದಲ್ಲಿನ ಕೋಮುವಾದಿ, ಜಾತಿವಾದಿ, ವಿಚ್ಛಿದ್ರಕಾರಿ ಶಕ್ತಿಗಳೊಂದಿಗೆ ಅನುಸರಿಸುತ್ತಿರುವ ಸ್ವಾರ್ಥ ರಾಜಕೀಯ ನೀತಿಯ ಫಲವಾಗಿ ಪಂಜಾಬ್ ಡಾರ್ಜಿಲಿಂಗ್ ಮುಂತಾದೆಡೆಗಳಲ್ಲಿ ದೇಶದ ಐಕ್ಯತೆ-ಸಮಗ್ರತೆ ವಿರೋಧಿ ಚಳುವಳಿ ಉದ್ಭವವಾಗಲು ಕಾರಣವಾಗಿದೆ ಎಂದು ಕಾ॥ ಕನಕ ಮುಖರ್ಜಿಯವರು ಆರೋಪಿಸಿದರು. ಅವರು ಆಂಧ್ರದ ವಿವಿಧ ಮೂಲೆ ಮೂಲೆಗಳಿಂದ ಬಂದ 25 ಸಾವಿರ ಜನರ ಬೃಹತ್ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ರಾಜೀವ್ ಸರ್ಕಾರ ಇತ್ತೀಚೆಗೆ ಮಹಿಳೆಯರ ಕುರಿತು ಯೋಜನೆಗಳನ್ನು ರೂಪಿಸಿದರೂ ಮುಂದಿನ ಚುನಾವಣೆಗಳನ್ನು ಗಮನದಲ್ಲಿಟ್ಟು ಸಿದ್ಧಗೊಳಿಸಿರುವ ಈ ಯೋಜನೆ ಮಹಿಳೆಯ ಮೂಲಭೂತ ಸಮಸ್ಯೆಗೆ ಪರಿಹಾರ ಒದಗಿಸುವಲ್ಲಿ ವಿಫಲಗೊಂಡಿದೆಯಲ್ಲದೆ ಅವರನ್ನು ವಂಚಿಸುವ ಕುತಂತ್ರವೆಂದು ಅವರು ಖಂಡಿಸಿದರು. ರಾಜೀವ್ ಆಡಳಿತದಲ್ಲಿ 'ಸತಿ', ಮುಸ್ಲಿಂ ಮಹಿಳಾ ಕಾಯ್ದೆ ಮುಂತಾದ ಮಹಿಳಾ ವಿರೋಧಿ ಶಾಸನಗಳ ಮೂಲಕ ಮಹಿಳೆಯರಿಗೆ ದ್ರೋಹ ಬಗೆದ ಸರ್ಕಾರದ ನೀತಿಯನ್ನು ವಿವರಿಸಿ ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರಗಳು ಹೆಚ್ಚಿವೆ ಎಂದು ಆರೋಪಿಸಿದರು.

ಉದ್ಯೋಗದಲ್ಲಿ ಮಹಿಳೆ 14% ಮಾತ್ರ ಸ್ಥಾನಗಳಿಸಿದ್ದು, ಭೂಸುಧಾರಣೆ, ಆಸ್ತಿಯ ಹಕ್ಕು ಗ್ರಾಮೀಣಾಭಿವೃದ್ಧಿ, ಎಲ್ಲ ಕ್ಷೇತ್ರಗಳಲ್ಲೂ ಸ್ಥಾನಮಾನ ದೊರಕುವಂತಹ ಸಮಾನ ಬೇಡಿಕೆ ಆಧಾರದಲ್ಲಿ ವಿವಿಧ ಮಹಿಳಾ ಸಂಘಟನೆಯೊಂದಿಗೆ ಅಖಿಲ ಭಾರತ ಜಂಟಿ ಆಂದೋಲನವನ್ನು ರೂಪಿಸಲು ಪ್ರಯತ್ನಿಸುತ್ತಿರುವುದಾಗಿ ಅವರು ಹೇಳಿದರು.

ಮಹಿಳಾ ಸಂಘದ ಕಾರ್ಯದರ್ಶಿ ಕಾ॥ ಮೊಟೂರು ಉದಯಂ, ಉಪಾಧ್ಯಕ್ಷೆ ಕಾ॥ ಮಾನಿಕೊಂಡ ಸೂರ್ಯವತಿಯವರು ಸಭೆಯಲ್ಲಿ ಮಾತನಾಡಿದರು.

ಪ್ರಸಿದ್ಧ ನಟಿ ಶಾರದರವರು ಬೃಹತ್ ರ್‍ಯಾಲಿ ಸಭೆಯಿಂದ ಸ್ಫೂರ್ತಿಗೊಂಡು ಮಹಿಳಾ ಸಂಘಕ್ಕೆ 25 ಸಾವಿರ ರೂ.ಗಳನ್ನು ಸಂಘಟನೆಯ ಬೆಳವಣಿಗೆಗಾಗಿ ಕಾಣಿಕೆಯಾಗಿ ಅರ್ಪಿಸಿದರು. ಬಹಿರಂಗ ಸಭೆಯ ನಂತರ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಟಿ ಶಾರದ ಉದ್ಘಾಟಿಸಿದರು.

ಪ್ಲಾಯವುಡ್ ಕಾರ್ಮಿಕರ ಧರಣಿ

ಕರ್ನಾಟಕದಲ್ಲಿ ಇಂಡಿಯನ್ ಪ್ಲಾಯ್‌ವುಡ್ ಕಂಪನಿಯ ಪ್ರಮುಖ ಶಾಖೆಗಳಾದ ದಾಂಡೇಲಿ, ಧಾರವಾಡ, ಹಂಗರಕಟ್ಟೆ, ಪಟ್ಟಣಗಳ ಕಾರ್ಖಾನೆಗಳ ಎದುರು ಇದೇ ತಾರೀಖು 1-3-1989ರಿಂದ ಧರಣಿ, ಕಾರ್ಯಕ್ರಮ ನಡೆಯುತ್ತಿದೆ.

1987-88ನೇ ಸಾಲಿನ ಬೋನಸ್ ಬೇಡಿಕೆ ಬಗ್ಗೆ ಇಂಡಿಯನ್ ಪ್ಲಾಯ್‌ವುಡ್ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿ ಹಾಗೂ ಆಡಳಿತ ವರ್ಗದ ಮಧ್ಯೆ ನಡೆದ ಚರ್ಚೆ ಒಪ್ಪಂದಕ್ಕೆ ಬರದ್ದರಿಂದ ಈ ಕಾರ್ಯಕ್ರಮ ಪ್ರಾರಂಭಿಸಲಾಗಿದೆ.

ಠಕ್ಕರ್ ಆಯೋಗದ ವರದಿಯ ಮೇಲೆ

ಪುಟ 1ರಿಂದ

...ವಾಗಿ ಠಕ್ಕರ್ ಆಯೋಗದ ವರದಿ ಅಂದಿನ ರಾಷ್ಟ್ರಪತಿಗಳಿಂದಲೇ ಮುಚ್ಚಿಡಲಾಯಿತು. ಈ ವರದಿಯ ಒಂದು ಪ್ರತಿಗಾಗಿ ಅವರು ಮತ್ತೆ ಮತ್ತೆ ವಿನಂತಿಸಿದರು, ಪತ್ರಗಳನ್ನು ಬರೆದರು ಅವರಿಗೆ ಆ ಮಾಹಿತಿ ಲಭ್ಯವಾಗಲಿಲ್ಲ. ನಮ್ಮ ಸಂವಿಧಾನ ಈ ಬಗ್ಗೆ ಸ್ಪಷ್ಟವಾಗಿ ನಮೂದಿಸಿದ ರಾಷ್ಟ್ರಪತಿಯ ಹಕ್ಕುಗಳನ್ನು ಉಲ್ಲಂಘಿಸಲಾಯಿತು. ಈ ವಿವಾದ ಪ್ರಕೋಪಕ್ಕೆ ಹೋಗಿ ರಾಷ್ಟ್ರಪತಿ ಹಾಗೂ ಪ್ರಧಾನಿ ನಡುವೆ ಒಂದು ಪತ್ರ ಯುದ್ಧವೇ ನಡೆಯಿತು ಎಂಬುದನ್ನು ಕೊನೆಗೆ ಪ್ರಧಾನಿ ಹಾಗೂ ರಾಷ್ಟ್ರಪತಿ ಇಬ್ಬರೂ ಸಂವಿಧಾನ ವಿರೋಧಿ ಕ್ರಮಗಳನ್ನು ಕೈಗೊಳ್ಳಲು ಮುಂದಾದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಪ್ರಸಂಗದಲ್ಲಿಯೂ ರಾಜಕೀಯ ಪಕ್ಷಗಳ ಮೂಲಕ, ಪತ್ರಿಕೆಗಳ ಮೂಲಕ, ಸಂಸತ್ತಿನಲ್ಲಿ ಹಾಗೂ ಹೊರಗಡೆ ವ್ಯಕ್ತವಾದ ಜನಾಭಿಪ್ರಾಯದ ಹಿನ್ನೆಲೆಯಲ್ಲಿ ರಾಷ್ಟ್ರಪತಿಗೆ ಈ ವರದಿಯ ಮಾಹಿತಿಯನ್ನು ಒಪ್ಪಿಸಬೇಕಾಯಿತು. ಮಂತ್ರಿಮಂಡಲದ ಮುಂದೆಯೂ ಈ ವರದಿ ಮಂಡಿತವಾದ ಬಗ್ಗೆ ಎಲ್ಲಿಯೂ ವರದಿಯಾಗಿಲ್ಲ, ಹೀಗಾಗಿ ಮಂತ್ರಿಮಂಡಲದಲ್ಲಿಯೂ ಯಾರಿಗೆ ಗೊತ್ತಿದೆ ಎಂಬುದೇ ಒಂದು ಯಕ್ಷ ಪ್ರಶ್ನೆಯಾಗಿದೆ.

ಆದರೆ ಈ ವರದಿಯನ್ನು ಜನರ ಮುಂದಿಡುವುದನ್ನು ತಪ್ಪಿಸುವ ಎಲ್ಲ ಪ್ರಯತ್ನಗಳೂ ನಿರಂತರವಾಗಿ ಮುಂದುವರಿದವು. ಕೇಂದ್ರ ಸರ್ಕಾರ ನೇಮಿಸಿದ ಯಾವುದೇ ಆಯೋಗದ ವರದಿ ಸಂಸತ್ತಿನ ಮುಂದೆ ಮಂಡಿಸಲ್ಪಡಬೇಕು ಎನ್ನುವ ನಿಯಮವನ್ನು ತಪ್ಪಿಸಿಕೊಳ್ಳಲು, ಸಂಸತ್ತಿನ ಸಾರ್ವಭೌಮ ಹಕ್ಕನ್ನು ಉಲ್ಲಂಘಿಸಲು ಇದಕ್ಕಾಗಿಯೇ ಒಂದು ಕಾನೂನನ್ನು ಸಂಸತ್ತಿನ ಮುಂದಿಡಲಾಯಿತು. ಕಾಂಗ್ರೆಸ್ ಪ್ರಧಾನವಾದ ಸಂಸತ್ತು ತನ್ನ ಸಾರ್ವಭೌಮ ಹಕ್ಕನ್ನು ಆ ಮೂಲಕ ಪ್ರಜಾಪ್ರಭುತ್ವದ ಒಂದು ಮೂಲ ಹಕ್ಕನ್ನು ಸರ್ವಾಧಿಕಾರ ಶಕ್ತಿಗಳ ಪದತಲಕ್ಕೆ ನಿವೇದಿಸಿತು. ಹೈಕೋರ್ಟ್ ಒಂದರ ಮುಂದೆ ಬಂದ ಅಪೀಲೊಂದರಲ್ಲಿ ಠಕ್ಕರ್ ಆಯೋಗದ ವರದಿಯ ಅವಶ್ಯಕತೆ ಬಂದಾಗ ನ್ಯಾಯಾಂಗಕ್ಕೂ ಈ ವರದಿಯ ಪರಿಶೀಲನೆಯ ಹಕ್ಕನ್ನು ವಂಚಿಸಲು ಈ ಕಾನೂನು ಬಂದಿತ್ತೆಂಬುದು ಗಮನಾರ್ಹ.

ಹೀಗೆ ರಾಷ್ಟ್ರಪತಿ, ಸಂಸತ್ತು, ನ್ಯಾಯಾಂಗ ಮಾತ್ರವೇ ಅಲ್ಲ ಮಂತ್ರಿಮಂಡಲವನ್ನು ವಂಚಿಸಲಾಗಿತ್ತೆಂಬುದೇ ಸರ್ವಾಧಿಕಾರಿ ಪ್ರವೃತ್ತಿಯ ತೀವ್ರತೆಯನ್ನು ತೋರಿಸುತ್ತದೆ. ಇತ್ತೀಚೆಗೆ ಧವನ್‌ರನ್ನು ಮತ್ತೆ ಸೂಕ್ಷ್ಮ ವ್ಯವಹಾರಗಳ ಪ್ರಧಾನ ಮಂತ್ರಿಗಳ ಕಾರ್ಯಾಲಯಕ್ಕೆ ತೆಗೆದುಕೊಂಡ ನಂತರ ಹಾಗೂ "ಇಂಡಿಯನ್ ಎಕ್ಸ್‌ಪ್ರೆಸ್"ನಲ್ಲಿ ಠಕ್ಕರ್ ವರದಿಯ ಕೆಲ ತುಣುಕುಗಳ ಪ್ರಕಟವಾದ ನಂತರ ಕೂಡಾ ಸಂಸತ್ತಿನಲ್ಲಿ ಅದನ್ನು ಮಂಡಿಸಲು, ಚರ್ಚಿಸಲು ನಿರಾಕರಿಸಲಾಯಿತು. ಮಾತ್ರವಲ್ಲ, ಸಂಸತ್ತಿನಲ್ಲಿ ವಿರೋಧ ಪಕ್ಷವೇ ಭಾಗವಹಿಸದಿದ್ದರೂ ಸರಿ ಠಕ್ಕರ್ ವರದಿಯನ್ನು ಮುಚ್ಚಿಡುವುದನ್ನೇ ನಾವು ಆಯ್ಕೆ ಮಾಡಿಕೊಳ್ಳುತ್ತೇವೆ ಎಂದು ಸರ್ಕಾರ ಘೋಷಿಸಿದಂತಾಯಿತು. ಸಂಸತ್ತಿನಲ್ಲಿ ವರದಿಯ ಬಗ್ಗೆ ಕೇಳುವುದೇ ತಪ್ಪು, ಎಂಬ ನಿಲುವನ್ನು ಸರ್ಕಾರ ತಳೆಯಿತು. ಪ್ರತಿಭಟನೆ ಮಾಡಿದ ಸಂಸತ್ ಸದಸ್ಯರು ಮಾತ್ರವಲ್ಲ, ಎಲ್ಲ ವಿರೋಧ ಪಕ್ಷದ ಸದಸ್ಯರನ್ನು ಸಸ್ಪೆಂಡ್ ಮಾಡಿದ ಸರ್ಕಾರದ ಕ್ರಮ ಕಾಂಗ್ರೆಸ್‌ನ ಸರ್ವಾಧಿಕಾರಿ ಮುಖವನ್ನು ಬಯಲಿಗೆಳೆದಿದೆ.

ಈ ಕ್ರಮಕ್ಕೆ ರಾಷ್ಟ್ರಾದ್ಯಂತ, ಕೇರಳ ವಿಧಾನ ಸಭೆಯಲ್ಲಿ ಮೊದಲಾಗಿ ಎಲ್ಲ ವಿಧಾನ ಸಭೆಗಳಲ್ಲಿ ಪ್ರತಿಭಟನೆ ವ್ಯಕ್ತವಾಗಿದ್ದು ರಾಷ್ಟ್ರದಲ್ಲಿ ಒಟ್ಟುಗೂಡುತ್ತಿರುವ ಸರ್ವಾಧಿಕಾರಿ ವಿರೋಧಿ ಶಕ್ತಿಗಳ ಚೈತನ್ಯವನ್ನು ಪ್ರತಿಬಿಂಬಿಸುತ್ತದೆ. ಸಂಸತ್ತಿನಿಂದ ಬಹಿಷ್ಕೃತವಾದ ವಿರೋಧ ಪಕ್ಷಗಳು ದೇಶದಲ್ಲೆಲ್ಲಾ, ಸಂಸತ್ತಿನ ಹಕ್ಕಿನ ಬಗ್ಗೆ ಚಳುವಳಿ ಹೂಡಲು ಸಿದ್ಧವಾದ ಪ್ರಸಂಗ ಮತ್ತೆ ಸರ್ವಾಧಿಕಾರಿ ಶಕ್ತಿಗಳು ಮಣಿಯುವಂತೆ ಮಾಡಿದೆ. ಪ್ರಜಾಪ್ರಭುತ್ವ ಶಕ್ತಿಗಳಿಗೆ ಒಂದು ಮಹತ್ತರ ವಿಜಯವನ್ನು ದೊರಕಿಸಿದೆ. ಈ ವಿಜಯದಲ್ಲಿ ಠಕ್ಕರ್ ವರದಿಯನ್ನು ಮಂಡಿಸಲು ನಿರಾಕರಿಸಿದ್ದರ ಹಿನ್ನೆಲೆಯಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಕೋಪದ ಬಗ್ಗೆ ಹೆದರಿಕೆಯೂ ಸೇರಿದೆ ಎಂಬುದು ಈ ಪ್ರಸಂಗದ ಪ್ರಾಮುಖ್ಯತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ.

ಸರ್ವಾಧಿಕಾರಿ ಶಕ್ತಿ ದೇಶದ ಪ್ರಜಾಸತ್ತೆಯನ್ನು ಅಂಗುಲಂಗುಲವಾಗಿ ಕಬಳಿಸಲು ನಡೆಸಿರುವ ಪ್ರಯತ್ನದ ವಿರುದ್ಧ ನಿಡುಗಾಲವು ಕಣ್ಣು ತೆರೆದು ಎಚ್ಚರದಿಂದ ಕಾವಲಿರಬೇಕಾಗಿದೆ ಎಂಬುದನ್ನು ಈ ಇಡೀ ಪ್ರಸಂಗ ತೆರೆದು ತೋರಿಸಿದೆ. ಪ್ರಜಾಪ್ರಭುತ್ವ ಶಕ್ತಿಗಳು ಹೆಚ್ಚು ಹೆಚ್ಚು ಐಕ್ಯತೆಯನ್ನು ರೂಪಿಸಿಕೊಳ್ಳಬೇಕು. ಜನರನ್ನು ತಮ್ಮ ಹಿಂದೆ ಅಣಿನೆರೆಸಬೇಕು ಎಂಬುದು ಕೂಡಾ ಈ ಕ್ರಮಗಳಿಂದ ಸಾಬೀತಾಗಿದೆ.

"ಇದು ಸರ್ವಾಧಿಕಾರ"

ವರದಿಯನ್ನು ಮುಚ್ಚಿಡುವ ನಿಟ್ಟಿನಲ್ಲಿ ರಾಜೀವ್‌ಗಾಂಧಿ ಸರ್ಕಾರ ವಿಶೇಷ ಕಾನೂನೊಂದನ್ನು ಜಾರಿಗೆ ತರುವ ಮಟ್ಟಕ್ಕೆ ಹೋಯಿತು. ಇದು ಸರ್ಕಾರ ಏನೋ ಗುಟ್ಟನ್ನಿಟ್ಟುಕೊಂಡಿದೆ ಎಂಬ ಭಾವನೆ ತರಿಸಿದೆ.

-ದಿ ಟೆಲಿಗ್ರಾಫ್

ರಾಜಕೀಯ ವ್ಯವಸ್ಥೆಗೆ ಕಳೆದ ವಾರ ಮೇಲಿಂದ ಮೇಲೆ ಗುದ್ದು ಬಿದ್ದವು. ಸರ್ಕಾರಿ ಪ್ರಮುಖರು ಸದನದಲ್ಲಿಲ್ಲದವರನ್ನು ಸೇರಿಸಿ ಎಲ್ಲರನ್ನೂ ಸಸ್ಪೆಂಡ್ ಮಾಡುವ ಕ್ರಮ ಕೈಗೊಂಡರು. ಸರ್ಕಾರ ಸರ್ವಾಧಿಕಾರದಿಂದ ಮಾತ್ರವೇ ಕೆಲಸ ಮಾಡಲು ಸಾಧ್ಯವಿಲ್ಲ ಎಂಬುದನ್ನು ಅವರು ಮರೆತಿದ್ದಾರೆ.

-ದಿ ಹಿಂದೂ ಸ್ತಾನ್ ಟೈಮ್ಸ್

ಕಾಂಗ್ರೆಸ್ ಸಂಸತ್ ಸಭೆಯನ್ನು ಕೇವಲ ಒಂದು ಪ್ರದರ್ಶನ ವಸ್ತುವನ್ನಾಗಿರಿಸಲು ನಿರ್ಧರಿಸಿದಂತಿದೆ ಕಲಾಪಗಳು ಕೇವಲ ವಿಧಿಯಾಗಿ ಉಳಿದಿದೆ. ಜವಾಹರಲಾಲ್ ನೆಹರೂ ಶತಾಬ್ದಿಯ ಸಮಯದಲ್ಲಿಯೇ ಈ ಕಾರ್ಯ ನಡೆಯುತ್ತಿದೆ.

-ದಿ ಸ್ಟೇಟ್ಸ್‌ಮನ್

ಆಳುವ ಸರ್ಕಾರ ತೋರಿದ ಅಸಹನೆ ಹಾಗೂ ಅವಮಾನಕರ ರೀತಿಗಳು ಒಂದು ಸರ್ವಾಧಿಕಾರಿ ಸರ್ಕಾರ ವಾಸ್ತವವನ್ನು ಹಾಗೂ ಜನತೆಯನ್ನು ಎದುರಿಸಲು ಭಯಗೊಂಡಿದೆ ಎಂಬುದನ್ನು ಮಾತ್ರ ತೋರಿಸುತ್ತದೆ.

-ದಿ ಹಿಂದೂ

ದೇಶದ ಘೋಷಣೆ 'ಸತ್ಯಮೇವ ಜಯತೆ'ಯಲ್ಲಿ ಈ ಸರ್ಕಾರಕ್ಕೆ ನಂಬಿಕೆ ಇದೆಯೇ? ಠಕ್ಕರ್ ವರದಿಗೆ ಸಂಬಂಧಿಸಿದಂತೆ ಸರ್ಕಾರದ ವರ್ತನೆ ಆಡಳಿತ ಸರ್ಕಾರದ ನಿರ್ವಹಣೆಯ ಅಧೋಮುಖತೆಯನ್ನು ಎತ್ತಿ ತೋರಿಸುತ್ತದೆ.

-ಡೆಕ್ಕನ್‌ಹೆರಾಲ್ಡ್

ಸಂಸತ್ತಿನಲ್ಲಿ ಈ ವಿಷಯ ಕೋಲಾಹಲಕ್ಕೆಡೆ ಮಾಡಿಕೊಟ್ಟಾಗ ಸರ್ಕಾರದ ಪರ ಗೃಹಸಚಿವ ಬೂಟಾಸಿಂಗ್ ಅವರು ಹೂಡಿದ ಯಾವ ಪತ್ರಿಕಾ ವರದಿಯಲ್ಲಿನ ಮಿಥ್ಯಗಳ ಕಡೆಗೆ ಬೆಳಕು ಚೆಲ್ಲುವುದಕ್ಕಿಂತ ಎದುರಾಳಿಗಳ ಬಾಯಿ ಮುಚ್ಚಿಸುವ ದಾರಿಯನ್ನೇ ಹಿಡಿದು ಸ್ಪಷ್ಟವಾಗಿ ಅರ್ಥವಾಗುತ್ತದೆ.

-ಪ್ರಜಾವಾಣಿ

Printed and published by P. RAMACHANDRA RAO on behalf of Communist Party of India (Marxist), Karnataka State Committee, L-56, K.V. Temple Street, Sulthanpet, Bangalore- 560053. Phone No. 75331 Editor: P. RAMACHANDRA RAO Managing Editor: N.K. UPADHYAYA managerial Office: C/O Kriya Prakashana, Shobha Lodge Complex, 5th Main Road, Gandhinagar, Bangalore-560009